ಡಾ. ಸಿ. ನಾರಾಯಣ ರೆಡ್ಡಿ ಅವರ
ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕೃತಿ

ವಿಶ್ವಂಭರಾ

ಅನುವಾದ

ಮಾರ್ಕಂಡಪುರಂ ಶ್ರೀನಿವಾಸ



ಜ್ಞಾನಪೀಠ ಪ್ರಶಸ್ತಿ ಮಾಲೆ - ೧

ಡಾ. ಸಿ. ನಾರಾಯಣರೆಡ್ಡಿ ಅವರ

ವಿಶ್ವಂಭರಾ

ಭಾರತೀಯ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಮಗ್ರ ಕಾವ್ಯ

ಅನುವಾದ

ಮಾರ್ಕಂಡಪುರಂಶ್ರೀನಿವಾಸ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು - ೫೬೦ ೦೧೮

VISWAMBHARA (Epic Poem) -- A Kannada translation of Telugu Epic poem of **Dr. C. Narayana Reddy**., M.P., Chairman, Andhra Pradesh State Cultural Council, Kalabhavan, Hyderabad - 500 004. Translated by **Markandapuram Sreenivasa** (V. Sreenivasa, M.A.,) Joint Director, Directorate of Kannada and Culture, Kannada Bhavana, J. C. Road, Bangalore - 560 002. Published by V. N. Mallikarjunaswamy, Administrative Officer, Kannada Book Authority, Pampamahakavi Road, Chamarajpet, Bangalore - 560 018.

Page : XXIV + 76

ಮೊದಲ ಮುದ್ರಣ : ಏಪ್ರಿಲ್ 1992
ಎರಡನೆಯ ಮುದ್ರಣ : ಮಾರ್ಚ್ 2001

ಪ್ರತಿಗಳು : 1000

ಬೆಲೆ : ರೂ. 45.00

ಮುಖಪುಟ ವಿನ್ಯಾಸ : ಯು.ಟಿ.ಸುರೇಶ್

ISBN 81-7713-088-9

ಅಕ್ಷರಸೂರ್ಯನಿಗೆ ನಮನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ-ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್‌ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನ ಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ. ಈ ನಿಧಿಯ ರಕ್ಷಣೆ-ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ಅಕ್ಷರನಿಧಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ, ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೇ? ಈ ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶ್ಯವಲ್ಲ. ಪ್ರಕಟಣೆಯ ಜೊತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರದೂರದ ಕತ್ತಲೆಯ ಜಾಗಗಳೂ ಅಜ್ಞಾನವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿಮುಖ್ಯವಲ್ಲವೆ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ-ಗ್ರಾಮಾಂತರಗಳಿಗೂ ತಾಲ್ಲೂಕು-ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು ಅರಳಿಸುವ, ಅಕ್ಷರಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ 'ಕನ್ನಡ ಪುಸ್ತಕ ಪ್ರಾಧಿಕಾರ' ಎಂಬ ಮಾತಿಗೆ ಬೆಲೆ ಬರುತ್ತದೆ; ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು!

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು! ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು' ಎಂದು ಅಲ್ಲಮ ಹೇಳಿದ್ದುಂಟು! ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿರುವ ನಮಗೆ ಹಲವು ಬಗೆಯ ತೊಡಕುಗಳಲ್ಲಿ ಮತ್ತು ಸಂಕಟಗಳಲ್ಲಿ ನಾವಿದ್ದೇವೆ. ಒಂದು ಕಡೆ ಇಪ್ಪತ್ತನೆಯ ಶತಮಾನ ಸಾಹಿತ್ಯಕವಾಗಿ ಸಮೃದ್ಧವಾದ

ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನವ ಕಾಲವೂ ಆಗಿದೆ! ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲ! ಅನೇಕ ತಳವರ್ಗದ ಜನಸ್ತಾನಗಳು ಮೊದಲಬಾರಿಗೆ ಅಕ್ಷರಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸರ್ವಕಾಲವೂ ಹಂಬಲಿಸುವ ಆಶಯ ಆಗಬೇಕು. ಈ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೂ, ರೂಪಕಗಳಲ್ಲೂ ಕಾಣಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ-ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದುವು. ೧೮೩೦ರಲ್ಲಿ ಅತ್ಯುತ್ತಮ ತಾಂತ್ರಿಕ ಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆಡಂ ವರದಿಗಳು ತಿಳಿಸುತ್ತವೆ. ಆದರೆ ನಾವಿಂದು ಈ ಬಗೆಯ ಸ್ಮೃತಿಗಳಿಂದ ದೂರಗುಳಿದಿದ್ದೇವೆ. ನಮ್ಮ ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನ ಕೌಶಲ್ಯ, ಜ್ಞಾನ ಸಂಪತ್ತನ್ನು - ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ, ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದೂ ಬರುವ ಕಾಲ ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೂ ತಿಳಿಯುವ ಕ್ಲೈಬ್ಯದಲ್ಲಿ ನಾವು ಮುಳುಗಬೇಕಾಗುತ್ತದೆ! ಈ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಬಗೆಯ ಮಾಲೆಗಳನ್ನು ಹಿಂದಿನ ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ನಡೆಸಿಕೊಂಡು ಬರುತ್ತಿದೆ. ಹೊಸ ಹೊಸ ಮಾಲೆಗಳು ಈಗೀಗ ಅಸ್ತಿತ್ವಕ್ಕೆ ಬರುತ್ತಿವೆ. ನಮ್ಮ ಹೊಸ ಓದು, ಹೊಸ ನುಡಿಗಟ್ಟು, ಹೊಸ ಸಂವೇದನೆಗಳು ಸಹಸ್ರಮಾನದ ಉದಯಕ್ಕೆ ಸಜ್ಜುಗೊಳ್ಳುವ ಅಗತ್ಯವಿದೆಯೆಂದು ಪುಸ್ತಕ ಪ್ರಾಧಿಕಾರವು ತಿಳಿಯುತ್ತದೆ!

ಕನ್ನಡ ಪುಸ್ತಕ ಪ್ರಾಧಿಕಾರವು 'ಜ್ಞಾನಪೀಠ ಪ್ರಶಸ್ತಿ ಮಾಲೆ'ಯನ್ನು ಬಹು ಹಿಂದೆ ಪ್ರಾರಂಭಗೊಳಿಸಿತ್ತು. ಈ ಮಾಲೆಯಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದ ಭಾರತೀಯ ಲೇಖಕರ ಉತ್ತಮ ಕೃತಿಗಳನ್ನು ಕನ್ನಡಕ್ಕೆ ತರುವ ಹಂಬಲವನ್ನೂ ಹೊತ್ತಿತ್ತು. ಆ ಮಾಲೆಯಲ್ಲಿ 'ವಿಶ್ವಂಭರಾ' ಅನುವಾದಿತ ಸಮಗ್ರಕಾವ್ಯವು ಪ್ರಕಟವಾಗುತ್ತಿದೆ. ದಕ್ಷಿಣ ದೇಶದ ಸೋದರ ಭಾಷೆಗಳಿಂದ ನಾವು ಪಡೆಯುವ ಹಾಗೂ ನೀಡುವ ಪ್ರಕ್ರಿಯೆ ಇನ್ನೂ ಸಬಲಗೊಂಡಿಲ್ಲ. ಕಾದಂಬರಿ ಮತ್ತು ಸಣ್ಣಕತೆಗಳ ಪ್ರಕಾರಗಳು ಆ ಭಾಷೆಗಳಿಂದ ಕನ್ನಡಕ್ಕೆ ಸಾಕಷ್ಟು ಬಂದಿವೆ.

ಆದರೆ ಕವಿತೆಗಳು ಕನ್ನಡಕ್ಕೆ ಒದಗಿ ಬಂದಿಲ್ಲ. ಆಧುನಿಕಪೂರ್ವ ತಮಿಳು, ಮಲೆಯಾಳಂ ಮತ್ತು ತೆಲುಗಿನ ಕೃತಿಗಳು ಕನ್ನಡಕ್ಕೆ ಹೆಚ್ಚು ಹೆಚ್ಚಾಗಿ ಬರಬೇಕಾಗಿವೆ. ಆಧುನಿಕ ಮತ್ತು ಆಧುನಿಕೋತ್ತರ ಕವಿತೆಗಳ ವಿವಿಧ ಮಾದರಿಗಳು ಕನ್ನಡಕ್ಕೆ ಕನ್ನಡಿಗಳಾಗಿ ಬರಬೇಕಾಗಿವೆ. ಆದರೆ, ಈಚಿನ ದಿನಗಳಲ್ಲಿ ಅಲ್ಲೊಂದು ಇಲ್ಲೊಂದು ಪ್ರಕಟಗೊಳ್ಳುತ್ತಿದ್ದರೂ ಇನ್ನೂ ಏನೇನೂ ಸಾಲದು!

ಡಾ. ಸಿ. ನಾರಾಯಣ ರೆಡ್ಡಿ ಅವರ 'ವಿಶ್ವಂಭರಾ' ಜ್ಞಾನಪೀಠ ಪ್ರಶಸ್ತಿ ಪಡೆದ ಸಮಗ್ರಕಾವ್ಯ. ಅವರು ತೆಲುಗಿನ ಬಹು ಜನಪ್ರಿಯ ಕವಿ. ಅವರ ಕವಿತೆಗಳನ್ನು ಹಾಡುಗಳನ್ನು ಕೇಳದ ತೆಲುಗರಿಲ್ಲ. ದಕ್ಷಿಣ ಭಾಷೆಗಳಲ್ಲಿ ಇಷ್ಟು ಜನಪ್ರೀತಿ ಪಡೆದ ಕವಿಗಳು ತೀರ ತೀರ ಕಡಮೆ. ತೆಲುಗು ಬಹು ಹಿತವಾದುದು. ಅದು ಮೃದು-ಮಧುರ ಶಬ್ದಾರ್ಥಗಳಿಂದ ಸಂಪುಷ್ಟಗೊಂಡದ್ದು. ತೆಲುಗು ಕಾವ್ಯಭಾಷೆಯು ಕೋಮಲ- ಸುಕೋಮಲ ಭಾವಗಳನ್ನು ಅದ್ಭುತವಾಗಿ ಪ್ರಕಟಗೊಳಿಸುತ್ತದೆ. ಸಿ. ನಾರಾಯಣ ರೆಡ್ಡಿ ಅವರ ಕವಿತೆಗಳು ಭಾವನಾತ್ಮಕ ಬಂಧಗಳಿಂದ ಕೂಡಿ, ಗೇಯತೆಯ ನೆಲೆಯಿಂದ ಹೃದ್ಯಗೊಳ್ಳುತ್ತವೆ. ಮಾರ್ಕಂಡಪುರಂ ಶ್ರೀನಿವಾಸ್ ೧೯೯೨ ರಲ್ಲಿ ಈ ಸಂಕಲನವನ್ನು ಸಿದ್ಧಪಡಿಸಿ ಹೊರತಂದಿದ್ದರು. ಮರಳಿ ಈಗ ಪುಸ್ತಕ ಪ್ರಾಧಿಕಾರವು ಪುನರ್ಮುದ್ರಣದ ಆವೃತ್ತಿಯನ್ನು ಹೊರತರುತ್ತಿದೆ. ಶ್ರೀ ಮಾರ್ಕಂಡಪುರಂ ಶ್ರೀನಿವಾಸ್ ತೆಲುಗು ಮತ್ತು ಕನ್ನಡವನ್ನು ಬಲ್ಲವರು. ಅವರು ತೆಲುಗು ಗೇಯತೆಯ ಮಾಧುರ್ಯಕ್ಕೆ ಮನಸೋತವರು. ಅವರ ಅನುವಾದವು ಎರಡು ಭಾಷೆಗಳ ಕವಿತೆಯ ನೇಯ್ಗೆಯ ಸೂಕ್ಷ್ಮತೆಯಲ್ಲಿ ಹದಗೊಂಡಿದೆ. ಸಿ. ನಾರಾಯಣ ರೆಡ್ಡಿ ಅವರು ಕನ್ನಡದ ಕನ್ನಡಿಯಲ್ಲಿ ಮಾರ್ಪೊಳೆದಿದ್ದಾರೆ.

ಅನುವಾದಕರ ಮಾತು

ಭಾರತೀಯ ಜ್ಞಾನಪೀಠ ಪ್ರಶಸ್ತಿ ಪಡೆದ ತೆಲುಗು ಸಾರಸ್ವತ ಲೋಕದ ದಿಗ್ಗಜರಲ್ಲಿ ಎರಡನೆಯವರು ತೆಲುಗಿನ ಜನಪ್ರಿಯ ಕವಿ ಪದ್ಮಭೂಷಣ ಡಾ. ಸಿ. ನಾರಾಯಣರೆಡ್ಡಿ ಅವರು. ಇವರು ತೆಲುಗಿನ ಸಾಹಿತ್ಯ ಕ್ಷೇತ್ರ ಹಾಗೂ ಚಲನಚಿತ್ರ ರಂಗಗಳೆರಡರಲ್ಲೂ ಅತ್ಯಂತ ಜನಪ್ರಿಯರು. 'ಸಿನಾರೆ' ಇವರ ಕಾವ್ಯನಾಮ ಮತ್ತು ಸಂಕ್ಷಿಪ್ತ ನಾಮ. ಡಾ. ರೆಡ್ಡಿ ಅವರು ತೆಲುಗು ಸಾಹಿತ್ಯವನ್ನು ವಿಶ್ವಮಟ್ಟಕ್ಕೇರಿಸಿದ ಮಹಾವ್ಯಕ್ತಿ : ಶಕ್ತಿ. ಇವರು ಕಾವ್ಯ, ನಾಟಕ, ವಿಮರ್ಶೆ, ಪ್ರಬಂಧ, ಅನುವಾದ ಮೊದಲಾಗಿ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಅದ್ಭುತ ಕೃಷಿ ಮಾಡಿ, ಸುಮಾರು ಅರವತ್ತು ಗಣನೀಯ ಕೃತಿರತ್ನಗಳನ್ನು ರಚಿಸಿ, ತೆಲುಗು ಸಾರಸ್ವತ ಲೋಕದ ಶ್ರೇಷ್ಠತೆಯನ್ನು ಹೆಚ್ಚಿಸಿದ್ದಾರೆ. ಅಲ್ಲದೆ, ಸುಮಾರು ಮೂರು ಸಾವಿರ ಚಲನ ಚಿತ್ರಗೀತೆಗಳನ್ನು ರಚಿಸಿ ತೆಲುಗು ಚಲನಚಿತ್ರ ರಂಗದ ಔನ್ನತ್ಯವನ್ನು ವೃದ್ಧಿಸಿದ್ದಾರೆ. ವೃತ್ತಿಯಲ್ಲಿ ಅಧ್ಯಾಪಕರಾಗಿ, ವಿಶ್ವವಿದ್ಯಾಲಯಗಳ ಉಪಕುಲಪತಿಯಾಗಿ, ನಾಡು-ನುಡಿ, ಸಾಂಸ್ಕೃತಿಕ ಸಂಬಂಧಗಳ ಪದಾಧಿಕಾರಿಯಾಗಿ, ಪ್ರತಿನಿಧಿಯಾಗಿ, ಸಲಹೆಗಾರರಾಗಿ ನಾಡಿನ-ರಾಷ್ಟ್ರದ-ವಿಶ್ವದ ಮಹತ್ವದ ಗಣ್ಯ ವ್ಯಕ್ತಿಯಾಗಿದ್ದಾರೆ.

ಡಾ. ಸಿ. ನಾರಾಯಣರೆಡ್ಡಿ ಅವರು ತೆಲಂಗಾಣದ ಕರೀಂನಗರ ಜಿಲ್ಲೆಯ ಸಿರಿಸಿಲ್ಲಾ ತಾಲ್ಲೂಕಿನ ಹನುಮಾಜಿಪೇಟ ಎಂಬ ಗ್ರಾಮದಲ್ಲಿ ರೈತ ಕುಟುಂಬದ ಶ್ರೀಮತಿ ಬುಚ್ಚಮ್ಮ ಮತ್ತು ಶ್ರೀ ಸಿಂಗಿರೆಡ್ಡಿ ಮಲ್ಲಾರೆಡ್ಡಿ ದಂಪತಿಗಳ ಸುಪುತ್ರರಾಗಿ ೧೯೩೧ರ ಜುಲೈ ೨೯ರಂದು ಜನಿಸಿದರು. ಅವರ ಬಾಲ್ಯದ ದಿನಗಳು ಗ್ರಾಮಾಂತರದ 'ಹನುಮಾಜಿಪೇಟ'ದಲ್ಲೇ ಕಳೆದವು. ಮೂರನೆಯ ತರಗತಿವರೆಗಿನ ವಿದ್ಯಾಭ್ಯಾಸವನ್ನು ಹನುಮಾಜಿಪೇಟೆಯಲ್ಲಿ ನಡೆಸಿದ ಡಾ. ರೆಡ್ಡಿ ಅವರು ತಮ್ಮ ಹನ್ನೊಂದನೆಯ ವಯಸ್ಸಿಗೆ ತಾಲ್ಲೂಕು ಕೇಂದ್ರವಾದ ಸಿರಿಸಿಲ್ಲಾದ ಮಾಧ್ಯಮಿಕ ಶಾಲೆಯಲ್ಲಿ ನಾಲ್ಕನೆಯ ತರಗತಿಗೆ ಉರ್ದು ಮಾಧ್ಯಮದಲ್ಲಿ ಸೇರಿಧರು. ಅಲ್ಲೇ ಏಳನೆಯ ತರಗತಿಯವರೆಗೆ ಓದಿದ ಅವರು ಎಂಟನೆಯ ತರಗತಿಯಿಂದ ಹತ್ತನೆಯ ತರಗತಿವರೆಗೆ ಅಂದರೆ ೧೯೪೮ರಲ್ಲಿ ನಿಜಾಂ ರಾಜ್ಯದ ಮೇಲೆ ಪೋಲೀಸ್ ಆಕ್ಷನ್ ಜರುಗುವ ತನಕ ಜಿಲ್ಲಾ ಕೇಂದ್ರವಾದ ಕರೀಂನಗರ್‌ನಲ್ಲಿ ವಿದ್ಯಾಭ್ಯಾಸ ಮಾಡಿದರು. ೧೯೪೮ರಲ್ಲಿ ಹೆಚ್‌ಎಸ್‌ಸಿಯಲ್ಲಿ ತೇರ್ಗಡೆಯಾದ ಅವರು ಅದೇ ವರ್ಷದ ಕಡೆಯ

ಭಾಗದಲ್ಲಿ ಹೈದರಾಬಾದ್‌ಚಾದರಘಾಟ್ ಕಲಾಶಾಲೆಯಲ್ಲಿ ಇಂಟರ್ ಮೀಡಿಯಟ್‌ಗೆ ಸೇರಿ ೧೯೪೯ರಲ್ಲಿ ಇಂಟರ್‌ಮೀಡಿಯಟ್ ಪಾಸಾದರು. ೧೯೫೨ರಲ್ಲಿ ಹೈದರಾಬಾದ್ ಆರ್ಟ್ಸ್ ಕಾಲೇಜಿನಲ್ಲಿ ಬಿ.ಎ., ಪದವಿಯನ್ನು ೧೯೫೪ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ತೆಲುಗು ಎಂ.ಎ., ಪದವಿಯನ್ನು ಪಡೆದರು. ನಂತರ "ಆಧುನಿಕಾಂಧ್ರ ಕವಿತ್ವಮು: ಸಂಪ್ರದಾಯಮುಲು-ಪ್ರಯೋಗಮುಲು" ಎಂಬ ವಿಷಯದ ಮೇಲೆ ಸಂಶೋಧನೆ ಮಾಡಿ ೧೯೬೨ರಲ್ಲಿ ಪಿಹೆಚ್.ಡಿ., ಪದವಿಯನ್ನು ಪಡೆದರು.

ಡಾ. ಸಿ. ನಾರಾಯಣರೆಡ್ಡಿ ಅವರು ೧೯೫೪ರಲ್ಲಿ ಸಿಕಂದರಾಬಾದಿನ ಕಲೆ ಮತ್ತು ವಿಜ್ಞಾನ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇರಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. ೧೯೫೮- ೫೯ರಲ್ಲಿ ನಿಜಾಂ ಕಲಾಶಾಲೆಯಲ್ಲಿ ಕೆಲಸ ಮಾಡಿದ ಅವರು ಪಿಹೆಚ್.ಡಿ., ಪದವಿ ಪಡೆದ ತರುವಾಯ ೧೯೬೩ರಲ್ಲಿ ಹೈದರಾಬಾದ್ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ತೆಲುಗು ರೀಡರ್ ಆಗಿ ಸೇರಿ, ೧೯೭೬ರಲ್ಲಿ ಪ್ರಾಧ್ಯಾಪಕರಾಗಿ ೧೯೮೧ರವರೆಗೆ ಅಲ್ಲಿ ಸೇವೆ ಸಲ್ಲಿಸಿದರು. ೧೯೮೧ರಲ್ಲಿ ಆಂಧ್ರಪ್ರದೇಶ ಸರ್ಕಾರದ ಅಧಿಕಾರ ಭಾಷಾ ಸಂಘದ (ಕರ್ನಾಟಕದಲ್ಲಿ ಕನ್ನಡ ಕಾವಲು ಸಮಿತಿ ಇದ್ದಂತೆ) ಅಧ್ಯಕ್ಷರಾಗಿ ೧೯೮೫ರವರೆಗೆ ಸದರಿ ಪದವಿಯಲ್ಲಿ ಸೇವೆ ಸಲ್ಲಿಸಿದರು. ೧೯೮೫ರಲ್ಲಿ ಆಂಧ್ರಪ್ರದೇಶದ ಮುಕ್ತ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ, ೧೯೮೯ರ ನಂತರ ತೆಲುಗು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ, ೧೯೯೩ರಿಂದ ಆಂಧ್ರಪ್ರದೇಶದ ಸರ್ಕಾರದ ಸಂಸ್ಕೃತಿ ಮತ್ತು ಭಾಷಾ ಸಲಹೆಗಾರರಾಗಿ ಸೇವೆ ಸಲ್ಲಿಸಿದ ಇವರು ಪ್ರಸ್ತುತ ಆಂಧ್ರಪ್ರದೇಶ ರಾಜ್ಯದ ಸಾಂಸ್ಕೃತಿಕ ಮಂಡಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ ಮತ್ತು ರಾಜ್ಯ ಸಭಾ ಸದಸ್ಯರೂ ಆಗಿದ್ದಾರೆ.

ಡಾ. ಸಿ. ನಾರಾಯಣರೆಡ್ಡಿ ಅವರು ಜನಪ್ರಿಯ ಕವಿಯಾಗಿ, ಚಲನಚಿತ್ರ ಗೀತ ರಚನಕಾರರಾಗಿ, ಅಧ್ಯಾಪಕರಾಗಿ, ಪರಿಶೋಧಕರಾಗಿ, ಗಾಯಕರಾಗಿ, ದಕ್ಷ ಆಡಳಿತಗಾರರಾಗಿ ನಾಡು-ನುಡಿ ಮತ್ತು ಸಂಸ್ಕೃತಿಗಳಿಗೆ ಅಪಾರ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ತಾವು ತಮ್ಮ ಬಿ.ಎ., ಪದವಿ ತನಕ ಉರ್ದು ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿದ್ದರೂ ಡಾ. ರೆಡ್ಡಿ ಅವರಿಗೆ ತಮ್ಮ ಬಾಲ್ಯದಿಂದಲೇ ಗ್ರಾಮೀಣಪರಿಸರದಲ್ಲಿ ಹರಿಕಥೆ, ಬೀದಿನಾಟಕ, ಜನಪದ ಗೀತೆಗಳನ್ನು ಕೇಳಿ ನೋಡಿ ಕಲಿತ ತೆಲುಗು ಭಾಷೆಯೇ ಕರಗತವಾಗಿದೆ. ಹೀಗಾಗಿ ಅವರಿಗೆ ಆಶುಗುಣ ಮತ್ತು ಗಾಯನ ಪ್ರವೃತ್ತಿಗಳು ಸಹಜವಾಗಿ ಮೈಗೂಡಿ ಬಂದಿವೆ. ಡಾ. ರೆಡ್ಡಿ ಅವರು ತಾವು ಹತ್ತನೆಯ ತರಗತಿಯಲ್ಲಿ ಓದುವ ಕಾಲಕ್ಕೇ ಕಾವ್ಯರಚನೆ ಮಾಡತೊಡಗಿದರು.

ಇವರ ಮೊದಲ ಕೃತಿ 'ನವ್ವನಿ ಪುವ್ವು' (ನಗದ ಹೂವು) ಗೀತನಾಟಕ ೧೯೫೩ರಲ್ಲಿ ಪ್ರಕಟವಾಗಿದ್ದರೂ ೧೯೫೨ರಲ್ಲಿ ಪ್ರಕಟವಾದ ನಾರಾಯಣರೆಡ್ಡಿ ಅವರೂ ಸೇರಿದಂತೆ ಆರು ಮಂದಿ ಸಹಕವಿಗಳ ಒಟ್ಟು ೪೯ ಕವಿತೆಗಳನ್ನೊಳಗೊಂಡ 'ಪೂಲಪಾಟಲು' (ಹೂವಿನ ಹಾಡುಗಳು) ಕವನ ಸಂಕಲನದಲ್ಲಿ ಇವರ ೧೬ ಕವನಗಳು ಸೇರಿವೆ. ಡಾ. ರೆಡ್ಡಿ ಅವರ 'ಋತುಚಕ್ರಂ' (೧೯೬೪) ಗೇಯಕಾವ್ಯ ಕೃತಿಗೆ ೧೯೬೫ ಆಂಧ್ರಪ್ರದೇಶ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. 'ಮಂಟಲೂ-ಮಾನವುಡೂ', (ಜ್ವಾಲೆಗಳು ಮತ್ತು ಮಾನವ) (೧೯೭೦) ಕವನ ಸಂಕಲನಕ್ಕೆ ೧೯೭೪ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. 'ವಿಶ್ವಂಭರ' (೧೯೮೦) ಸಮಗ್ರ ಕಾವ್ಯಕೃತಿಗೆ ೧೯೮೧ರಲ್ಲಿ ಕಲ್ಕತ್ತದ ಭಾರತೀಯ ಭಾಷಾ ಪರಿಷತ್ತಿನ 'ಭಿಲ್ವಾರಾ ಪ್ರಶಸ್ತಿ', ೧೯೮೨ರಲ್ಲಿ ತ್ರಿವೇಂಡ್ರಂನ 'ಕುಮಾರನ್ ಆಸಾನ್ ಪ್ರಶಸ್ತಿ', ೧೯೮೨ರಲ್ಲಿ ಸೋವಿಯಟ್ ಲ್ಯಾಂಡ್ ನೆಹರೂ ಪ್ರಶಸ್ತಿ ('ಎ' ಶ್ರೇಣಿ) ಹಾಗೂ ೧೯೮೮ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿ ಲಭಿಸಿವೆ.

ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ೧೯೫೪ರಲ್ಲಿ ತೆಲುಗು ಎಂ.ಎ., ಪದವಿಯನ್ನು ಪಡೆದ ಡಾ. ಸಿ. ನಾರಾಯಣರೆಡ್ಡಿ ಅವರು ನಂತರ 'ಆಧುನಿಕಾಂಧ್ರ ಕವಿತ್ವಮು', 'ಸಂಪ್ರದಾಯಮುಲು-ಪ್ರಯೋಗಮುಲು' ಎಂಬ ವಿಷಯದ ಮೇಲೆ ಸಂಶೋಧನೆ ಮಾಡಿ ೧೯೬೨ರಲ್ಲಿ ಪಿಹೆಚ್.ಡಿ., ಪದವಿಯನ್ನು ಪಡೆದ ಮೇಲೆ ಅವರಿಗೆ ೧೯೭೬ರಲ್ಲಿ ಮೀರತ್ ವಿಶ್ವವಿದ್ಯಾಲಯ (ಯು.ಪಿ.) ಗೌರವ ಡಾಕ್ಟರೇಟ್ (ಡಿ.ಲಿಟ್.,) ಅನ್ನು, ೧೯೭೭ರಲ್ಲಿ ಭಾರತ ಸರ್ಕಾರ 'ಪದ್ಮಶ್ರೀ' ಪ್ರಶಸ್ತಿಯನ್ನು, ೧೯೭೮ರಲ್ಲಿ ಆಂಧ್ರ ವಿಶ್ವವಿದ್ಯಾಲಯ (ವಾಲ್ಟೇರ್) ಗೌರವ ಡಾಕ್ಟರೇಟ್ (ಕಳಾಪ್ರಪೂರ್ಣ) ಅನ್ನು, ೧೯೮೪ರಲ್ಲಿ ನಾಗಾರ್ಜುನ ವಿಶ್ವವಿದ್ಯಾಲಯ (ಗುಂಟೂರು) ಗೌರವ ಡಾಕ್ಟರೇಟ್ (ಡಾಕ್ಟರ್ ಆಫ್ ಲೆಟರ್ಸ್) ಅನ್ನು, ೧೯೮೭ರಲ್ಲಿ ನವದೆಹಲಿಯಲ್ಲಿ ಕೇಂದ್ರದ ಸೌಹಾರ್ದತಾ ಪ್ರಶಸ್ತಿಯನ್ನು, ೧೯೮೮ರಲ್ಲಿ ತೆಲುಗು ಸಾಹಿತ್ಯಕ್ಕೆ ಗಣನೀಯ ಸೇವೆ ಸಲ್ಲಿಸಿದ್ದಕ್ಕಾಗಿ ಶ್ರೀ ರಾಜಲಕ್ಷ್ಮಿ ಪ್ರಶಸ್ತಿಯನ್ನು, ೧೯೮೮ರಲ್ಲಿ ಕಾಕತೀಯ ವಿಶ್ವವಿದ್ಯಾಲಯ (ವಾರಂಗಲ್) ಗೌರವ ಡಾಕ್ಟರೇಟ್ ಅನ್ನು, ೧೯೯೨ರಲ್ಲಿ ಭಾರತ ಸರ್ಕಾರ 'ಪದ್ಮಭೂಷಣ' ಪ್ರಶಸ್ತಿಯನ್ನು ನೀಡಿ ಗೌರವಿಸಿವೆ. ಅಷ್ಟೇ ಅಲ್ಲದೆ ದೇಶವಿದೇಶಗಳ ಅನೇಕ ಸಂಘ-ಸಂಸ್ಥೆಗಳು ಅವರನ್ನು ಸನ್ಮಾನಿಸಿ ಪ್ರಶಸ್ತಿ ಬಿರುದುಗಳನ್ನು ನೀಡಿ ಗೌರವಿಸಿರುತ್ತವೆ.

ಡಾ. ಸಿ. ನಾರಾಯಣರೆಡ್ಡಿ ಅವರು ಆಧುನಿಕ ತೆಲುಗು ಸಾರಸ್ವತ ಲೋಕದಲ್ಲಿ ಅಗ್ರಮಾನ್ಯರು ಮಾತ್ರವಲ್ಲ, ತೆಲುಗು ಚಲನಚಿತ್ರರಂಗದಲ್ಲಿ ಚಲನಚಿತ್ರಗೀತೆಗಳ ರಚನಾಕಾರರಾಗಿ ಅಪಾರ ಹೆಸರು ಸಂಪಾದಿಸಿದ್ದಾರೆ. ೧೯೬೧ರಲ್ಲಿ ಪ್ರಾರಂಭವಾದ

ಅವರ ಚಲನಚಿತ್ರಗೀತ ರಚನಾ ಕೃಷಿ ಇಂದಿಗೂ ಸಾಗಿದೆ. ಈವರೆಗೆ ಮೂರು ಸಾವಿರಕ್ಕೂ ಮಿಗಿಲಾಗಿ ಚಿತ್ರಗೀತೆಗಳನ್ನು ರಚಿಸಿದ ಕೀರ್ತಿ ಅವರದಾಗಿದೆ. ಅವರ ಅನೇಕ ಚಿತ್ರಗೀತೆಗಳಿಗೆ ಬಹುಮಾನ, ಪ್ರಶಸ್ತಿಗಳು ಬಂದಿವೆ. ೧೯೬೧ರಲ್ಲಿ ತೆಲುಗಿನ ಜನಪ್ರಿಯ ಚಿತ್ರನಟ ಹಾಗೂ ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿ 'ನಟರತ್ನ' ಡಾ. ಎನ್. ಟಿ. ರಾಮರಾವು ಅವರ 'ಗುಲೇಬಕಾವಲಿ ಕಥಾ' ಚಲನಚಿತ್ರಕ್ಕೆ ಚಿತ್ರಗೀತೆಗಳನ್ನು ಬರೆಯುವ ಮೂಲಕ ಚಿತ್ರರಂಗಕ್ಕೂ ಪ್ರವೇಶ ಮಾಡಿದರು. ಡಾ. ರೆಡ್ಡಿ ಅವರು ಆ ಕಾಲಕ್ಕೇ 'ನವ್ವನಿಪುವ್ವ' ನಂಥ ಸುಂದರ ಗೀತನಾಟಕಗಳನ್ನು 'ವಿಶ್ವನಾಥನಾಯಿಡು', 'ನಾಗಾರ್ಜುನ ಸಾಗರಂ' ನಂಥ ಗೇಯ ಕಾವ್ಯಗಳನ್ನು ರಚಿಸಿದ್ದು, ಆಂಧ್ರದಲ್ಲಿ ಅನೇಕ ಕಡೆ ಕಾವ್ಯವಾಚನ ಮಾಡಿ ಹೆಸರುಗಳಿಸಿದ್ದರು. ಆ ಕಾಲಕ್ಕೇ ಇವರ ಜನಪ್ರಿಯತೆಯನ್ನು ಗುರುತಿಸಿ ಅದರಲ್ಲೂ 'ವಿಶ್ವನಾಥ ನಾಯಿಡು' ಕೃತಿಯನ್ನು ಮೆಚ್ಚಿ ಸ್ವತಃ ಡಾ. ಎನ್. ಟಿ. ರಾಮರಾವು ಅವರೇ ಡಾ. ರೆಡ್ಡಿ ಅವರನ್ನು ತಮ್ಮ ಚಲನಚಿತ್ರಗಳಿಗೆ ಚಿತ್ರಗೀತೆಗಳನ್ನು ರಚಿಸಲು ಆಹ್ವಾನಿಸಿದರು. ಹೀಗಾಗಿ ರಾಮರಾವು ಅವರ 'ಗುಲೇಬಕಾವಲಿಕಥಾ' ಚಲನಚಿತ್ರಕ್ಕೆ ಎಲ್ಲಾ ಹಾಡುಗಳನ್ನು ರಚಿಸುವ ಮೂಲಕ ಅವರು ಚಲನಚಿತ್ರರಂಗವನ್ನು ಪ್ರವೇಶಿಸಿದರು.

ತೆಲುಗಿನಲ್ಲಿ ಪ್ರಥಮ ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಡಾ. ವಿಶ್ವನಾಥ ಸತ್ಯನಾರಾಯಣ ಅವರು ಶ್ರೇಷ್ಠ ಕವಿ ಮಾತ್ರವಲ್ಲ ಜನಪ್ರಿಯ ಕಾದಂಬರಿಕಾರರೂ ಹೌದು. ಇವರ ಕಾದಂಬರಿಗಳಲ್ಲಿ 'ಏಕವೀರ' ತುಂಬಾ ಜನಪ್ರಿಯವಾದದ್ದು. ಇದು ಚಲನಚಿತ್ರವಾಗಿಯೂ ಅಪಾರ ಜನಪ್ರಿಯತೆ ಗಳಿಸಿದೆ. ಈ ಚಿತ್ರಕ್ಕೆ ಚಿತ್ರಕಥೆಯನ್ನು ಹಾಡುಗಳನ್ನೂ ತೆಲುಗಿನ ದ್ವಿತೀಯ ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಡಾ. ಸಿ. ನಾರಾಯಣರೆಡ್ಡಿ ಅವರು ಬರೆದಿದ್ದಾರೆ. ಇದೊಂದು ಆಕಸ್ಮಿಕವೂ, ಅಪೂರ್ವ ಸಂಗತಿಯೂ ಆಗಿದೆ.

ಡಾ. ರೆಡ್ಡಿ ಅವರು ತೆಲುಗು ಚಲನಚಿತ್ರಗಳಿಗೆ ತಮ್ಮ ಬಹುಮುಖ ಪ್ರತಿಭೆಯಿಂದ ಸೊಗಸಾದ ಚಿತ್ರಗೀತೆಗಳನ್ನು ಬರೆದಿದ್ದಾರೆ. ಇವರ ಚಿತ್ರಗೀತೆಗಳಲ್ಲಿ ಪ್ರಣಯ ಗೀತೆಗಳು, ಜನಪದ ಗೀತೆಗಳು, ಪ್ರಕೃತಿ ಗೀತೆಗಳು, ದೇಶಭಕ್ತಿ ಗೀತೆಗಳು, ವಿಷಾದ ಗೀತೆಗಳು, ಭಕ್ತಿಗೀತೆಗಳು, ನೀತಿ ಗೀತೆಗಳು ಹೀಗೆ ಹಲವು ಹತ್ತು ಬಗೆಗಳಿವೆ. ಡಾ. ರೆಡ್ಡಿ ಅವರು ಮೂಲತಃ ವೃತ್ತಿಯಲ್ಲಿ ಕಾಲೇಜ್ ಅಧ್ಯಾಪಕರು, ಆದರೆ ಹುಟ್ಟು ಕವಿ. ತೆಲುಗಿನ ಶ್ರೇಷ್ಠ ಕವಿಯಾಗಿದ್ದು, ಚಿತ್ರರಂಗ ಪ್ರವೇಶಿಸಿ ಹೇರಳವಾಗಿ ಚಿತ್ರಗೀತೆಗಳನ್ನು ಬರೆದರೂ ತಮ್ಮನ್ನು ಅಲ್ಲಿಯೇ ಶಾಶ್ವತವಾಗಿ ಮುದ್ರೆ ಹಾಕಿಕೊಂಡಿಲ್ಲ. ಅವರು ಎಷ್ಟೇ ಚಿತ್ರಗೀತೆಗಳನ್ನು ಬರೆದರೂ ಸೃಜನಶೀಲ ಕವಿಯಾಗಿ ತಮ್ಮ ಮೂಲಸತ್ವವನ್ನು ಕಳೆದುಕೊಂಡಿಲ್ಲ. ಎರಡೂ ಕಡೆ ತಮ್ಮತನವನ್ನು

ಪ್ರತ್ಯೇಕವಾಗಿ ಉಳಿಸಿಕೊಂಡಿದ್ದಾರೆ. ಇವರಲ್ಲಿ ತೆಲುಗಿನ ಸಾರಸ್ವತ ಲೋಕ, ಚಲನಚಿತ್ರ ಪ್ರಪಂಚಗಳು ಪರಸ್ಪರ ಸಮಾನಾಂತರವಾಗಿ ಪ್ರತ್ಯೇಕವಾಗಿ ಸಾಗಿವೆಯೆಂದೇ ಹೇಳಬೇಕು. ಒಂದು ಕಡೆ ಚಲನಚಿತ್ರ ರಂಗದಲ್ಲಿ ಅತ್ಯಧಿಕ ಚಿತ್ರಗೀತೆಗಳನ್ನು ರಚಿಸಿರುವ ಡಾ. ರೆಡ್ಡಿ ಅವರು ಮತ್ತೊಂದು ಕಡೆ ಕವಿಯಾಗಿಯೂ ಅತ್ಯಧಿಕ ಕಾವ್ಯಕೃತಿಗಳನ್ನೂ ರಚಿಸಿದ್ದಾರೆ. ಒಂದು ವಿಶೇಷವೆಂದರೆ ತೆಲುಗಿನಲ್ಲಿ ಚಲನಚಿತ್ರಗೀತೆಗಳನ್ನು ಬರೆದ ಬಹುಮಂದಿ, ಮೂಲತಃ ತೆಲುಗು ಸಾರಸ್ವತ ಲೋಕದ ಶ್ರೇಷ್ಠ ಕವಿಗಳೂ ಆಗಿರುವುದು. ಈ ಪೈಕಿ ‘ಶ್ರೀ ಶ್ರೀ’, ‘ಆರುದ್ರ’, ‘ದಾಶರಥಿ’, ‘ಆತ್ರೇಯ’, ‘ಸಮುದ್ರಾಲ’, ‘ಸಿನಾರೆ’ ಮೊದಲಾದವರನ್ನು ಹೆಸರಿಸಬಹುದು. ಇತರೆ ಭಾಷೆಗಳಲ್ಲಿ ಇಂಥ ಸಂದರ್ಭ ತೀರಾ ವಿರಳವೆಂದೇ ಹೇಳಬೇಕು. ಒಂದು ಚಲನಚಿತ್ರದಲ್ಲಿ ಗೀತರಚನಕಾರನ ಸ್ಥಾನಮಾನವೇನು? ಎಂಬ ಪ್ರಶ್ನೆ ಬಂದರೆ ತೆಲುಗಿನ ಈ ಡಾ. ಸಿ. ನಾರಾಯಣರೆಡ್ಡಿ ಅವರ ಸ್ಥಾನಮಾನ ಯಾವ ನಾಯಕ ನಟನ ಸ್ಥಾನಮಾನಕ್ಕಿಂತ ಕಡಿಮೆಯಾಗಿಲ್ಲವೆಂದೇ ಹೇಳಬೇಕು.

ಡಾ. ಸಿ. ನಾರಾಯಣರೆಡ್ಡಿ ಅವರು ಅಧ್ಯಾಪಕರಾಗಿ, ಜನಪ್ರಿಯ ತೆಲುಗು ಕವಿಯಾಗಿ, ರಾಷ್ಟ್ರದ ಸಾಂಸ್ಕೃತಿಕ ರಾಯಭಾರಿಯಾಗಿ ವಿಶ್ವದ ಹಲವು ರಾಷ್ಟ್ರಗಳ ಸಂಘ-ಸಂಸ್ಥೆ ಹಾಗೂ ಸರ್ಕಾರಗಳ ಆಹ್ವಾನದ ಮೇರೆಗೆ ವಿಶ್ವದ ಅನೇಕ ದೇಶಗಳಿಗೆ ಭೇಟಿ ನೀಡಿ, ನಾಡು-ನುಡಿಗೆ ಘನತೆ ಗೌರವಗಳನ್ನು ಹೆಚ್ಚಿಸಿದ್ದಾರೆ. ಇವರು ಈವರೆಗೆ ಮಲೇಷಿಯಾ ಮತ್ತು ಸಿಂಗಾಪೂರ (೧೯೭೬) ರಷ್ಯಾ (೧೯೮೪), ಅಮೇರಿಕಾ (ಚಿಕಾಗೊ) (೧೯೮೧), ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ (ಯು.ಕೆ.) (೧೯೮೫), ಅಮೇರಿಕಾ (ಲಾಸ್ ಏಂಜಲೀಸ್) (೧೯೮೫), ಪೆನ್ನಾಗ್ (೧೯೮೬), ಥೈಲ್ಯಾಂಡ್ (೧೯೮೬) ಕೋಪನ್‌ಹೆಗನ್ (೧೯೮೬), ಮಿಲ್ಟನ್ ಕಿಯಿನ್ಸ್ (Keynes) (ಯು.ಕೆ.) (೧೯೮೭) ಯುಗೋಸ್ಲಾವಿಯಾ (೧೯೯೦), ಮಾರಿಷಸ್ (೧೯೯೦) ಮೊದಲಾದ ದೇಶಗಳಿಗೆ ಭೇಟಿ ನೀಡಿ ಎಲ್ಲೆಡೆ ತಮ್ಮ ವೃತ್ತಿ-ಪ್ರವೃತ್ತಿಗಳ ಪ್ರತಿಭಾ ಕೌಶಲವನ್ನು ಮೆರೆದು ನಾಡು-ನುಡಿಗಳಿಗೆ ನೇರವಾಗಿ ಪರೋಕ್ಷವಾಗಿ ನೆರವಾಗಿದ್ದಾರೆ; ಕೀರ್ತಿ ತಂದಿದ್ದಾರೆ.

ಡಾ. ಸಿ. ನಾರಾಯಣರೆಡ್ಡಿ ಅವರು ತೆಲುಗು ಕಾವ್ಯ ಕ್ಷೇತ್ರದಲ್ಲಿ ೧೯೨೦ರ ವೇಳೆಗೆ ಪ್ರಾರಂಭವಾದ ಕಾವ್ಯ ಪರಂಪರೆ (ಭಾವ ಕವಿತ್ವ) ಯಲ್ಲಿ ಆವಿರ್ಭವಿಸಿದ ಪ್ರಮುಖ ಕವಿ. ಅವರು ಸ್ವೋದಯ ಕಾವ್ಯಪರಂಪರೆಯಲ್ಲಿ ಕಾವ್ಯ ರಚನೆ ಪ್ರಾರಂಭಿಸಿ ಪ್ರಣಯತತ್ವ ಪ್ರತಿಪಾದನೆಯನ್ನು ಸಾರುತ್ತಾ ನಡೆದು, ಮುಂದೆ ಅಭ್ಯುದಯ ಕಾವ್ಯ ಮಾರ್ಗವನ್ನು ಅನುಸರಿಸಿ, ನಂತರ ವಿಪ್ಲವ ಕಾವ್ಯ ತೆಲುಗು ಕಾವ್ಯದ ಮೇಲೆ ತನ್ನ ಪ್ರಭಾವ ಬೀರಿದಾಗ ಅದರಿಂದ ಸ್ವಲ್ಪ ದೂರ ಸರಿದುಕೊಂಡರೂ ಪ್ರಗತಿಪರತ್ವವನ್ನೂ

ಕೈಬಿಡದೆ ತಮ್ಮದೇ ಆದ ನಿಲುವು ತಳೆದು ಮಾನವತಾವಾದವನ್ನು ಪ್ರತಿಪಾದಿಸಿ ಸಮನ್ವಯ ಮಾರ್ಗವನ್ನು ಅನುಸರಿಸಿದ್ದಾರೆ. ತಮ್ಮ ಕಾವ್ಯ ರಚನೆಯಲ್ಲಿ ಸಮನ್ವಯ ಮಾರ್ಗವನ್ನು ಅನುಸರಿಸಿದ ಡಾ. ರೆಡ್ಡಿ ಅವರು ತಮ್ಮ ವಿಮರ್ಶೆಯಲ್ಲಿ 'ಸಮನ್ವಯ ಮಾರ್ಗ' ತತ್ವವನ್ನು "ಮುಂದಿನ ನೋಟವನ್ನು ಕಳೆದುಕೊಂಡ ಗತದೃಷ್ಟಿಯಾಗಲಿ, ಹಿಂದಿನ ನೋಟವನ್ನು ತಿರಸ್ಕರಿಸಿದ ಭವಿಷ್ಯ ದೃಷ್ಟಿಯಾಗಲಿ ಮಾನವ ಪುರೋಭಿವೃದ್ಧಿಗೆ ಬಯಸತಕ್ಕದ್ದಾಗಲಿಲ್ಲವೆಂಬ ಅಭಿಪ್ರಾಯ ದೃಢಪಟ್ಟಿದೆ. ಅಂತರ್ಜಾತೀಯ ರಂಗದಲ್ಲಿನ ಸಹಜೀವನ, ರಾಷ್ಟ್ರೀಯತೆಯಲ್ಲಿ ನೆಹರು ಅವರು ತೋರಿದ 'ಸಮನ್ವಯ ಮಾರ್ಗ' ಈ ತಲೆಮಾರಿನ ಕವಿಗಳನ್ನು ಪ್ರಬಲವಾಗಿ ಆಕರ್ಷಿಸಿದೆ. ತತ್ಫಲವಾಗಿ ಈ ಕಾಲದ ಹಲವು ನವ್ಯ ಕವಿಗಳು ಸಾಹಿತ್ಯ ರಂಗದಲ್ಲಿ ವಿಭಿನ್ನ ದೃಕ್ಪಥಗಳ ಸಮನ್ವಯ ಧೋರಣೆಯನ್ನು ಬಯಸಿದ್ದಾರೆ" ಎಂದು ಪ್ರತಿಪಾದಿಸಿ, ದಾಶರಥಿ, ಸೋಮಸುಂದರ್, ನಾರಾಯಣ ರೆಡ್ಡಿ, ಪುಟಪರ್ತಿ ದುರ್ಗಾನಂದ, ವಿಶ್ವಂ ಮೊದಲಾದ ಕವಿಗಳನ್ನು ಇಲ್ಲಿ ಹೆಸರಿಸಿದ್ದಾರೆ.

ಈ ಸಮನ್ವಯ ಮಾರ್ಗದ ಹುಟ್ಟಿಗೆ ಮೂಲ ಕಾರಣ ಅಂದಿನ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯೇ ಆಗಿದೆ. ಬ್ರಿಟಿಷರ ಆಡಳಿತಕ್ಕೆ ಸೇರಿದ್ದ ಆಂಧ್ರದಲ್ಲಿ ೧೯೫೨ರ ತನಕ ಅಭ್ಯುದಯ ಕಾವ್ಯ ಒಂದು ಉದ್ಯಮವಾಗಿ ಸಾಗಿದೆ. ೧೯೫೫ರ ವೇಳೆಗೆ ಕಮ್ಯೂನಿಷ್ಟ್ ಪ್ರಾಬಲ್ಯ ಕುಸಿದ ನಂತರ ಅದರ ಪ್ರಭಾವ ಕಡಿಮೆಯಾಗಿದೆ. ಆ ಕಾಲಕ್ಕೆ ತೆಲಂಗಾಣ ಹೋರಾಟಕ್ಕೆ ಸಂಬಂಧಪಟ್ಟಂತೆ ಕೆಲವು ಕಾವ್ಯಗಳು ರಚಿತವಾಗಿವೆ. ತೆಲಂಗಾಣವನ್ನು ಬಿಟ್ಟು ಆಂಧ್ರದ ಕಾವ್ಯ ರಚನೆಯಲ್ಲಿ ಒಂದು ವ್ಯವಸ್ಥೆ ಕಂಡುಬರುತ್ತದೆ. ಅದನ್ನು ಮುಖ್ಯವಾಗಿ ಆಧುನಿಕ ಕಾವ್ಯ, ನವ್ಯ ಕಾವ್ಯ, ಭಾವಕಾವ್ಯ, ಅಭ್ಯುದಯ ಕಾವ್ಯ, ದಿಗಂಬರ ಕಾವ್ಯ, ವಿಪ್ಲವ ಕಾವ್ಯ ಎಂದು ಗುರ್ತಿಸಬಹುದು. ಇಲ್ಲಿ ತೆಲಂಗಾಣ ಹಾಗೂ ಆಂಧ್ರ ಸಾಹಿತ್ಯ ರಚನೆಯಲ್ಲಿ ಪರಸ್ಪರ ಭಿನ್ನತೆಯನ್ನು ಕಾಣಬಹುದು. ಆಂಧ್ರದಲ್ಲಿ ಅಭ್ಯುದಯ ಕಾವ್ಯ ಹುಲುಸಾಗಿ ಬೆಳೆಯುತ್ತಿದ್ದ ಕಾಲದಲ್ಲಿ ('ಶ್ರೀ ಶ್ರೀ' ಅಭ್ಯುದಯ ಕಾವ್ಯಕ್ಕೆ ಭಗೀರಥ ಎನ್ನಿಸಿಕೊಂಡಿದ್ದಾರೆ) ತೆಲಂಗಾಣದಲ್ಲಿ ಸಂಪ್ರದಾಯ ಕಾವ್ಯ ರಚನೆ ಕ್ರಮೇಣ ಜಾಗೃತಿ ಪರವಾದ ದೇಶಭಕ್ತಿಯನ್ನು ಸಾರುವ ರಚನೆಯಾಗತೊಡಗಿದೆ. ದೇಶ ರಾಜಕೀಯವಾಗಿ, ಸಾಮಾಜಿಕವಾಗಿ ಮಹತ್ತರ ಬದಲಾವಣೆಗಳನ್ನು ಕಂಡ ಕಾಲಕ್ಕೆ ನಾರಾಯಣ ರೆಡ್ಡಿ, ದಾಶರಥಿ ಮೊದಲಾದ ಕವಿಗಳು ತಮ್ಮದೇ ಆದ ರೀತಿಯಲ್ಲಿ ಬರೆಯಲಾರಂಭಿಸಿದ್ದಾರೆ. ಈ ದಿಸೆಯಲ್ಲಿ ಪ್ರಬಂಧಕಾವ್ಯ, ನವ್ಯಕಾವ್ಯ, ಭಾವಕಾವ್ಯ, ಅಭ್ಯುದಯ ಕಾವ್ಯ ಮೊದಲಾದುವು ಒಟ್ಟಿಗೆ ತಮ್ಮ ಛಾಪು ಮೂಡಿಸಿವೆ. ಮುಖ್ಯವಾಗಿ ಭಾವಕಾವ್ಯ ಮತ್ತು ಅಭ್ಯುದಯ ಕಾವ್ಯಗಳ ರಚನೆಗಳಲ್ಲಿ ಪರಸ್ಪರ ಸಮನ್ವಯ ಕಂಡುಬಂದಿದೆ.

ಡಾ. ಸಿ. ನಾರಾಯಣ ರೆಡ್ಡಿ ಅವರು ಕವಿಯಾಗಿ ಬಾಳ್ತಿಗೆ ಬರುವ ವೇಳೆಗೆ ತೆಲಂಗಾಣದಲ್ಲಿ ಪ್ರಜಾ ಚಳುವಳಿ ಮುಗಿದಿತ್ತು. ಆ ಕಾಲಕ್ಕೆ ನವೋದಯ ಕಾವ್ಯದ (ಭಾವಕಪಿತ್ವ) ಗಾಳಿ ಬೀಸಲಾರಂಭಿಸಿತ್ತು. ಹಾಗಾಗಿ ಅವರು ಪದ್ಯ ರಚನೆ ಅಧಿಕವಾಗಿದ್ದ ಕಾಲದಲ್ಲಿ ಪ್ರೌಢ ಪದ್ಯ ರಚನೆಗಳಲ್ಲಿ ತಮ್ಮ ಸಾಮರ್ಥ್ಯವನ್ನು ನಿರೂಪಿಸುತ್ತಲೇ ಮಾತ್ರಾ ಛಂದಸ್ಸಿನ ಗೇಯ ರಚನೆಯಲ್ಲಿ ಹೊಚ್ಚ ಹೊಸ ಪ್ರಯೋಗಗಳನ್ನು ಮಾಡಿದರು. ಪದ್ಯವೇ ಪ್ರಧಾನವಾಗಿದ್ದ ಆ ಕಾಲಕ್ಕೆ ಗೇಯ ರಚನೆ ಆಧುನಿಕವಾಗಿ ಕಾಣಿಸಿರಬೇಕು. ೧೯೪೮ರಲ್ಲಿ ತೆಲಂಗಾಣದಲ್ಲಿ ಪೋಲೀಸ್ ಆಕ್ಷನ್ ನಡೆದ ಮೇಲೆ ಕೋಸ್ತಾ ಜಿಲ್ಲೆಗೂ ತೆಲಂಗಾಣಕ್ಕೂ ಒಳ್ಳೆಯ ಸಂಪರ್ಕ ಏರ್ಪಟ್ಟಿದೆ. ಆಗ ನಾರಾಯಣ ರೆಡ್ಡಿ ಸಮಗ್ರ ಆಂಧ್ರಪ್ರದೇಶವೆಲ್ಲಾ ಪ್ರವಾಸ ಮಾಡಿ ಸಾಕಷ್ಟು ಕಾವ್ಯರಚನೆ ಉಪನ್ಯಾಸಗಳನ್ನು ಮಾಡಲು ಸಾಧ್ಯವಾಯಿತು. ಇವರ ಕಾವ್ಯಾಭಿಮಾನಿಗಳಲ್ಲಿ ಬಹಳ ಮಂದಿ ಡಾ. ರೆಡ್ಡಿ ಅವರ ಸಮನ್ವಯ ಧೋರಣೆಯನ್ನು ಅನುಸರಿಸಿದ್ದಾರೆ. ಈ ಕಾಲದಲ್ಲಿ ಡಾ. ರೆಡ್ಡಿ ಪಾಂಡಿತ್ಯಪೂರ್ಣವಾದ ಆಧುನಿಕ ಭಾವಗಳ ವೈಶಿಷ್ಟ್ಯಪೂರ್ಣವಾದ ಕಾವ್ಯ ಬರೆದರು. ಅವರಿಗೆ ಇದರಿಂದ ಶಬ್ಧಸೌಷ್ಟವ ಒದಗಿದ್ದು ಒಂದು ದೊಡ್ಡ ವಿಶೇಷ. ಡಾ. ರೆಡ್ಡಿ ಅವರ ಕಾವ್ಯದಲ್ಲಿ ಎಡಪಂಥೀಯ ತತ್ತ್ವಗಳ ಬಗ್ಗ ಒಲವು ಕಾಣಿಸುತ್ತದೆ. ಆದರೆ, ಅವರು ಎಂದೂ ಅದರಲ್ಲೇ ತಲ್ಲೀನರಾಗಲಿಲ್ಲ. ಅದಕ್ಕೆ ಕಾರಣ ಅವರ ಸಮನ್ವಯ ಧೋರಣೆ ಎಂದೇ ಹೇಳಬೇಕು.

ತೆಲಂಗಾಣದಲ್ಲಿ ನಡೆದ ಸಾಂಸ್ಕೃತಿಕ ಹೋರಾಟದ ಹಿನ್ನೆಲೆಯಲ್ಲಿ ಆ ಕಾಲದ ಬಹುತೇಕ ಕವಿಗಳು ತಮ್ಮ ವಸ್ತುವನ್ನೂ ಸಮನ್ವಯ ಧೋರಣೆಗೆ ಅನುಸಾರವಾಗಿಯೇ ಆರಿಸಿಕೊಂಡಿದ್ದಾರೆ. ಸಮನ್ವಯ ತತ್ತ್ವವನ್ನು ಬೌದ್ಧಧರ್ಮ ಎತ್ತಿ ಹಿಡಿಯುತ್ತದೆಂಬುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಈ ದಿಸೆಯಲ್ಲಿ ದಾಶರಥಿ ಅವರ 'ಮಹಾಬೋಧಿ', ನಾರಾಯಣ ರೆಡ್ಡಿ ಅವರ 'ನಾಗಾರ್ಜುನ ಸಾಗರ' ಹೆಚ್ಚು ಕಡಿಮೆ ಒಂದೇ ಕಾಲದಲ್ಲಿ ರಚಿತವಾಗಿ ಹೊರಬಂದ ಉತ್ತಮ ಕೃತಿಗಳಾಗಿವೆ. ಡಾ. ರೆಡ್ಡಿ ಅವರ 'ಜಲಪಾತಂ' ಕವನ ಸಂಗ್ರಹದಲ್ಲಿ ಒಟ್ಟು ೩೭ ಕವನಗಳಿದ್ದು, ಅದರಲ್ಲಿ ಕಡೆಯ ಕವನ ರಾಜ್ಯೋದಯವನ್ನು ಕುರಿತ ಕವನವಾಗಿದೆ. ಉಳಿದ ಬಹುಮಟ್ಟಿನ ಕವನಗಳು ಆ ಮೊದಲಿನ ತೆಲಂಗಾಣ ಸಾಹಿತ್ಯ ಸಂದರ್ಭವನ್ನು ಚಿತ್ರಿಸುವುಗಳಾಗಿವೆ.

೧೯೫೩ರಲ್ಲಿ ಪ್ರಕಟವಾದ ಡಾ. ರೆಡ್ಡಿ ಅವರ 'ಸ್ವಪ್ನ ಭಂಗ', ಗೇಯಕಾವ್ಯ ಕೃತಿ ಶೃಂಗಾರ ಕಾವ್ಯವಾದರೂ ಅಂತರ್ಯದಲ್ಲಿ ಸಾಮಾಜಿಕ ದೃಷ್ಟಿ ಕಾಣಿಸುತ್ತದೆ. ಸುಖಚಿಪ್ನೆಗಳು ಮೊನಾಟನಿಯಿಂದ ಹೊರಬೀಳಬೇಕೆಂಬ ಅಭೀಪ್ಸೆ, ಸ್ವಪ್ನಕ್ಕಿಂತ ವಾಸ್ತವ ದೊಡ್ಡದೆಂಬ ಭಾಗ ಕಾಣಿಸುತ್ತದೆ. ಈ ಕಾವ್ಯದಲ್ಲಿ ಸುದೀರ್ಘವಾದ

ಸಮಾಸಗಳನ್ನು ಬಳಸುವುದು ಪದ್ಯ ಲಕ್ಷಣಗಳಿಂದ ಬಂದಿದ್ದೇ. ಪ್ರೌಢ ಪ್ರಯೋಗಗಳ ಬಗ್ಗೆ ಆ ಕಾಲಕ್ಕೆ ವ್ಯಾಮೋಹ ಇದ್ದಿದ್ದೇ ಆಗಿದೆ. ಡಾ. ರೆಡ್ಡಿ ಅವರು ಚಾರಿತ್ರಿಕವಾದ ವಸ್ತುವನ್ನು ಆಯ್ದುಕೊಂಡು ಪ್ರಗತಿಶೀಲ ಆದರ್ಶಗಳಿಂದ ಬರೆದ ಎರಡು ಕಾವ್ಯಗಳು 'ಕರ್ಪೂರ ವಸಂತರಾಯಲು' ಕಾವ್ಯದಲ್ಲಿ ಕವಿ ವೈಯಕ್ತಿಕ ಜೀವನಕ್ಕಿಂತ ಪ್ರಜಾ ಜೀವನವೇ ಮುಖ್ಯವೆಂದು 'ವಿಶ್ವನಾಥನಾಯಿಡು' ಕಾವ್ಯದಲ್ಲಿ ರಕ್ತಬಂಧಕ್ಕಿಂತ ಹಣೆಬರಹ ಮುಖ್ಯವೆಂದು ಸಾರಿದ್ದಾರೆ.

ಈ ಸಮನ್ವಯತತ್ತ್ವ ತೆಲಂಗಾಣದಿಂದ ಡಾ. ನಾರಾಯಣ ರೆಡ್ಡಿ ಹಾಗೂ ದಾಶರಥಿ ಎಂಬಿಬ್ಬರು ಶ್ರೇಷ್ಠ ಕವಿಗಳನ್ನು ತೆಲುಗು ಕಾವ್ಯ ಲೋಕಕ್ಕೆ ನೀಡಿದೆ. ಅನಂತರ ಶೀಘ್ರದಲ್ಲಿ ಆಂಧ್ರಕವಿಗಳು, ತೆಲಂಗಾಣ ಕವಿಗಳು ಎಂಬ ಭೇದಭಾವ ಇಲ್ಲವಾಗಿ ಎಲ್ಲ ತೆಲುಗು ಕವಿಗಳು ಎಂಬ ಭಾವನೆ ಮೂಡಿದೆ. ಅರವತ್ತರ ಕಡೆಯಲ್ಲಿ ಸಮನ್ವಯ ಭಾವನೆ ಎಲ್ಲ ಪ್ರದೇಶಗಳಲ್ಲಿನ ಆಧುನಿಕ ಕಾವ್ಯದಲ್ಲಿ ಸೇರಿಹೋಗಿದೆ. ೧೯೫೦ರ ಕಾಲಕ್ಕೆ ಪ್ರಾರಂಭವಾದ ಸಮನ್ವಯ ತತ್ತ್ವ ಅರವತ್ತರ ಕಾಲಕ್ಕೆ ಹೋದಂತೆ ಕಾಣಿಸಿದರೂ ನಾರಾಯಣ ರೆಡ್ಡಿ ಅವರಿಂದ ಆರಂಭವಾದ ಈ ತತ್ತ್ವ ಸಹಜವಾಗಿಯೇ ಹುಲುಸಾಗಿ ಬೆಳೆದು ಅದೊಂದು ಕಾವ್ಯಮಾರ್ಗವಾಗಿ ವಿಶಿಷ್ಟ ಧ್ವನಿಯಾಗಿ ನೆಲೆ ನಿಂತಿದೆ.

ತೆಲುಗಿನ ಶ್ರೇಷ್ಠ ಕವಿ ಡಾ. ಸಿ. ನಾರಾಯಣ ರೆಡ್ಡಿ ಅವರು ತೆಲಂಗಾಣದಲ್ಲಿ ಹುಟ್ಟಿ ಬೆಳೆದವರು. ಪರಂಪರೆಯ ಎಳೆಗಳನ್ನು ಹಿಡಿದುಬಂದ ಸತ್ವಭರಿತರಾದ ಇವರ ಮೇಲೆ ಅಂದಿನ ರಾಜಕೀಯ ಹಾಗೂ ಸಾಮಾಜಿಕ ಪರಿಸ್ಥಿತಿಗಳು ಗಾಢವಾದ ಪ್ರಭಾವ ಬೀರಿವೆ. ಒಬ್ಬ ಕವಿ ಇಂಥದ್ದೇ ಮಾರ್ಗದಲ್ಲಿ ಬರೆಯಬೇಕೆಂದೇನೂ ಇಲ್ಲ. ಆ ಕವಿ ಕವಿಯಾಗಿ ಹೇಗೆ ಎಷ್ಟು ಬೆಳೆದು ನಿಂತಿದ್ದಾನೆ ಎಂಬುದು ಮುಖ್ಯ. ಡಾ. ರೆಡ್ಡಿ ಅವರ ಕವನಗಳಲ್ಲಿ ಶೃಂಗಾರ, ಕರುಣರಸಗಳು ಪ್ರಧಾನವಾಗಿ ಕೆಲಸ ಮಾಡಿವೆ. ಮಾತ್ರಾ ಛಂದಸ್ಸನ್ನು ಚೆನ್ನಾಗಿ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. ಅವರ ಗೇಯ ಕಾವ್ಯಗಳಿಗೆ ತೆಲುಗಿನಲ್ಲಿ ಒಂದು ವಿಶಿಷ್ಟತೆ ಇದೆ. ಈ ದಿಸೆಯಲ್ಲಿ ಡಾ. ರೆಡ್ಡಿ ಅವರ 'ಕರ್ಪೂರ ವಸಂತರಾಯಲು', 'ನಾಗಾರ್ಜುನ ಸಾಗರಂ', 'ವಿಶ್ವನಾಥನಾಯಿಡು' ಮೊದಲಾದವು ಪ್ರಮುಖ ಕೃತಿಗಳು.

ಡಾ. ಸಿ. ನಾರಾಯಣ ರೆಡ್ಡಿ ಕವಿಯಾಗಿ ಕೇವಲ ಅಂತರ್ಮುಖಿಯಲ್ಲ, ಬಹಿರ್ಮುಖಿ. ಅವರ ಕಾವ್ಯದಲ್ಲಿ ಶೃಂಗಾರದ ಚಂದನವಿದೆ, ಕಾರುಣ್ಯದ ಮಣ್ಣಿನ ವಾಸನೆ ಇದೆ, ಕಾಲಕಾಲಕ್ಕೆ ದೇಶದ ಚಾರಿತ್ರಿಕ ಪರಿಸ್ಥಿತಿಗಳಿಗನುಗುಣವಾಗಿ ಆರೋಗ್ಯಕರವಾದ ಸ್ಪಂದನವಿದೆ. ಕಾವ್ಯಮಾರ್ಗದಲ್ಲಿನ ನಡಿಗೆಯಲ್ಲಿ ಸಮನ್ವಯ ಧೋರಣೆ ಇದೆ; ಮಾನವೀಯ ಸ್ಪಂದನವಿದೆ.

ಡಾ. ಸಿ. ನಾರಾಯಣರೆಡ್ಡಿ ಅವರು ತೆಲುಗಿನಲ್ಲಿ ಕಾವ್ಯ, ನಾಟಕ, ವಿಮರ್ಶೆ, ಪ್ರಬಂಧ, ಅನುವಾದ ಮೊದಲಾದ ಪ್ರಕಾರಗಳಲ್ಲಿ ಬಹಳಷ್ಟು ಕೃತಿಗಳನ್ನು ರಚಿಸಿ ತೆಲುಗು ಸಾರಸ್ವತ ಲೋಕದ ಔನ್ನತ್ಯವನ್ನು ಹೆಚ್ಚಿಸಿದ್ದಾರೆ. ಒಬ್ಬ ಲೇಖಕ ಒಂದು ಭಾಷೆಯಲ್ಲಿ ಎಷ್ಟು ಬರೆದ, ಏನು ಬರೆದ ಎಂಬಲ್ಲಿ ಡಾ. ರೆಡ್ಡಿ ಅವರು ಎರಡರಲ್ಲೂ 'ಸೈ' ಅನ್ನಿಸಿಕೊಂಡಿದ್ದಾರೆ. ಇವರ ಅಧಿಕ ಸಂಖ್ಯೆಯ ಕಾವ್ಯ ಕೃತಿಗಳನ್ನು ನೋಡಿದರೆ ಎಂಥವರಿಗೂ ಆಶ್ಚರ್ಯವಾಗುತ್ತದೆ. ಇವರ ಒಟ್ಟು ಕೃತಿಗಳ ಪೈಕಿ ನಲವತ್ತೈದಕ್ಕೂ ಮಿಗಿಲಾಗಿ ಕಾವ್ಯ ಕೃತಿಗಳೇ ಇರುವುದೊಂದು ವಿಶೇಷ. ಅವರ ಕಾವ್ಯಕೃತಿಗಳನ್ನು ಮುಖ್ಯವಾಗಿ ದೀರ್ಘವಾದ ಕೃತಿಗಳು (Long Poems), ಮುಕ್ತ ಛಂದಸ್ಸಿನ ಕವನ ಸಂಕಲನಗಳು (ವಚನ ಕವನಗಳು) (Volumes of Free Verse), ಗೀತ ನಾಟಕಗಳು (Lyrical Plays) 'ತೆಲುಗು ಗಜಲ್‌ಗಳು', 'ಪ್ರಪಂಚಪದಿಗಳು', 'ದ್ವಿಪದಿಗಳು' (Epigrams) ಮೊದಲಾಗಿ ಗುರ್ತಿಸಬಹುದು. ಹೀಗೆ ಡಾ. ರೆಡ್ಡಿ ಅವರು ವಿವಿಧ ಪ್ರಕಾರಗಳಲ್ಲಿ ಕಾವ್ಯ ಕೃಷಿಯನ್ನು ಮಾಡಿ ತೆಲುಗು ಸಾರಸ್ವತ ಲೋಕದಲ್ಲಿ ತಮ್ಮದೇ ಆದ ವಿಶಿಷ್ಟತೆಯನ್ನು ಮತ್ತು ವೈವಿಧ್ಯತೆಯನ್ನು ಮೆರೆದಿದ್ದಾರೆ. ಇವರ ಕಾವ್ಯ ರಚನೆಯಲ್ಲಿ ಹೆಚ್ಚು ಪ್ರಾಮುಖ್ಯತೆ ಇರುವುದು ಅವರ ಮುಕ್ತ ಛಂದಸ್ಸಿನ ಕವಿತಾ ರಚನೆಗೆ ಎಂಬುದು ಬಹಳ ಮುಖ್ಯವಾದ ಅಂಶ. ಈ ವಚನ ಕವನ ರಚನೆಯಲ್ಲಿ ಒಂದು ಪ್ರತ್ಯೇಕತೆ ಹಾಗೂ ವಿಶಿಷ್ಟತೆಯಿರುವುದು ಕಂಡುಬರುತ್ತದೆ. ಕಾವ್ಯವನ್ನೇ ತಮ್ಮ ಉಸಿರನ್ನಾಗಿಸಿಕೊಂಡ ಇವರು ಅದನ್ನೇ ಬದುಕಿನೊಂದಿಗೆ ಸಮನ್ವಯ ಮಾಡಿಕೊಂಡ ವಿನೂತನ ವ್ಯಕ್ತಿತ್ವದ ಅಪರೂಪದ ಕವಿ.

ಆಧುನಿಕ ತೆಲುಗು ಕಾವ್ಯಕ್ಷೇತ್ರದಲ್ಲಿ ಮುಕ್ತ ಛಂದಸ್ಸಿನ ಕವಿತೆಗೆ ನಾಂದಿ ಹಾಡಿ ಅದಕ್ಕೊಂದು ಆಯಾಮ ಕಲ್ಪಿಸಿದವರು 'ಶ್ರೀ ಶ್ರೀ' ಎಂದೇ ಹೇಳಬೇಕು. ಅವರ 'ಮಹಾಪ್ರಸ್ಥಾನ' ಕವನ ಸಂಕಲನದಲ್ಲಿ ಇದಕ್ಕೆ ಉತ್ತಮ ಕುರುಹುಗಳನ್ನು ಕಾಣಬಹುದಾಗಿದೆ. ಈ ಮಹಾಪ್ರಸ್ಥಾನದಲ್ಲಿ ವೇಗದ ಶೈಲಿ ಇದೆ; ಪ್ರಾಚೀನ ಛಂದೋಗಣವನ್ನು ಕೈಬಿಟ್ಟ ಒಂದು ಲಯವನ್ನು ಮುಖ್ಯವಾಗಿ ಅನುಸರಿಸಿದ ಮುಕ್ತ ಶೈಲಿ ಇದೆ; ಸಂಸ್ಕೃತಜನ್ಯ ತೆಲುಗು ಪದಗಳ ಅತಿವೇಗದ ಓಟವಿದೆ. ಅಂತ್ಯಪ್ರಾಸ, ಅನುಪ್ರಾಸಗಳು ಈ ಹೊಸ ಶೈಲಿಯ ವಿಶೇಷ ಗುಣಗಳಾಗಿವೆ. ಈ ಶೈಲಿ ಆ ಕಾಲಕ್ಕೆ ಮುಖ್ಯವಾಗಿ ಅಭ್ಯುದಯ ಕವಿಗಳನ್ನು ಆಕರ್ಷಿಸಲು ಕಾರಣವಾಗಿದೆ. ೧೯೫೦ರ ಕಾಲಕ್ಕೆ ಅನೇಕ ಕವಿಗಳು ಅಭ್ಯುದಯ ಕಾವ್ಯಕ್ಕೆ ಮುಕ್ತ ಕಾವ್ಯ ಸೂಕ್ತವಾದುದ್ದೆಂದು ಭಾವಿಸಿದ್ದಾರೆ. ಆ ಪೈಕಿ ಆರುದ್ರ, ನಾರಾಯಣ ರೆಡ್ಡಿ, ಕುಂದುರ್ತಿ, ಶಿಷ್ಟ್ಲಾ, ನಾರಾಯಣಬಾಬು, ಬಾಲಗುಮ್ಮಿ ಪದ್ಮರಾಜು, ಪಟ್ಟಾಬಿ, ಅಜಂತಾ, ತಿಲಕ್ ಮೊದಲಾದ ಕವಿಗಳನ್ನು ನೋಡಬಹುದು. ಈ ಮುಕ್ತ ಛಂದಸ್ಸಿನ ಕವಿತೆಗಳನ್ನು

(ವಚನಕವಿತೆ) ಪರಿಣಾಮಕಾರಿಯಾಗಿ ಬರೆದು ತೆಲುಗು ಕಾವ್ಯ ಕ್ಷೇತ್ರಕ್ಕೆ ದೊಡ್ಡ ಕಾಣಿಕೆ ನೀಡಿ, ಅದರಲ್ಲಿ ಮೇರುಪರ್ವತದಂತೆ ಬೆಳೆದು ನಿಂತವರು, ಜನಪ್ರಿಯ, ಜನಪರ ಮತ್ತು ಪ್ರಗತಿಪರ ಕವಿ ಡಾ. ಸಿ. ನಾರಾಯಣ ರೆಡ್ಡಿ ಅವರು.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಾನು ಕನ್ನಡ ಬಿ.ಎ. (ಆನರ್ಸ್)., ವ್ಯಾಸಂಗ ಮಾಡುತ್ತಿದ್ದ ಕಾಲಕ್ಕೆ ನನಗೆ ತೆಲುಗು ಸಾಹಿತ್ಯವನ್ನು ಅಭ್ಯಾಸ ಮಾಡುವ ಅವಕಾಶ ದೊರೆಯಿತು. ಮೊದಲಿನಿಂದಲೂ ಕಾವ್ಯದ ಬಗ್ಗೆ ಹೆಚ್ಚು ಆಸಕ್ತಿಯಿದ್ದ, ಸಹಜವಾಗಿ ಮನೆಯಲ್ಲಿ ತೆಲುಗು ಭಾಷೆಯನ್ನೂ ಆಡುಭಾಷೆಯಾಗಿ ಬಲ್ಲ ನನಗೆ ಆ ಕಾಲಕ್ಕೆ ತೆಲುಗಿನ ಸಾಹಿತ್ಯಕ್ಷೇತ್ರ ಹಾಗೂ ಚಲನಚಿತ್ರರಂಗಗಳಲ್ಲಿ ಜನಪ್ರಿಯರಾಗಿದ್ದ ಡಾ. ಸಿ. ನಾರಾಯಣರೆಡ್ಡಿ ಅವರ ಕವಿತೆಗಳ ಕಡೆ ಗಮನ ಸೆಳೆಯಿತು. ಅಲ್ಲದೆ, ಅವರ ಕವಿತೆಗಳಲ್ಲಿನ ಚಿಂತನಶೀಲತೆ, ಗಂಭೀರ ಭಾವ, ಸುಲಲಿತ ಶೈಲಿ ಹಾಗೂ ಸರಳ ಸುಂದರ ಭಾಷೆ ನನ್ನನ್ನು ಬಹಳವಾಗಿ ಆಕರ್ಷಿಸಿದವು. ಹೀಗಾಗಿ ಆ ಕಾಲಕ್ಕೇ ಅವರ ಪ್ರಕಟಿತ ಕವಿತೆಗಳಿಂದ ಕೆಲವನ್ನು ಕನ್ನಡಕ್ಕೆ ಅನುವಾದಿಸಿ, ಅವರ ಅನುಮತಿ ಪಡೆದು ಕೆಲವು ಕನ್ನಡ ಪತ್ರಿಕೆಗಳಲ್ಲಿ ಪ್ರಕಟಿಸತೊಡಗಿದೆ. ೧೯೭೬ರಲ್ಲಿ ನಾನು ಆವರೆಗೆ ಅನುವಾದಿಸಿದ್ದ ಡಾ. ರೆಡ್ಡಿ ಅವರ ಕವಿತೆಗಳ ಪೈಕಿ ಆಯ್ದ ಇಪ್ಪತ್ತೈದು ಕವಿತೆಗಳನ್ನು 'ಹೊಸಮುಖ ತೊಟ್ಟುಕೊ' ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ. ಇದರಲ್ಲಿ ೧೯೭೪ರವರೆಗೆ ಡಾ. ಸಿ. ನಾರಾಯಣರೆಡ್ಡಿ ಅವರು ರಚಿಸಿದ ಕವಿತೆಗಳು ಸೇರಿವೆ. ೧೯೯೨ರಲ್ಲಿ ನಾನು ಕನ್ನಡಕ್ಕೆ ಅನುವಾದಿಸಿದ ಅವರ ಜ್ಞಾನಪೀಠ ಪ್ರಶಸ್ತಿ ವಿಜೇತ ಸಮಗ್ರ ಕಾವ್ಯ ಕೃತಿ 'ವಿಶ್ವಂಭರಾ' ಪ್ರಕಟವಾಗಿದೆ. ಅವರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ (೧೯೭೪) ಕವನಸಂಕಲನ 'ಮಂಟಲೂ-ಮಾನವುಡೂ' ಕೃತಿಯ ನನ್ನ ಕನ್ನಡಾನುವಾದ 'ಜ್ವಾಲೆಗಳು ಮತ್ತು ಮಾನವ' ಹಾಗೂ ಡಾ. ರೆಡ್ಡಿ ಅವರ ೧೯೭೫ ರಿಂದ ೧೯೯೪ರವರೆಗಿನ ರಚನೆಗಳಲ್ಲಿನ ಕವಿತೆಗಳ (Free Verse) ಪೈಕಿ ನಾನು ಅನುವಾದಿಸಿದ ಆಯ್ದ ನೂರೊಂದು ಕವಿತೆಗಳ ಕನ್ನಡಾನುವಾದ 'ಸಮನ್ವಯ' ಎಂಬ ಹೆಸರಿನಲ್ಲಿ ಎರಡೂ ಕೃತಿಗಳು ೧೯೯೯ರಲ್ಲಿ ಪ್ರಕಟವಾಗಿರುತ್ತವೆ.

* * * * *

"ವಿಶ್ವಂಭರಾ" ಡಾ. ಸಿ. ನಾರಾಯಣರೆಡ್ಡಿ ಅವರು ಮುಕ್ತ ಛಂದಸ್ಸಿನಲ್ಲಿ ರಚಿಸಿದ ಪ್ರಥಮ ಬಾರಿಗೆ ಪ್ರಕಟವಾದ ಸಮಗ್ರ ಕಾವ್ಯ ಕೃತಿ. ಈ ಮೊದಲು ಅವರು ಮುಕ್ತ **ಛಂದಸ್ಸಿ**ನಲ್ಲಿ ಸಾಕಷ್ಟು ಕಾವ್ಯ ಕೃಷಿ ಮಾಡಿದ್ದಾರೆ. ಈ ಮುಕ್ತ ಛಂದಸ್ಸಿನ ಕಾವ್ಯಕೃತಿ 'ವಿಶ್ವಂಭರಾ' ೧೯೮೦ರಲ್ಲಿ ಪ್ರಕಟವಾದರ, ಅವರ ಮುಕ್ತ ಛಂದಸ್ಸಿನ ಕವನ ಸಂಗ್ರಹ 'ಮಂಟಲೂ-ಮಾನವುಡೂ' (ಜ್ವಾಲೆಗಳು ಮತ್ತು ಮಾನವ)

ಪ್ರಕಟವಾಗಿದ್ದು ೧೯೭೦ರಲ್ಲಿ. ಈ ಕೃತಿಗೆ ೧೯೭೪ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿವೆ, ೧೯೮೦ರಲ್ಲಿ ಪ್ರಕಟವಾದ 'ವಿಶ್ವಂಭರಾ' ಕಾವ್ಯಕೃತಿಗೆ ೧೯೮೮ರಲ್ಲಿ ಪ್ರತಿಷ್ಠಿತ ಭಾರತೀಯ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ.

ಸುಮಾರು ನೂರು ಪುಟಗಳ ಸುಂದರ ಕಾವ್ಯ ಕೃತಿ ವಿಶ್ವಂಭರಾ ೧೯೮೦ರಲ್ಲಿ ಪ್ರಥಮವಾಗಿ ಪ್ರಕಟವಾಗಿದೆ. ಇದರ ದ್ವಿತೀಯ ಆವೃತ್ತಿ ೧೯೯೦ರಲ್ಲಿ ಪರಿಷ್ಕೃತವಾಗಿ ಹೊರಬಂದಿದೆ. 'ವಿಶ್ವಂಭರ' ಸಂಸ್ಕೃತ ಮೂಲದ ಪದ. 'ವಿಶ್ವಂಭರ' ಅಂದರೆ ತೆಲುಗಿನಲ್ಲಿ 'ಭೂಮಿ' ಅಥವಾ 'ಪ್ರಪಂಚ' ಎಂದು ಅರ್ಥ ಬರುತ್ತದೆ.

'ವಿಶ್ವಂಭರಾ' ಎಂದರೆ ಅದು 'ಭೂಮಿ', 'ಭೂಮಾತೆ' ಮಾತ್ರವಲ್ಲ, ಇಲ್ಲಿ ಹುಟ್ಟಿದ ಮನುಷ್ಯ ಆದಿಯಿಂದ ಈ ತನಕ ಪಡೆದ ವಿಕಾಸ, ಸದರಿ ಕ್ರಮದಲ್ಲಿ, ಮನುಷ್ಯ ಚೈತನ್ಯದ ಸ್ಥಿರತೆಯನ್ನು ಕುರಿತು ಈ ಚೈತನ್ಯಕ್ಕೆ ಮೂಲಾಧಾರವಾದ ಅವನ ಸಂಬಂಧಗಳನ್ನು ಕುರಿತು ಇಲ್ಲಿ ಭೂಮಿ 'ವಿಶ್ವಂಭರಾ'. ವಿಶ್ವಂಭರಾವೇ ಮಾನವ. ವಿಶ್ವಂಭರಾವನ್ನು ಮನುಷ್ಯನಿಗೆ ಪರ್ಯಾಯ ಪದವಾಗಿ ಬಳಸಿಕೊಂಡಿದ್ದಾರೆ ಕವಿ. ಈ ಕಾವ್ಯದ ಒಟ್ಟಾರೆ ಕಥೆ ಭೂಮಿ ಮೇಲಿನ ಮನುಷ್ಯನ ಕಥೆಯೇ ಆಗಿದೆ. ಈ ಮನುಷ್ಯ ಕೇವಲ ಒಂದು ಕಾಲದ ಒಬ್ಬ ಮನುಷ್ಯನಲ್ಲ ಹಿಂದೆ-ಇಂದು-ಮುಂದು ಎಲ್ಲಾ ಕಾಲ ಇದ್ದ, ಇರುವ, ಇರಬಲ್ಲ ಮನುಷ್ಯ. ಮಾತ್ರವಲ್ಲ ಈ ಕಾವ್ಯದಲ್ಲಿ ಇಡೀ ಭೂಮಂಡಲದಲ್ಲಿ ಹುಟ್ಟಿದ ಎಲ್ಲ ಜೀವರಾಶಿಗಳಿಗೂ ಪ್ರತೀಕ ಈ ಮನುಷ್ಯ.

ಈ 'ವಿಶ್ವಂಭರಾ' ಸಮಗ್ರ ಕಾವ್ಯ ರಚನೆಗೆ ಪೂರ್ವದಲ್ಲಿ ಡಾ. ರೆಡ್ಡಿ ಅವರು 'ಭೂಮಿಕ' (೧೯೭೭), ಮಥನಂ (೧೯೭೮) ಮೊದಲಾದ ಇದೇ ಮಾದರಿಯಲ್ಲಿ ಖಂಡ ಕಾವ್ಯಗಳನ್ನೂ ಬರೆದಿದ್ದಾರೆ. ಅಂದರೆ ೧೯೮೦ರಲ್ಲಿ ಪ್ರಕಟವಾದ ಈ ವಿಶ್ವಂಭರಾ ಸಮಗ್ರ ಕಾವ್ಯದ ರಚನೆಗೆ ಪೂರ್ವಭಾವಿ ವೇದಿಕೆಯ ಸುಳಿವು ಈ ಹಿಂದಿನ ಅವರ ಹಲವು ರಚನೆಗಳಲ್ಲಿಯೇ ಮೊಳಕೆ ಒಡೆದಿರುವುದನ್ನು ಕಾಣಬಹುದು.

ಡಾ. ಸಿ. ನಾರಾಯಣರೆಡ್ಡಿ ಅವರು ತಮ್ಮ ಬಹುಪಾಲು ಕಾವ್ಯಕೃಷಿಯನ್ನು ಮುಕ್ತ ಛಂದಸ್ಸಿನಲ್ಲಿಯೇ ಮಾಡಿ 'ಸೈ' ಎನ್ನಿಸಿಕೊಂಡಿದ್ದಾರೆ. ವಿಶ್ವಂಭರಾದ ನಂತರವೂ ಅವರು ಮುಕ್ತ ಛಂದಸ್ಸಿನಲ್ಲಿ ಮಹತ್ತರ ಕೃತಿಗಳ ರಚನೆ ಮಾಡಿರುವುದೊಂದು ವಿಶೇಷ. ಇಷ್ಟೊಂದು ನಿರಂತರ ಕಾವ್ಯ ಶ್ರದ್ಧೆಯನ್ನು ಹೊಂದಿದ ಕವಿ ತೆಲುಗಿನಲ್ಲಿ ಮತ್ತೊಬ್ಬರಿಲ್ಲವೆಂದರೆ ತಪ್ಪಾಗದು.

ಮುಕ್ತಛಂದಸ್ಸಿನಲ್ಲಿ ರಚಿತವಾದ ಸಮಗ್ರ ಕಾವ್ಯಕೃತಿ ವಿಶ್ವಂಭರಾದಲ್ಲಿ ಡಾ. ರೆಡ್ಡಿ ಅವರ ಪ್ರಬುದ್ಧ ಕಾವ್ಯ ಕಲ್ಪನೆ, ಒಂದು ಉತ್ತಮ ಕಾವ್ಯದ ಎಲ್ಲಾ ಲಕ್ಷಣಗಳು

ಔಚಿತ್ಯ ಪೂರ್ಣವಾಗಿ ಮೂಡಿ ನಿಂತಿವೆ. ಭಾವ-ಭಾಷಗಳಲ್ಲಿ ತನ್ನದೇ ವಿಶೇಷತೆಯಿದೆ. ಸಮಗ್ರ ಕಾವ್ಯ ಕಲ್ಪನೆಯಲ್ಲಿ ಒಂದು ವಿಶಿಷ್ಟತೆ ಇದೆ. ಇಲ್ಲಿ ಕವಿಯ ಉದಾತ್ತ ಭಾವಪ್ರಪಂಚ, ಶಬ್ದ, ಅಲಂಕಾರ, ಔಚಿತ್ಯ, ಕಲ್ಪನೆ, ರಚನಾಶೈಲಿ ಮಾನವ ತತ್ವ ಮೊದಲಾದವು ಸಮುಚಿತ ನಿಷ್ಪತ್ತಿನಲ್ಲಿ ಕೂಡಿ ಕಾವ್ಯ ಅವತರಿಸಿದೆ. ಆಧುನಿಕ ಕಾವ್ಯ ಕ್ಷೇತ್ರದಲ್ಲಿ ಉದ್ಭವಿಸಿದ ಪ್ರತೀಕಾತ್ಮಿಕ ಕಾವ್ಯ ವಿಶ್ವಂಭರಾ. ಈ ವಿಶಾಲವಾದ ಭೂಮಂಡಲವನ್ನು ತಮ್ಮ ಉದಾತ್ತ ವ್ಯಕ್ತಿತ್ವಗಳಿಂದ ಎಚ್ಚರಗೊಳಿಸಿ ಮಾನವ ಬದುಕಿನ ಮೇಲೆ ಹೊಸಬೆಳಕು ಚೆಲ್ಲಿದ ಮಹಾ ಪುರುಷರ ಜೀವನ ಸನ್ನಿವೇಶಗಳ ರೇಖಾಚಿತ್ರದ ಕಾವ್ಯ ರೂಪಗಳನ್ನೊಳಗೊಂಡಿದೆ ಈ ಕೃತಿ. ಈ ವಿಶ್ವಂಭರಾ ಸಮಗ್ರಕಾವ್ಯ ಕವಿ ಡಾ. ರೆಡ್ಡಿ ಅವರ ಮಾನವೋಪನಿಷತ್ತು. ಕವಿಯೇ ಹೇಳಿಕೊಂಡಿರುವಂತೆ:

"ಈ ಕಾವ್ಯಕ್ಕೆ ನಾಯಕ ಮಾನವ. ರಂಗಸ್ಥಳ ವಿಶಾಲ ವಿಶ್ವಂಭರಾ.

ಇತಿ ವೃತ್ತ - ದಿನಾಂಕಗಳೊಂದಿಗೆ ನಿಮಿತ್ತವಿಲ್ಲದ, ಹೆಸರು ಗಳೊಂದಿಗೆ

ಅಗತ್ಯವಿಲ್ಲದ ಮನುಷ್ಯನ ಕಥೆ.

ಈ ಕಥೆಗೆ ನೇಪಥ್ಯ ಪ್ರಕೃತಿ.

ಮನುಷ್ಯ ಧರಿಸುವ ವಿವಿಧ ಭೂಮಿಕೆಗಳಿಗೆ ಮೂಲ ಧಾತುಗಳು

ಮನಶ್ಶಕ್ತಿಗಳು.

ಅಲೆಗ್ಜಾಂಡರ್, ಕ್ರಿಸ್ತ, ಅಶೋಕ, ಸಾಕ್ರಟೀಸ್, ಬುದ್ಧ, ಲಿಂಕನ್,ಲೆನಿನ್,

ಮಾರ್ಕ್ಸ್, ಗಾಂಧಿ - ಹೀಗೆ ಎಷ್ಟೊಂದು ರೂಪಗಳು ಮನುಷ್ಯನಿಗೆ!

ಕಾಮ, ಕ್ರೋಧ, ಲೋಭ, ಮದ, ಆತ್ಮಶೋಧನೆ, ಪ್ರಕೃತಿಶಕ್ತಿಗಳ ವಶೀಕರಣ -
ಹೀಗೆ ಎಷ್ಟೊಂದು ವಿಭಿನ್ನ ಪ್ರವೃತ್ತಿಗಳು ಮನುಷ್ಯನಿಗೆ!
ಅನಾದಿಕಾಲದಿಂದ ಆಧುನಿಕ ಕಾಲದತನಕ ಮನುಷ್ಯ ಮಾಡಿದ

ಪ್ರಸ್ಥಾನಗಳು ಈ ಕಾವ್ಯಕೃತಿಯಲ್ಲಿನ ಪ್ರಕರಣಗಳು.

ಮನುಷ್ಯನ ಸಾಧನೆ ತ್ರಿಮೂಲ : ಕಲಾತ್ಮಕ - ವೈಜ್ಞಾನಿಕ - ಆಧ್ಯಾತ್ಮಿಕ.

ಈ ಸಾಧನೆಯಲ್ಲಿ ಅಡಿಗಡಿಗೂ ಇದಿರೇಟುಗಳು. ಕ್ಷತನಾದ ಮನುಷ್ಯ
ತಿರೋಗತನಾಗಲಿಲ್ಲ."

ವಿಶ್ವಂಭರಾ ಕಾವ್ಯ ಕೃತಿರಚನೆಗೆ ಪೂರ್ವದಲ್ಲಿ ಕವಿ ತನ್ನಲ್ಲಿ ಗೀಚಿಕೊಂಡ ರೇಖಾಚಿತ್ರವಿದು.

ಈ ರೇಖಾಚಿತ್ರಕ್ಕೆ ಕವಿ ಸಮರ್ಥವಾಗಿ ರಕ್ತ, ಮೂಳೆ, ಮಾಂಸಗಳನ್ನು ತುಂಬಿ ಜೀವಾತ್ಮಗಳನ್ನು ಕೊಟ್ಟು, ಪ್ರಬುದ್ಧ ಕೃತಿಯನ್ನು ತಯಾರಿಸಿದ್ದಾರೆ. ಈ ಕಾವ್ಯ ಬಹುಮುಖ್ಯವಾಗಿ ಮಾನವನ ವಿಕಾಸಕ್ಕೆ ಪ್ರಕೃತಿ ಹೇಗೆ ಅವಲಂಭಿತವಾಗಿ, ಪ್ರೇರಣೆಯಾಗಿ ನಿಲ್ಲುತ್ತದೆಂಬುದನ್ನು ಹೇಳುವುದೇ ಆಗಿದೆ.

'ವಿಶ್ವಂಭರಾ' ಸಮಗ್ರ ಕಾವ್ಯಕೃತಿ ಐದು ಅಧ್ಯಾಯಗಳಾಗಿ ಹಬ್ಬಿಕೊಂಡಿದೆ. ಈ ಕಾವ್ಯವನ್ನು ಐದು ಭಾಗಗಳಾಗಿ ಮಾಡಿರುವುದು ಪಂಚೇಂದ್ರಿಯಗಳ ಪಂಚಭೂತಗಳ ಪಂಚಬೆರಳುಗಳ ನೆನಪು ತರುತ್ತದೆಂದು ಕಾಣುತ್ತದೆ. ಪಂಚಪಾಂಡವರಂತೆ ಪ್ರತಿಯೊಂದಕ್ಕೂ ತನ್ನದೇ ಮಹತ್ವ ಇದೆ. ಇಲ್ಲಿ ಕವಿಯ ಪರಿಕಲ್ಪನೆಯಲ್ಲಿ ಒಂದು ಸಮಗ್ರತೆ ಇದೆ. ಆದರೆ ಕವಿ ಯಾವ ಭಾಗಕ್ಕೂ ನಿರ್ದಿಷ್ಟ ಹೆಸರನ್ನು ಕೊಟ್ಟಿಲ್ಲ. ಇದೇ ಈ ಕೃತಿಯಲ್ಲಿನ ವೈಶಿಷ್ಟ್ಯ.

- ೧ -

'ನಾನು ಹುಟ್ಟುವ ಮೊದಲೆ
ನೆತ್ತಿಮೇಲೆ ನೀಲಿತೆರೆ
ಕಾಲ ಕೆಳಗೆ ಧೂಳಿಪೂರೆ'

ಎಂದು ಪ್ರಾರಂಭವಾಗುವ ವಿಶ್ವಂಭರಾ ಕಾವ್ಯದ ಮೊದಲ ಭಾಗದಲ್ಲಿ ಮಾನವ ಸೃಷ್ಟಿಗೆ ಮೊದಲೇ ಇದ್ದ ಪ್ರಕೃತಿಯನ್ನು, ಆದಿಮಾನವ ದಂಪತಿಗಳು ಆಡಮ್ ಮತ್ತು ಈವ್‌ರ ಪ್ರಣಯ, ಅವರು ನಿಶಿದ್ಧ ಫಲವನ್ನು ತಿನ್ನುವ ಸಂದರ್ಭ, ಶಾಸನ ಧಿಕ್ಕಾರದ ಕಾರಣವಾಗಿ ಅವರು ಭೂಮಿ ಮೇಲೆ ಅವತರಿಸಿ ಕಾಲ ಕಳೆಯುವುದು. ಅವರು ಅಚ್ಚರಿಯಿಂದ ಕಾಣುವ ಪ್ರಕೃತಿ ತತ್ವಗಳನ್ನು ಋತುಗಳ ಪ್ರಭಾವವನ್ನು ದರ್ಶಿಸಿ ಆಶ್ಚರ್ಯಪಟ್ಟು ಚಿಂತೆಯಲ್ಲಿ ಮುಳುಗುವುದು, ಮರದ ಮೇಲೆ ಮಳೆ ಬಿದ್ದರೆ ಅದರಡಿಗೆ ಸೇರುವುದು, ಸಿಡಿಲು ಬಿದ್ದರೆ ಗುಹೆಯೊಳಕ್ಕೆ ಹೋಗುವುದು, ಗುಹೆಯಲ್ಲಿ ಹುಲಿ ಮೇಲೆ ಬಿದ್ದರೆ, ನದಿವಡಕ್ಕೆ ಓಡಿ ಗುಡಿಸಲು ಕಟ್ಟಿಕೊಳ್ಳುವುದು, ಕ್ರೂರಮೃಗಗಳನ್ನು ಈಟಿಯಿಂದ ಕತ್ತಿಯಿಂದ ಎದುರಿಸಿ ಆತ್ಮರಕ್ಷಣೆ ಮಾಡಿಕೊಳ್ಳುವುದು, ನಂತರ ಮಾನವ ಕ್ರಮವಾಗಿ ಮನೆ ನಿರ್ಮಿಸಿಕೊಳ್ಳುವುದು, ಉಡುಪು ಧರಿಸಿಕೊಳ್ಳುವುದು, ದೇಶಾಕ್ರಮಣ ಮಾಡುವುದು, ಜಲ ಪ್ರಯಾಣ ಮಾಡುವುದು, ಪರ್ವತಾರೋಹಣ, ಅಗ್ನಿ ಉತ್ಪಾದನೆ ಮಾಡುವುದು, ಕೃಷಿ, ಪಶು ಪೋಷಣೆ ಮಾಡುವುದು, ವಾಹನ ನಿರ್ಮಾಣ ಮಾಡುವುದು, ನೀರಿನ ಉಪಯೋಗ ಕಾರ್ಯಗಳನ್ನು ಮಾಡುವುದು ಹೀಗೆ ಮನುಷ್ಯ ಕ್ರಮವಾಗಿ ಜಗತ್ತನ್ನೆಲ್ಲಾ ವ್ಯಾಪಿಸಿಕೊಂಡು ನೆಲೆಸಿಂತ ವಿಚಾರವನ್ನು ಚಿತ್ರಿಸಲಾಗಿದೆ.

"ವಿಸ್ತರಿಸಿದನು ಮನುಷ್ಯ
ವಿಶ್ವಾಸವನ್ನು ಆತ್ಮೀಕರಿಸಿಕೊಂಡು
ಆವರಿಸಿದನು ಮನುಷ್ಯ
ಅಂಬರವನ್ನು ಅಂಗೈಯಲ್ಲಿ ಹಿಡಿದುಕೊಂಡು."

ಎಂದು ಹೇಳುತ್ತಾ ಮುಕ್ತಾಯವಾಗುತ್ತದೆ.

- ೨ -

"ಮನುಷ್ಯನ ಮನಸ್ಸಿನಲ್ಲಿ ಒಂದು ಪ್ರಭಾತ.
ಮೌನವನ್ನು ಮುರಿದುಕೊಂಡು
ಮಂಕುತನವನ್ನು ಸೀಳಿಕೊಂಡು
ಉತ್ತುಂಗವಾಗಿ ನೆಗೆಯುವ
ಉನ್ಮತ್ತನಾದ ಜಲಪಾತ.
ಎಲ್ಲಿನದು ಈ ನಾದ?"

ಎಂದು ಪ್ರಾರಂಭವಾಗುವ ವಿಶ್ವಂಭರಾ ಕಾವ್ಯದ ಎರಡನೆಯ ಭಾಗದಲ್ಲಿ ಮಾನವನ ಕಲಾತ್ಮಕ ಸಾಧನೆಗಳನ್ನು ಕುರಿತು ಕಲಾತ್ಮಕವಾಗಿ ವಿವರಿಸಲಾಗಿದೆ. ಮನುಷ್ಯ ತನ್ನ ಸ್ವಭಾವಗಳಿಗನುಗುಣವಾಗಿ ಪ್ರಕೃತಿಯೊಂದಿಗೆ ಸ್ಪಂದಿಸುತ್ತಾ ಆ ಮೂಲಕ ಅವನು ತನ್ನಲ್ಲಿ ಕಂಡುಕೊಂಡು ಪ್ರದರ್ಶಿಸಿದ ಕಲಾತ್ಮಕ ಸಾಧನೆಗಳು ಸಂಗೀತ, ನೃತ್ಯ, ಕಾವ್ಯ, ಚಿತ್ರಕಲೆ, ಶಿಲ್ಪಕಲೆ ಇತ್ಯಾದಿ ಹುಟ್ಟಿಕೊಂಡ ರೀತಿ, ಪ್ರಕೃತಿಯೊಂದಿಗೆ ಸ್ಪಂದಿಸಿ ಮನುಷ್ಯ ತನ್ನನ್ನು ತಾನು ಪ್ರತಿಭಾಚೈತನ್ಯವಾಗಿ ರೂಪಿಸಿಕೊಂಡು ನಡೆದ ವಿಧಾನಗಳನ್ನು ವಿವರಿಸಲಾಗಿದೆ.

ಇಲ್ಲಿ ಕವಿ ಮನುಷ್ಯನ ಮನಸ್ತತ್ವವನ್ನು ಅವನ ಅಗಾಧವಾದ ಮನಶ್ಶಕ್ತಿಯನ್ನು ಸಂದರ್ಭಾನುಗುಣವಾಗಿ ಕಲಾತ್ಮಕವಾಗಿ ಚಿತ್ರಿಸಿದ್ದಾರೆ.

ಎರಡನೆಯ ಭಾಗ :

"ಮನುಷ್ಯನ ಮನಸ್ಸು ನೋಡಿಕೊಂಡಿದೆ
ತನ್ನ ನೆರಳನ್ನು ಅಗಣ್ಯರೂಪಗಳಾಗಿ
ರಸಾಹಂಕೃತಿ ರಚಿಸಿಕೊಂಡಿದೆ
ರಕ್ತಿಯನ್ನು ಚೈತನ್ಯ ಕೋಶಗಳಾಗಿ."

ಎಂದು ಹೇಳುತ್ತಾ ಮುಕ್ತಾಯವಾಗುತ್ತದ.

"ಎಷ್ಟು ವಿಚಿತ್ರ ಮನಸ್ಸು?
ಯಾವ ರೂಪವೂ ಇಲ್ಲ ತನಗೆ.
ಆದರೂ ಅದು
ನಾದವಾಗಿ ನೆಗೆದಿದೆ-
ಪದವಾಗಿ ನಡೆದಿದೆ.
ರೇಖೆಗಳಾಗಿ ಮೆರೆದಿದೆ
ಮೂರ್ತಿಗಳಾಗಿ ನಿಂತಿದೆ
ಅಣುಅಣುವಿನಲ್ಲಿನ ಲಯಗಳನ್ನು
ತನುವಿನಲ್ಲಿ ಚೆಲ್ಲಿದೆ."

ಎಂದು ಪ್ರಾರಂಭವಾಗುವ ವಿಶ್ವಂಭರಾ ಕಾವ್ಯದ ಮೂರನೆಯ ಭಾಗದಲ್ಲಿ ಮಾನವನ ಮನಸ್ಸಿಗೆ ಹೆಚ್ಚು ಪ್ರಾಧಾನ್ಯ ನೀಡಲಾಗಿದೆ. ಮಾನವನ ಮನುಷ್ಯ ಶಕ್ತಿಯನ್ನು ಸನ್ನಿವೇಶ ಗಳಿಗನುಗುಣವಾಗಿ ಚಿತ್ರಿಸಲಾಗಿದೆ. ಮಾನವ ತನ್ನಲ್ಲಿನ ಕಾಮ, ಕ್ರೋಧ ಲೋಭಾದಿಗಳಿಗೆ ವಶನಾಗಿ ಅಧೋಗತಿಗಿಳಿಯುವ ಮತ್ತು ಸತ್ಯಸತ್ವ ಭೂತದಯಾದಿ ಗುಣಗಳ ಕಾರಣವಾಗಿ ಎತ್ತರಕ್ಕೇರಿ ಶೋಭಿಸುವ ವಿಚಾರಗಳನ್ನು ಇಲ್ಲಿ ವಿವರಿಸಲಾಗಿದೆ. ಈ ಭಾಗದಲ್ಲಿ ವಿಶ್ವಾಮಿತ್ರನ ತಪಶ್ಶಕ್ತಿ, ಬುದ್ಧನಶಾಂತಿ, ಅಲೆಗ್ಸಾಂಡರನ ಲೋಭ, ಅಶೋಕನ ಧರ್ಮ ಸಂಸ್ಥಾಪನೆ, ಅರಿಸ್ಟಾಟಲ್‌ನ ಜ್ಞಾನ, ಸಾಕ್ರೆಟೀಸನ ಜಿಜ್ಞಾಸೆ, ಕ್ರಿಸ್ತನ ಕರುಣೆ, ಮೊದಲಾದ ಮಾನವನ ಪ್ರವೃತ್ತಿಗಳ ಮನಶ್ಶಕ್ತಿಗಳ ನಿರೂಪಣೆ ವರ್ಣಿತವಾಗಿದೆ. ಹೀಗೆ ಮೂರನೆಯ ಭಾಗ :

"ಆ ತೇಜ ವಿಶ್ವಚರಿತೆಗೆ
ಅಭಿನವ ಭೂಮಿಕೆ.
ಆ ಜ್ಞಾನ ನವ ಮಾನವೀಯತೆಗೆ
ಅಖಂಡ ದೀಪಿಕೆ."

ಎಂದು ಹೇಳುತ್ತಾ ಮುಕ್ತಾಯವಾಗುತ್ತದೆ.

- ೪ -

"ಎಷ್ಟೆಷ್ಟು ಪ್ರಸ್ಥಾನಗಳು ಮನುಷ್ಯನಿಗೆ?
ಎಷ್ಟೆಷ್ಟು ಪರಿಭ್ರಮಣಗಳು ಮನುಷ್ಯನಿಗೆ
ಅಷ್ಟರಲ್ಲೇ ನೊರೆಗಳ ಓಟ.
ಅಷ್ಟರಲ್ಲೇ ಚಲಿಸದ ಹೆಜ್ಜೆ.
ಯಾರು ತಾನು?"

ಎಂದು ಪ್ರಾರಂಭವಾಗುವ ನಾಲ್ಕನೆಯ ಭಾಗದಲ್ಲಿ ಮಾನವ ಆಧ್ಯಾತ್ಮಿಕವಾಗಿ

ಸಾಧಿಸಿದ ಸಿದ್ಧಿಯನ್ನು ವೈಜ್ಞಾನಿಕವಾಗಿ ಸಾಧಿಸಿದ ಪ್ರಗತಿಯನ್ನು, ಆ ಹಿನ್ನೆಲೆಯಲ್ಲಿ ಬದುಕಿಗೆ ಒದಗಿದ ಅನುಕೂಲ ಅನಾನುಕೂಲಗಳನ್ನು ಮಾನವನ ಬದುಕಿನ ಮೂರು ಹಂತಗಳ ತಾತ್ವಿಕ ಮಥನವನ್ನು, ಜಿಜ್ಞಾಸೆ, ವಿಜ್ಞಾನಪ್ರಗತಿ, ಅಹಂಕೃತಿ, ಅತೀತ ಶಕ್ತಿಗಳ ವಿಚಾರವನ್ನು ಪ್ರಸ್ತಾಪಿಸಲಾಗಿದೆ. ಇಲ್ಲಿ ಮಾನವ ಅರಿಷಡ್ವರ್ಗಗಳಿಗೆ ಸಿಲುಕಿ ದೇಹ ಮನಸ್ಸಿನ ಅಧೀನನಾಗಿ ಅತೀತ ಶಕ್ತಿಗಳ ಆರಾಧನೆಗೆ ತೊಡಗಿದ್ದಾನೆ. ತಾನು ಯಾವುದನ್ನು ತನ್ನ ಬುದ್ಧಿ ಸಾಮರ್ಥ್ಯಗಳಿಂದ ಸಾಧಿಸಿದ್ದಾನೋ ಅದೇ ಅವನಿಗೆ ಪರೋಕ್ಷವಾಗಿ ಕಷ್ಟನಷ್ಟಗಳಿಗೂ ಕಾರಣವಾಗಿದೆ. ಹೀಗೆ ಬುದ್ಧಿ ಸಾಮರ್ಥ್ಯದಿಂದ ವೈಜ್ಞಾನಿಕವಾಗಿ ಪಡೆದ ಪ್ರಗತಿ ನೀರು ಗಾಳಿಗಳನ್ನೂ ಕಲುಷಿತ ಮಾಡುತ್ತದೆ. ಮನೋವಿಕಾಸದ ಪ್ರಗತಿಯ ಹಿನ್ನೆಲೆಯಲ್ಲಿ ಕಾಣಿಸಿದ ಮಾನವನ ಮನಸ್ಸು ಮತ್ತೆ ಪ್ರೀತಿಯನ್ನು ಬಯಸುತ್ತದೆ; ಶಾಂತಿಯನ್ನು ಹುಡುಕುತ್ತದೆ. ಹೀಗೆ ಈ ನಾಲ್ಕನೆಯ ಭಾಗ :

"ಆ ನೆರಳುಗಳಿಗೆ ಹೆದರಿಕೊಳ್ಳದೆ
ಆ ಗುಳ್ಳೆಗಳಿಗೆ ಭ್ರಮಿಸಿ ಹೋಗದೆ
ಸಾಗಿ ಹೋಗುತ್ತಾನೆ ಕಾಂತಿ ಲಹರಿಯಂತೆ
ಚೈತನ್ಯ ಕೇತನ ಮಾನವ.
ಆ ಬೆಳಕು
ಆಕಳಿಸುವ ಕಾಲಕ್ಕೆ ಚುಚ್ಚುಗೋಲು.
ಆ ಹೆಜ್ಜೆ
ನಿಂತುಹೋದ ಮಾರ್ಗಕ್ಕೆ ಬೇರೆ ತಿರುವು."

ಎಂದು ಹೇಳುತ್ತಾ ಮುಕ್ತಾಯವಾಗುತ್ತದೆ.

- ೫ -

"ಹೆಜ್ಜೆ ಸಾಗುತ್ತದೆ
ಕೆಸರಲ್ಲಿ ಅಡಗಿದ ಮುಳ್ಳುಗಳನ್ನು ತುಳಿಯುತ್ತಾ;
ಹೆಜ್ಜೆ ಸಾಗುತ್ತದೆ
ಅಡ್ಡವಾದ ಮಂಜುಗಡ್ಡೆಗಳನ್ನು ಕಕ್ಕಿಸುತ್ತಾ."

ಎಂದು ಪ್ರಾರಂಭವಾಗುವ ವಿಶ್ವಂಭರಾ ಕಾವ್ಯದ ಐದನೆಯ ಭಾಗದಲ್ಲಿ ಮಾನವ ವೈಜ್ಞಾನಿಕವಾಗಿ ತಾನೆಷ್ಟೇ ಪ್ರಗತಿಯ ಶಿಖಕ್ಕೇರಿದರೂ ಅವನು ಮಾನಸಿಕವಾಗಿ ಅಧೋಗತಿಗೆ ಇಳಿಯಬೇಕಾಗಿದೆ. ಇಲ್ಲಿ ವರ್ಣಭೇದ, ನರಪೀಡನೆ, ದಿವಾಳಿತನ, ದಾಸ್ಯಾದಿಗಳು ಅಧಿಕವಾಗಿ, ಅವುಗಳಿಂದ ಮುಕ್ತಿ ಪಡೆಯಲು ಪ್ರಯತ್ನಗಳು ಮೊದಲಾಗಿವೆ. ಇಲ್ಲಿ ಅಬ್ರಹಾಂ ಲಿಂಕನ್, ಕಾರ್ಲ್‌ಮಾರ್ಕ್ಸ್, ಲೆನಿನ್, ಮಹಾತ್ಮಗಾಂಧಿ ಮೊದಲಾದ ಮಹಾನುಭಾವರು ಮಾನವನ ಸಾತ್ವಿಕ ಪ್ರವೃತ್ತಿಗ

ಪ್ರತೀಕಗಳಾಗಿದ್ದಾರೆ. ಇವರು ವಿಶ್ವಮಾನವ ಕಲ್ಯಾಣಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೆ. ಮಾನವ ತನ್ನ ಕಾರಣವಾಗಿಯೇ ತಾನು ಅಧೋಗತಿ ಗಿಳಿದಾಗಲೂ, ಅದೇ ಮಾನವ ಶಕ್ತಿ ಅದಕ್ಕೆ ಪರಿಹಾರೋಪಾಯ ಚೇತನವಾಗಿ ನಿಲ್ಲಬಲ್ಲದು. ಮಾನವ ಮತ್ತು ಪ್ರಕೃತಿಗಳ ನಡುವೆ ಅನೇಕ ರೂಪಗಳಲ್ಲಿ ಕಾಣಿಸುವ ಭೇದಗಳಲ್ಲಿ ಅಭೇದವನ್ನು ಇಲ್ಲವ ಏಕತ್ವವನ್ನು ಕವಿ ನಿರೂಪಿಸಿದ್ದಾರೆ. ಇಡೀ ಈ ಕಾವ್ಯದಲ್ಲಿ ಕವಿ ಸಂಕೇತಗಳನ್ನು ಮಾತ್ರ ಬಳಸಿರುವುದೊಂದು ವಿಶೇಷ. ಇಡೀ ಕಾವ್ಯದಲ್ಲಿ ಎಲ್ಲೂ ಸಾಕ್ರಟೀಸ್, ಅಲೆಗ್ಜಾಂಡರ್, ಬುದ್ಧ, ಕ್ರಿಸ್ತ, ಅಶೋಕ, ಮಹಾತ್ಮ ಗಾಂಧಿ ಇತ್ಯಾದಿ ಹೆಸರುಗಳು ನೇರವಾಗಿ ಬರುವುದೇ ಇಲ್ಲ. ಅವರ ಚಿತ್ರಗಳು ಪರೋಕ್ಷವಾಗಿ ಮಾತ್ರ ಕಾಣಿಸಿಕೊಳ್ಳುತ್ತವೆ. ಆ ಪಾತ್ರಗಳ ಲಕ್ಷ್ಯದ ವರ್ಣನೆಯಾಗುವಲ್ಲಿ ಆ ವ್ಯಕ್ತಿಗಳು ಓದುಗರ ಕಣ್ಣಿಗೆ ಕಾಣಿಸಿಕೊಳ್ಳುತ್ತಾರೆ.

ಮಾನವ ಕೈಗೊಂಡ ಜೀವನ ಪಯಣಕ್ಕೆ ಅಡೆತಡೆಗಳು ಹಲವಾರು. ಪ್ರತಿಹೆಜ್ಜೆಗೂ ಒಂದಿಲ್ಲೊಂದು ತೊಂದರೆ. ಆದರೂ ಮಾನವ ಹಿಂಜರಿಯುವುದಿಲ್ಲ. ಅವನು ನಿರಂತರ ಪಯಣಿಗನಾಗಿ ಸಾಗುತ್ತಲೇ ಇರುತ್ತಾನೆ. ಈ ಕಾವ್ಯದಲ್ಲಿ ಮಾನವನನ್ನು ಅವನ ಪ್ರಯತ್ನಗಳನ್ನು ಕೇಂದ್ರ ಬಿಂದುವಾಗಿಟ್ಟುಕೊಳ್ಳಲಾಗಿದೆ. ಎಲ್ಲಕ್ಕೂ ಮನುಷ್ಯ ಅಂತಿಮವಾಗಿ ಆಧ್ಯಾತ್ಮಿಕಕ್ಕೆ ಶರಣಾಗುತ್ತಾನೆ. ಇದು ಮಾನವನಿಗೆ ತನ್ನದೇ ಆದ ಪರಿಹಾರವನ್ನು ನೀಡಬಲ್ಲಬಹುದೆಂದು ಕವಿಯ ಆಶಯವಾಗಿದೆ.

"ಮೊದಲ ಬೀಜ ಮನಸ್ಸು
ತುಲಾರೂಪ ಮನಸ್ಸು.
ಮನಸ್ಸಿಗೆ ತೊಡಿಗೆ ಮನುಷ್ಯ
ಮನುಷ್ಯನಿಗೆ ಉಡುಪು ಜಗತ್ತು.
ಇದೇ ವಿಶ್ವಂಭರಾ ತತ್ತ್ವ
ಇದೇ ಅನಂತ ಜೀವಿತ ಸತ್ಯ."

ಎಂದು ಹೇಳುತ್ತಾ ವಿಶ್ವಂಭರಾ ಕಾವ್ಯ ತನ್ನ ಕಡೆಯ ಐದನೇ ಭಾಗದಿಂದ ಮುಕ್ತಾಯಗೊಳ್ಳುತ್ತದೆ.

ವಿಶ್ವಂಭರಾದಲ್ಲಿ ಕಾಲಾವಧಿಯಿಲ್ಲದ ಮಾನವನು ನಾಯಕನಾಗಿರುವ ಆದರೆ ನೇರವಾಗಿ ಯಾವ ನಿರ್ದಿಷ್ಟ ವ್ಯಕ್ತಿಗಳಿಗೂ ಅನ್ವಯವಾಗದ ರೀತಿಯಲ್ಲಿ ಶಾಶ್ವತವಾದ ಭೂ-ಆಕಾಶಗಳ ನಡುವೆ ನಡೆಯುತ್ತಿರುವ ವಿಶ್ವ ಜೀವರಾಶಿಗಳಲ್ಲಿ ಶ್ರೇಷ್ಠನಾದ ಮನುಷ್ಯನ ನಿರಂತರ ಪ್ರಯಾಣದಲ್ಲಿನ ಆಗುಹೋಗುಗಳ ಚಿತ್ರಣವಿದೆ. ವಿಜ್ಞಾನದ ಪ್ರಗತಿಯ ಕಾರಣವಾಗಿ ಮಾನವ ಗ್ರಹಗಳ ಮೇಲೆ ನಿಲ್ಲಬಲ್ಲವನಾಗಿದ್ದಾನೆ. ಆದರೆ ಅವನು ಒಂದೆಡೆ ತನ್ನ ಪ್ರಗತಿಯ ಎಳೆಗಳನ್ನು ಬಿಚ್ಚುತ್ತಾ ಸಾಗಿದರೆ, ಮತ್ತೊಂದೆಡೆ ಅವನು ಹಾಗೆ ಬಿಚ್ಚಿದ ಎಳೆಗಳೇ ಅವನನ್ನು ಸುತ್ತಿಸುತ್ತಿ ತರಣಿಯ ಹುಳುತನ್ನೆಳೆಯನ್ನು

ತಾನೇ ಸುತ್ತಿಕೊಂಡು ಅವನತಿ ಪಡೆಯುವಂತೆ ಬಂಧಿಸಿ ಬಲಿ ತಗೆದುಕೊಳ್ಳುತ್ತವ. ಆದರೆ ಮಾನವ ಸತ್ತರೂ ಮತ್ತೆಮತ್ತೆ ಹುಟ್ಟುತ್ತಿರುತ್ತಾನೆ.

"ಇದು ನಿತ್ಯಪ್ರಸ್ಥಾನ
ಏರಿಳಿತಗಳು ತಪ್ಪುವುದಿಲ್ಲ.
ಇದು ನಿತ್ಯಪ್ರಯೋಗ
ಎದಿರೇಟುಗಳು ತಪ್ಪುವುದಿಲ್ಲ.
ಮಸಣದಿಬ್ಬಗಳ ಸುತ್ತಲೂ
ಊರುಗಳ ಸಂಸಾರಗಳು".

ಮಾನವ ತನ್ನ ಬುದ್ಧಿ ಸಾಮರ್ಥ್ಯದಿಂದ ಕಲಾತ್ಮಕವಾಗಿ, ವೈಜ್ಞಾನಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಸಾಧನೆಗಳಿಸಿ ಅವನು ಹಾಗೆಯೇ ನಿಲ್ಲಲಾರ. ಅವನು ಎಲ್ಲಿಂದ ಬಂದಿದ್ದಾನೋ ಮತ್ತೆ ಅಲ್ಲಿಗೇ ಹೋಗಿ ಸೇರಿಕೊಳ್ಳುತ್ತಾನೆ. ಆದರೆ ಅದು ಅಲ್ಲಿಗೂ ನಿಲ್ಲುವುದಿಲ್ಲ. ಮಾನವ ತನ್ನ ಹುಟ್ಟಿಗೆ ಮೊದಲು ಇರಲಿಲ್ಲ. ಅವನಿಲ್ಲದಿದ್ದರೂ ಭೂ-ಆಕಾಶಗಳು ಇದ್ದೇ ಇವೆ. ಮಾನವನು ಇಲ್ಲದ ಮೊದಲು ಅವು ಇವೆ. ಅವುಗಳ ಭವಿಷ್ಯದಲ್ಲೆ ಮಾನವನಿದ್ದಾರೆ. ಈ ರೀತಿ ವಿಶಿಷ್ಟವಾದ ಭಾವವೈಚಿತ್ರ್ಯದಿಂದ ಪ್ರಾರಂಭಿಸಿ ಒಂದು ವಿಶ್ವ ಭಾವಸ್ಥಾಯಿಯನ್ನು ನಿಲ್ಲಿಸಿ, ಕಾವ್ಯದ ಪೂರ್ತಿ ಅದೇ ಭಾವಸ್ಥಾಯಿಯನ್ನು ನಡೆಸಿದ್ದಾರೆ ಕವಿ. ಇದು ಕವಿಯ ಪ್ರತಿಭಾ ಸಾಮರ್ಥ್ಯಕ್ಕೆ ಉತ್ತಮ ಉದಾಹರಣೆ. ಮಾನವ ಪ್ರಕೃತಿಗಳ ನಡುವೆ ಅನೇಕ ರೂಪಗಳಲ್ಲಿ ಕಾಣುವ ಭೇದಗಳಲ್ಲಿ ಏಕತ್ವ ತೋರಿಸಿದ್ದಾರೆ. ಕವಿ ಡಾ. ಸಿನಾರೆ ರೂಪಾಂತರಗಳಲ್ಲಿ ಏಕರೂಪವನ್ನು ದರ್ಶಿಸುವುದು ಮಾತ್ರವಲ್ಲದೆ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಪರಿಸ್ಥಿತಿಗಳಲ್ಲಿ ಏಕ ಸೂತ್ರವನ್ನು ಸಾಧಿಸಿರುವುದು ಕವಿ ಪ್ರತಿಭೆಗೆ ಸಾಕ್ಷಿಯಾಗಿದೆ.

ಈ 'ವಿಶ್ವಂಭರಾ' ಕಾವ್ಯವನ್ನು ವಿಮರ್ಶಕರು ಐತಿಹಾಸಿಕ ಮಹಾಕಾವ್ಯ ಎಂದಿದ್ದಾರೆ. ಮಾನವನ ವೈವಿಧ್ಯಮಯ ವಿಕಾಸವನ್ನು ಐತಿಹಾಸಿಕ ದೃಷ್ಟಿಯಿಂದ ಕಾವ್ಯಮಯವಾಗಿ ಚಿತ್ರಿಸಿರುವುದರಿಂದ ಹಾಗೆ ಭಾವಿಸಿದ್ದಾರೆ. ಈ ದೃಷ್ಟಿಯಿಂದ ಈ ಕೃತಿ ಅಪೂರ್ವವಾದದ್ದೆಂದು ಅವರು ಗುರುತಿಸಿದ್ದಾರೆ. ಈ ಕಾವ್ಯ ಕೃತಿಯಲ್ಲಿ ಕವಿ ಡಾ. ರೆಡ್ಡಿ ಅವರ ಇತರ ಕಾವ್ಯಕೃತಿಗಳಲ್ಲಿನ ಶೈಲಿಗಿಂತ ಭಿನ್ನವಾದ ಕಾವ್ಯ ಶೈಲಿಯನ್ನು ನೋಡಬಹುದಾಗಿದೆ. ಭಾಷೆ, ಭಾವ, ಶೈಲಿ, ವಿನೂತನ ನಿರೂಪಣೆ ಇತ್ಯಾದಿ ಎಲ್ಲ ದೃಷ್ಟಿಗಳಿಂದಲೂ 'ವಿಶ್ವಂಭರಾ' ಡಾ. ಸಿ. ನಾರಾಯಣ ರೆಡ್ಡಿ ಅವರ ಶ್ರೇಷ್ಠ ಕಾವ್ಯಕೃತಿಯಾಗಿದೆ.

೧೯೮೦ರಲ್ಲಿ ತೆಲುಗಿನಲ್ಲಿ ಪ್ರಥಮಬಾರಿಗೆ ಪ್ರಕಟವಾದ 'ವಿಶ್ವಂಭರ' ಕೃತಿಯನ್ನು ನಾನು ಮೊದಲು ಕನ್ನಡಕ್ಕೆ ಅನುವಾದಿಸಿದ್ದು, ೧೯೯೦ರಲ್ಲಿ ಪ್ರಕಟವಾದ ತೆಲುಗಿನ

ವಿಶ್ವಂಭರ ದ್ವಿತೀಯ ಮುದ್ರಣ ಕೃತಿಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಲಾಗಿದ್ದು, ಕವಿ ಡಾ. ರೆಡ್ಡಿ ಅವರ ಅಪೇಕ್ಷೆ ಮೇರೆಗೆ ಅದರಂತೆ ಕನ್ನಡಾನುವಾದವನ್ನು ಸಿದ್ಧಪಡಿಸಲಾಗಿರುತ್ತದೆ.

ಡಾ. ಸಿ. ನಾರಾಯಣರೆಡ್ಡಿ ಅವರ ತೆಲುಗಿನ ಆಯ್ದ ಕವನಗಳ ಕನ್ನಡಾನುವಾದ 'ಹೊಸ ಮುಖ ತೊಟ್ಟುಕೊ' (೧೯೭೬), ನಾನು ಅನುವಾದಿಸಿದ ಮೊದಲ ಕವನಸಂಕಲನ. ಇದರಲ್ಲಿನ ಬಹುತೇಕ ಕವನಗಳನ್ನು ನಾನು ನನ್ನ ವಿದ್ಯಾರ್ಥಿದೆಸೆಯಲ್ಲೇ ಅನುವಾದಿಸಿರುತ್ತೇನೆ. ನಂತರ ಅನುವಾದಿಸಿರುವ ಈ ಕೃತಿಯೂ ಸೇರಿ ಅವರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಕೃತಿ 'ಜ್ವಾಲೆಗಳು, ಮತ್ತು ಮಾನವ' (ಮಂಟಲೂ-ಮಾನವುಡೂ) [೧೯೯೯] ಹಾಗೂ ಅವರ ಆಯ್ದ ನೂರೊಂದು ಕವನಗಳ (ಅವಧಿ : ೧೯೭೫-೧೯೯೪) ಕನ್ನಡಾನುವಾದ ಸಂಕಲನ 'ಸಮನ್ವಯ' (೧೯೯೯) ಪ್ರಕಟವಾಗಿರುತ್ತದೆ. ಡಾ. ಸಿ. ನಾರಾಯಣ ರೆಡ್ಡಿ ಅವರು ನನ್ನ ವಿದ್ಯಾರ್ಥಿ ದೆಸೆಯಿಂದಲೂ ನನ್ನ ಅನುವಾದ ಕಾರ್ಯಗಳಿಗೆ ತುಂಬು ವಾತ್ಸಲ್ಯದಿಂದ ಬೆನ್ನುತಟ್ಟಿ ಪ್ರೋತ್ಸಾಹಿಸುತ್ತಿದ್ದಾರೆ. ಮತ್ತೆ ಇದೀಗ ಅವರ ಈ 'ವಿಶ್ವಂಭರಾ' ಕಾವ್ಯಕೃತಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪುನರ್ ಮುದ್ರಿಸಲು ಅನುಮತಿ ನೀಡಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಅನಂತ ಧನ್ಯವಾದಗಳು ಸಲ್ಲುತ್ತವೆ.

ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸುವಲ್ಲಿ ಸೂಕ್ತ ಸಲಹೆಗಳನ್ನು ನೀಡಿ ಉಪಕರಿಸಿದ ನನ್ನ ತೆಲುಗು ಅಧ್ಯಾಪಕರೂ, ಖ್ಯಾತ ತೆಲುಗು ಸಾಹಿತಿಗಳೂ ಆದ ಪ್ರೊ. ತಂಗಿರಾಲ ವೆಂಕಟಸುಬ್ಬರಾವು ಅವರಿಗೆ, ಸಹೃದಯ ಹಿತೈಷಿಗಳೂ, ಖ್ಯಾತ ಕನ್ನಡ ಸಾಹಿತಿಗಳೂ ಆದ ಪ್ರೊ. ಬಿ. ನಂ. ಚಂದ್ರಯ್ಯನವರಿಗೆ, ಸಹೃದಯ ಮಿತ್ರರಾದ ಶ್ರೀ ಶಾರದಾ ಪ್ರಸಾದ್ ಅವರಿಗೆ, ಈ ಕೃತಿಯನ್ನು ಪುನರ್ ಪ್ರಕಟಣೆ ಮಾಡಿದ ಈ ಹಿಂದಿನ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರೂ ಪ್ರಸಿದ್ಧ ಸಾಹಿತಿಗಳೂ ಆದ ಪ್ರೊ. ಹೆಚ್. ಜೆ. ಲಕ್ಕಪ್ಪಗೌಡ ಅವರಿಗೆ, ಪ್ರಾಧಿಕಾರದ ಈಗಿನ ಅಧ್ಯಕ್ಷರೂ ಹೆಸರಾಂತ ಸಾಹಿತಿಗಳೂ ಆದ ಡಾ. ಮಲ್ಲೇಪುರಂ ಜಿ. ವೆಂಕಟೇಶ್ ಅವರಿಗೆ, ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಪಿ. ಎನ್. ಮಲ್ಲಿಕಾರ್ಜುನಸ್ವಾಮಿ ಅವರಿಗೆ, ಮುಖಪುಟ ವಿನ್ಯಾಸ ಮಾಡಿದ ಶ್ರೀ ಯು. ಟಿ. ಸುರೇಶ್ ಅವರಿಗೆ, ಕೃತಿಯನ್ನು ಅಂದವಾಗಿ ಮುದ್ರಿಸಿದ ಲಕ್ಷ್ಮಿ ಮುದ್ರಣಾಲಯ ದವರಿಗೆ, ಈ ಕೃತಿ ಪುನರ್ ಮುದ್ರಣವಾಗಿ ಪ್ರಕಟವಾಗುವಲ್ಲಿ ನೇರವಾಗಿ ಮತ್ತು ಪರೋಕ್ಷವಾಗಿ ನೆರವಾದ ಎಲ್ಲರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳು ಸಲ್ಲುತ್ತವೆ.

ಬೆಂಗಳೂರು-೫೬೦ ೦೦೨ **ಮಾರ್ಕಂಡಪುರಂಶ್ರೀನಿವಾಸ**
ದಿನಾಂಕ : ೨೦.೬.೨೦೦೧

1

ನಾನು ಹುಟ್ಟುವ ಮೊದಲೆ
ನೆತ್ತಿಮೇಲೆ ನೀಲಿತೆರೆ.
ಕಾಲಕೆಳಗೆ ಧೂಳಿಪೊರೆ.
ಆ ತೆರೆಗಂಟಿದ ಕನ್ನಡಿ ಬಿಲ್ಲೆಗಳಲ್ಲಿ
ಮಿಣುಕುಹುಳು ಕಣ್ಣುರೆಪ್ಪೆ ಮಿಟುಕಿಸಿವೆ.
ಬೆಂಕಿ ಮುದ್ದೆಯಿಂದ
ಚಿಮ್ಮಿಕೊಂಡು ಬಂದ ಹಸಿಬೆಳಕು
ಹಾಲಗೆನೆಯಂತೆ ಹಾಸಿಕೊಂಡಿದೆ.
ಆವಿಯಲ್ಲಿ ಆ ನೀಲಿತೆರೆ
ಹತ್ತಿಕೊಂಡಾಗ
ಅಂಟಿದ ಬಿಲ್ಲೆಗಳು ಸಿಡಿದು ಬಿದ್ದಿವೆ.
ಧೂಳಿಪೊರೆಯಲ್ಲಿ ಹೊಕ್ಕ
ಬೀಜಗಳ ಕಿಬ್ಬೊಟ್ಟೆಯಲ್ಲಿ
ಗಿಡಗಳು ರಕ್ತತುಂಬಿಕೊಂಡಿವೆ.
ಕಾಲುಮುರಿದು ನೆಲದ ಮೇಲೆ ಬಿದ್ದ ಮೋಡಗಳು
ಮತ್ತೆ ಕಾಲುಗಳು ಮೊಳೆಯಿಸಿಕೊಂಡಿವೆ.
ಈ ಪೊರೆಯಲ್ಲಿ ಜಡಮೌನ
ಮೈ ಮುರಿದುಕೊಂಡಾಗ
ರೆಕ್ಕೆಗಳು, ಗೊರಸುಗಳು, ಮೋರೆಗಳು, ಕೋರೆಗಳು
ದಿಕ್ಕುಗಳ ಡೊಕ್ಕೆಗಳಲ್ಲಿ ಪ್ರಜ್ವಲಿಸಿವೆ.
ನಾನು ಹುಟ್ಟುವ ಮೊದಲು —
ಅದೆಷ್ಟಾಗಿ ಮೋಡಗಳು ಎದುರು ನೋಡಿದವೋ
ನೋಟಗಳ ಸೋಪಾನಗಳಮೇಲೆ ಸಾಗಿಬಂದು
ತಮ್ಮನ್ನು ಹಿಂಡಿಕೊಳ್ಳುವ ಆ ತಪನ ಯಾವುದೆಂದು.
ಅದೆಷ್ಟಾಗಿ ನಕ್ಷತ್ರಗಳು ನಿರೀಕ್ಷಿಸಿದವೋ
ಗಣಿತ ಸೂತ್ರಗಳಿಂದ ತಮ್ಮ ಗತಿಗಳನ್ನು

ಮಣಿಗಳಾಗಿ ಪೋಣಿಸುವ ಆ ಮನಸ ಯಾವುದೆಂದು.
ಉಷಸ್ಸುಗಳೆಷ್ಟಾಗಿ
ಉದ್ವೇಗಪಟ್ಟವೋ
ಅರಳಿಕೊಂಡ ತಮ್ಮ ಕಣ್ಣಕಡಲಲ್ಲಿ
ಹುಚ್ಚಾಗಿ ಸೂರೆಯೇಳುವ ವಿಮುಕ್ತಾತ್ಮಗಳಿಲ್ಲವೆಂದು.
ಬೆಳದಿಂಗಳುಗಳೆಷ್ಟಾಗಿ ವಿಹ್ವಲಿಸಿದವೋ
ತಾವು ಬೀಸಿ ಎಸೆದ ಅರಿವೆಯ ಮಡಿಲಲ್ಲಿ
ತಲೆಮರೆಸಿಕೊಳ್ಳುವ ಮಿಥುನಾತ್ಮಗಳಿಲ್ಲವೆಂದು.
ಅದೆಷ್ಟು ತವಕವೋ ಬಿದಿರಿಗೆ
ಪ್ರತ್ಯಂಗ ನಾದವಾಗಿ ಪರಿಣಮಿಸಬೇಕೆಂದು.
ಅದೆಷ್ಟು ಪರಿತಾಪವೋ ಬೆಟ್ಟಕಲ್ಲುಗಳಿಗೆ
ಅಖಿಲಾಣುಗಳು ಮೂರ್ತಿಗಳಾಗಿ ರೂಪುಗೊಳ್ಳಬೇಕೆಂದು.
ಅದೆಷ್ಟು ಬಯಕೆಯೋ ನವಿಲುಗಳಿಗೆ
ಯಾವ ಪಾದಗಳಾದರೂ ತಮ್ಮ ಪದಲಯಗಳನ್ನು ಆಯ್ದುಕೊಳ್ಳಬೇಕೆಂದು.
ಅದೆಷ್ಟು ಉತ್ಕಂಠವೋ ಕಲಕಂಠಗಳಿಗೆ
ಯಾವ ಕಂಠದಲ್ಲಾದರೂ ತಮ್ಮ ಸ್ವರದೆಳೆ ಅಳವಡಿಸಬೇಕೆಂದು.
ಇದ್ದು ಇದ್ದೂ ಸರಸ್ಸುಗಳು
ಪೂರಾ ಮೇಲೆದ್ದು ನೋಡುತ್ತವೇನೊ
ಉಗುರುಬೆಚ್ಚನೆ ಶರೀರಗಳನ್ನು
ಹೃದಯಗಳಿಂದ ತಾಗಿ ನೋಡಬೇಕೆಂದು.
ಉಕ್ಕಿಉಕ್ಕಿ ಸಮುದ್ರಗಳು
ಮುಗಿಲ ತಂದೆಯನ್ನು ಬೇಡುವುವೇನೊ
ಎಳೆಗೂಸುಗಳಂತೆ ಎದೆಗಳ ಮೇಲೆ ಓಡಾಡುವ
ಹಡಗುಗಳು ಯಾವಾಗ ಬರುತ್ತವೆಂದು.

ಅದೆಂದೋ ನಾನು ಹುಟ್ಟುವ ಮೊದಲು —
ಗಿಣಿಗಳ ಮೂಗಿನಲ್ಲಿ
ಚಿಗುರುತೊಟ್ಟ ನುಡಿಗಳು ;
ಸುಳಿಗಾಳಿಯ ರೆಕ್ಕೆಗಳಲ್ಲಿ
ಹೆಡೆಯೆತ್ತಿದ ರೋದನ -
ಒಂದೇನೇನೊ !

ಗುಬುರೆಲೆಗಳಲ್ಲಿ ಅವಿತ
ಗಿಡಗಳ ಮುಖಗಳನ್ನು ಸುಡುವ ಉರಿಬಿಸಿಲು
ಬಾಡಿದ ಗಿಡಗಳ ಎಲೆಗಳ ತಡವಿ
ಮತ್ತೆ ಮೆರುಗಿಡುವ ಹಾಲುಬೆಳದಿಂಗಳು —
ಒಂದೇನೇನೊ !
ಉದಯಾದ್ರಿ ಮೇಲೆ
ಶಿರಸ್ಸ ಝುಂಡಾ ಎತ್ತಿ
ಅಡಿಯಿಟ್ಟ ಉದಯ ;
ಪಡುವಣದ ನೇಣುಗಂಬದ ಮೇಲೆ
ಬೆಳಕಿನ ತಲೆಯನ್ನು ನೇತುಬಿಟ್ಟ
ಅಸ್ತಮಯ —
ಒಂದೇನೇನೊ !
ಕತ್ತಲ ಕಾಗದದ ಮೇಲೆ
ಬಾಲದಿಂದ ಅಕ್ಷರಗಳನ್ನು ಕೆತ್ತುವ ಮಿಣುಕು ಹುಳುಗಳು
ಆಕಾಶ ಶಿಖರಗಳಲ್ಲಿ
ಪಾದರಸದ ಝರಿಗಳನ್ನು
ತೆವಳಿಸಿದ ಮೆರಗುಬಳ್ಳಿಗಳು —
ಒಂದೇನೇನೊ !
ಆಳವನ್ನು ಒಳಪಡಿಸಿಕೊಂಡ ಕಣಿವೆಗಳು
ಎತ್ತರವ ಮೇಲೇರಿಸಿಕೊಂಡ ಬೆಟ್ಟಗಳು —
ಒಂದೇನೇನೊ !
ಜೇನಹನಿಯನ್ನು ಬೆರಸಿ ಕಡಿದ ನೊಣಗಳು
ವಿಷ ಬಿಂದುಗಳಿಗೆ ಗೂಡುಗಟ್ಟಿದ ನಾಗರಗಳು —
ಒಂದೇನೇನೊ !
ಇಷ್ಟಕ್ಕೂ ನಾನ್ಯಾರು ?
ಯಾವ ಗಗನದ ಮನೆಯವನು ?
ಯಾವ ಕಾಲದ ಎಳೆಗೂಸು ?
ಹುಚ್ಚೆದ್ದ ಯಾವಶಕ್ತಿ
ಬೀಸಿ ಎಸೆದ ಚೆಂಡು ನಾನು ?
ಏಕೆ ಹೀಗೆ ಆಳೆತ್ತರವಾಗಿ ಉರುಳುತ್ತಿದ್ದೇನೆ ?
ಈ ಪೊರೆಗಳನ್ನು ಮೈಗೆ ಸುತ್ತಿಕೊಂಡು

ಏಕೆ ಹೀಗೆ ಆಳೆತ್ತರ ಉರುಳುತ್ತಿದ್ದೀನಿ ?
ಯಾರದು ಹಿಂಬಾಲಿಸುತ್ತಿರುವುದು ?
ನಾನೇ ತಾನಾದಂತೆ
ನೆರಳಾಗಿ ಮಾತಾಡಿಸುತ್ತಿರುವುದು.
ಆ ರೂಪ
ಕಪ್ಪುಮೋಡದಂತೆ ಅಟ್ಟಿಸಿಕೊಂಡು ಬರುತ್ತಿದೆ
ಆಕಾಶವಪ್ಪುಗೆಯಲ್ಲಿ ಅದುಮಿಕೊಳ್ಳಲೇ ?
ಆ ಮೂರ್ತಿ
ವರ್ಷಾಕಾಲದ ನದಿಯಂತೆ ಒರೆಸುತ್ತಿದೆ
ದಡಗಳ ಕೈಗಳಿಂದ ಅಪ್ಪಿಕೊಳ್ಳಲೇ ?
ಆ ನೋಟ
ಕತ್ತಲನ್ನು ಕೊಯ್ದು ಕೊಂಡು ಬರುತ್ತಿದೆ
ಹಿಡಿದುಕೊಳ್ಳಲೆ ಗುಂಡಿಗೆಯ ಹಿಡಿಯಲ್ಲಿ ?
ಆ ನಗೆ
ಹುಣ್ಣಿಮೆಗಳನ್ನು ಹೊತ್ತು ತರುತ್ತಿದೆ
ಇಳಿಸಿಕೊಳ್ಳಲೆ ದೇಹದ ಹೊಸತಿಲಲ್ಲಿ ?
ಆ ಸ್ಪರ್ಶ ವರ್ಷಿಸಿದ ಅನುಭೂತಿ
ಅಗಾಧ ಸುಪ್ತಸಾಗರಗಳ ತರಂಗೋದ್ಧತಿ.
ಆ ಕರೆ ಅನುವದಿಸಿದ ಆರ್ದ್ರಗೀತೆ
ಹೃದಯಗಳ ಸಮಲಯಗಳ ಆವಿಷ್ಕೃತಿ.
ಆಗ ತಿಳಿದಿದೆ ಬುವಿಗೆ
ಅಂಬರವನ್ನು ತಾನು ಹೊದ್ದುಕೊಂಡಿದ್ದೇನೆಂದು.
ಆಗ ತಿಳಿದಿದೆ ನಿರ್ಝರಿಗೆ
ಅಂಬುಧಿಯನ್ನು ತಾನು ಕಟ್ಟಿಕೊಂಡಿದ್ದೇನೆಂದು.
ಗಾಳಿ ತನ್ನನ್ನು ತಾನು ಆಘ್ರಾಣಿಸಿಕೊಂಡಿದೆ
ಹೂಗಳ ಉಸಿರೇ ತನ್ನ ಮೈಯೆಲ್ಲಾ.
ತರುವು ತನ್ನನ್ನು ತಾನು ತಡವಿ ನೋಡಿಕೊಂಡಿದೆ
ತರುಣ ಲತಿಕೆಗಳ ಒತ್ತುಗಳೇ ಮೈ ತುಂಬಾ.
ಹಾಗೆ ಕಲೆತುಕೊಂಡ ಆದಿಮಿಥುನ
ಅಂತರಂಗದಲ್ಲಿ ಒಂದು ಸ್ಮೃತಿವಿಹಂಗ.
ಆ ಸ್ಮೃತಿ ತನ್ನ ರೆಕ್ಕೆಗಳ ಅಂಚುಗಳಿಂದ

ಗೀಚಿದೆ ಒಂದು ಸ್ವಪ್ನ ವರ್ಣಚಿತ್ರ.
ಆಕೃತಿ ಪ್ರಕೃತಿ ಬೇರೆಯಾದರೂ
ಆ ಚಿತ್ರದಲ್ಲಿ ಇರುವುದು ನಾವೇ.
ಆಗ ನಮಗಿಲ್ಲ ಈ ಅನುಭವಮುದ್ರೆ
ಅದೊಂದು ಜಾಗ್ರನ್ನಿದ್ರೆ.
ಆಗ ಎಲ್ಲಿ ಈ ರಸಾಂದೋಳನ
ಅದೊಂದು ಜಡಚೇತನ.
ಆಗಿನ ನೋಟ
ಶಿಲೆಗಳ ಮೇಲೆ ಬೀಸುವ ಗಾಳಿ.
ಆಗಿನ ಸ್ಪರ್ಶ
ಮಂಜುಗಡ್ಡೆ ಕಲಿಸುವ ಮೌನಭಾಷೆ.

ನಡಿಗೆಯಿದೆ
ಅದು ಅಡಿಗಳಿಗೇ ತಿಳಿಯದ್ದು—
ನುಡಿಯಿದೆ
ಅದು ತುಟಿಗಳಿಗೇ ತಿಳಿಯದ್ದು
ದೃಶ್ಯವಿದೆ
ಅದು ಹಗಲಿರುಳುಗಳಿಲ್ಲದ್ದು
ಕಾಲವಿದೆ
ಅದು ಕದಲದೆ ಹರಿಯುವ ನದಿ.
ಆಗಲೂ ಇದ್ದೇವೆ ಇಬ್ಬರು
ಗಗನ ತೋಟದಲ್ಲಿ ವಿಕಸಿಸಿದ ಗೊಂಬೆಗಳಂತೆ.
ತಿರುಗುತ್ತಿದ್ದೆವು ಗಾಳಿ ಅಲೆಗಳಂತೆ
ಅಲೆಯೆತ್ತಿದ ಪರಾಗಗಳ ನೊರೆಯಂತೆ.
ಅತ್ತ ಕೆಲವು ಗಿಡಗಳು
ಮಧುರಿಮಗಳನ್ನು ಫಲಗಳಾಗಿ ರೂಪಿಸಿ ಆಹ್ವಾನಿಸುತ್ತಾ....
ಇತ್ತ ಒಂದೇ ಒಂದು ಗಿಡ
ಎಂದೂ ತನ್ನ ಹಣ್ಣನ್ನು ತಾಕಬಾರದೆಂದು ಅನುಶಾಸಿಸುತ್ತಾ.
ಆ ಫಲಗಳ ಸವಿರುಚಿಗಳೊಂದಿಗೆ
ಪಳಗಿದ ನಮ್ಮ ನಾಲಿಗೆಯ ಗಿಳಿಗಳಿಗೆ
ಬೇಡವೆಂದು ಗೆರೆಯೆಳೆದ ಹಣ್ಣಿನ ಮೇಲೆ

ಕೂರಬೇಕೆಂದು ಇಲ್ಲದಯಿಲ್ಲ.
ಶಾಸನ ಗುಡುಗಿವರೆ
ತಣ್ಣಗಾಗದು ಕಾಂಕ್ಷೆ
ಅದು ಮತ್ತಷ್ಟು ಕೆರಳುತ್ತದೆ.
ಅವರೋಧ ಮುದುಡಿದರ ನಿಂತುಹೋಗದು ನೆರೆ
ಅದು ಮತ್ತಷ್ಟು ಉಕ್ಕುತ್ತದೆ.
ಸಹಚರಿ ಹೃದಯದಲ್ಲಿ ಒಂದು ಕೋರಿಕೆ
ಸರ್ಪದಂತೆ ತಿರುಗಿದೆ ಸುರುಳಿ.
ಯಾವುದೋ ಒಂದು ಪ್ರಲೋಭ
ಸೀಳುಹಾಕಿದೆ ಫೂತ್ಕಾರದಂತೆ.
ಯಾವುದೋ ಒಂದು ಊಹಾನುಭವ
ಎದೆ ತಟ್ಟಿದೆ ಭವಿತವ್ಯದಂತೆ.
ಎಷ್ಟು ರುಚಿ ಆ ನಿಷಿದ್ಧ ಫಲಕ್ಕೆ
ಎಷ್ಟು ರಭಸ ಈ ವಿಮುಕ್ತ ಹೃದಯಕ್ಕೆ.
ಎಲೆಗಳೆಲ್ಲಾ ಗಿಳಿಗಳಾಗಿ
ರೆಂಬೆಗಳೆಲ್ಲಾ ಸಾರಿಕೆಗಳಾಗಿ
ಎಸೆದ ಕಲಕಲ ಧ್ವನಿಯ ತುದಿಮಿಂಚಿನಲ್ಲಿ
ವಿವೇಕ ಬಿಚ್ಚಿಕೊಂಡಿದೆ ಮುಂಜಾನೆಯಂತೆ
ಸಾವಿರ ಎಸಳುಗಳಾಗಿ.
ಆ ಮುಂಜಾನೆ ಹೇಳಿದೆ ನಮ್ಮ ಅಂತರಂಗಕ್ಕೆ
ಅದಕ್ಕೆ ಮೊದಲು ತಿಳಿಯದ ವಿಜ್ಞತೆಯನ್ನು.
ಆ ಬೆಳಕು ತೋರಿಸಿದೆ ನಮ್ಮ ಕಣ್ಣಿಗೆ
ಅಂಗಾಂಗಗಳಲ್ಲಿ ಹೊಮ್ಮುವ ನಗ್ನತೆಯನ್ನು.
ಕಾಣಿಸಿದೆ ಪ್ರತಿ ವೃಕ್ಷ
ಹೊದ್ದುಕೊಂಡ ಹಸಿರು ರೆಂಬೆಗಳೊಂದಿಗೆ.
ಮಾತಾಡಿಸಿದೆ ಪ್ರತಿಪಕ್ಷಿ
ಬೆಳೆಸಿಕೊಂಡ ನುಣುಪು ರೆಕ್ಕೆಗಳೊಂದಿಗೆ.
ಅಲುಗಾಡಿದೆ ಆಕಾಶ
ಕಟ್ಟಿಕೊಂಡ ಮೋಡಗಳೊಂದಿಗೆ.
ಇಬ್ಬರೂ ಎಂದಿಸವರೆ.
ಎದುರೆದುರಾಗಿರುತ್ತಾ

ಬೊಗಸೆಗಟ್ಟಲೆ ನೋಟಗಳ ಬೀರಿಕೊಂಡವರೆ.
ತನುಗಳು ಕಣ್ಣಿಗೆ ಬೀಳುತ್ತಲೇ
ತಬ್ಬಿಬ್ಬಾಗಿ
ಕಡಿದುಹೋಗುವ ನೋಟಗಳಿಂದ
ಅಳುಕಿಬಿದ್ದು ಹೊದ್ದುಕೊಂಡವು ಪೊರೆಗಳನ್ನು
ಮೊದಲಸಲ ತೋಡಿಕೊಂಡವು ಹೃದಯಗಳನ್ನು.

'ಏಯ್ ! ಎಲ್ಲಿದ್ದೀಯಾ ನೀನು ?'
'ಈ ಪೊದೆಯೊಂದಿಗೆ ಗತವನ್ನು ಹೊಡೆದುಕೊಂಡೆನು.'
'ಯಾವ ಪ್ರಲೋಭ ಮರುಳುಮಾಡಿದೆ ನಿನ್ನನ್ನು ?'
'ಈಗಲೀಗಲೇ ತೆರೆದುಕೊಂಡಿದೆ ಬೆಳಕಿನ ಕಣ್ಣು.'
'ಈ ಕಂಠ ನಿನ್ನದು
ಮತ್ತೆ ಯಾವುದು ನಿನ್ನ ಸಹಚರಿಯದು ?'
'ನುಡಿಯುವ ಈ ಕಂಠದಲ್ಲಿ
ಪ್ರತಿಶಬ್ದ ಇಬ್ಬರದು.'
'ಗೊತ್ತೇ !
ಶಾಸನ ಧಿಕ್ಕಾರಕ್ಕೆ ಫಲಿತ ?'
'ಗೊತ್ತು—
ಮಣ್ಣಿನಲ್ಲಿ ಮೊಳಕೆಯಿಡುವ ಬೇರೊಂದು ಜೀವಿತ.'
'ಆ ಜೀವಿತಕ್ಕೆ
ಅನುಕ್ಷಣ ಮೃತ್ಯುಭಯ !?'
'ಆ ಮೃತ್ಯುವಿನ ಕೋರೆಗಳೊಂದಿಗೆ
ಆಡಿಕೊಳ್ಳುವುದು ನಮಗೆ ಪ್ರಿಯ.'
'ಆದರೆ ಹೊರಟುಹೋಗು ಮಣ್ಣಿನ ಮನುಷ್ಯ !
ಆ ಮಣ್ಣಿನೊಳಕ್ಕೆ.'
'ಹಾಗೆಯೇ ;
ಹೋಗಿ ಉಕ್ಕಿಸುತ್ತೇನೆ ಆ ಮಣ್ಣನ್ನು ಮುಗಿಲ ಮೇಲಕ್ಕೆ.'
'ಆ ತನಕ ಬಂದಿದೆಯೆ ನಿನ್ನ ಅಹಂಕೃತಿ ?'
'ಅಲ್ಲಿಯೇ ಪ್ರಾರಂಭವಾಗುತ್ತದೆ
ಮಾನವ ಸಂಸ್ಕೃತಿ.'

ಮಣ್ಣಲ್ಲಿ ಬಿದ್ದನು
ಮೌನವಾಗಿ ನಿಂತನು

ಎದುರಾಗಿ ಉದಯರವಿ.
ಎಲ್ಲಿನವನೋ ?
ನನ್ನಂತೆಯೇ ಬೆಳೆದು ಬರುತ್ತಿದ್ದಾನೆ.
ಸಾವಿರ ಕೈಗಳಿಂದ ಈಜುತ್ತಿದ್ದಾನೆ
ಗಗನಬೀದಿಗಳ ಮೋಡಗಳನ್ನು.
ಕೆಸರು ನಕ್ಕಿದ ಕಮಲಗಳಾಗಿ
ಹೂವು ನಕ್ಕಿದ ಭ್ರಮರಗಳಾಗಿ
ಭೂಮಿ ಕದಲಿದೆ ಚರಣಗಳಾಗಿ
ಜಡತೆ ಕದಲಿದ ಹರಿಣಗಳಾಗಿ.
ನೀರಿಗೆ ರೆಕ್ಕೆಮೊಳೆತು ಮುಗಿಲನ್ನು ಮುಟ್ಟಿದೆ.
ಮುಗಿಲಿಗೆ ಅಡಿಗಳು ಕದಲಿ ನೆಲವನ್ನು ಮುಟ್ಟಿದೆ.
ನಾನೂ ನಡೆಯುತ್ತಿದ್ದೇನೆ
ಹಿಮ್ಮಡಿ ತಿರುಗಿಸದ ಮಾರ್ತಾಂಡನಂತೆ
ವಿಹಂಗಗಳ ಕೂಜನಗಳನ್ನು ಬೀಸೆಸೆದುಕೊಳ್ಳುತ್ತಾ
ಪ್ರವಾಹಗಳ ತುಷಾರಗಳನ್ನು ಹಾರಿಸಿಕೊಳ್ಳುತ್ತಾ.
ನಡೆಯುತ್ತಿವೆ ನನ್ನನ್ನನುಸರಿಸಿ
ತರುಶಿಖೆಗಳು ತಲೆಗಳು ತೂಗಿಕೊಳ್ಳುತ್ತಾ
ವನವಲ್ಲಿಕಗಳು 'ಹಲ್ಲೀಸಕ' ಆಡಿಕೊಳ್ಳುತ್ತಾ
ಎಳೆಗರಿಕೆಗಳು ಚಿಟಿಕೆ ಹಾಕಿಕೊಳ್ಳುತ್ತಾ.
ಪಯಣಿಸುತ್ತಿವೆ ನನ್ನ ಹಿಂದೆ
ಪವನ ತರಂಗಿಣಿಗಳೆಷ್ಟೋ
ಗುಹೆಗಳ ಗುಂಡಿಗೆಗಳನ್ನು ಮಾತನಾಡಿಸಿಕೊಳ್ಳುತ್ತಾ
ಕುಸುಮ ಬೃಂದಗಳನ್ನು ನಡೆಸಿಕೊಳ್ಳುತ್ತಾ.

'ಗೆಳೆಯಾ !
ನಿನ್ನ ಆಗಮನದಿಂದ ಧಾತ್ರಿ ನವಚೈತನ್ಯಗಾತ್ರಿ.
ಆಪ್ತನೇ !
ನಿನ್ನ ರೇಖೆಯಿಂದ ಪ್ರಕೃತಿ ರೂಪವೆತ್ತಿದ ದ್ಯುತಿ.
ನಿಲ್ಲಯ್ಯಾ ! ಒಂದುಕ್ಷಣ
ಅವನಿಯೇ ನಿನಗೆ ಹಿಡಿದ ಕನ್ನಡಿ.
ಹೇಗೆ ಸೊರಗಿಹೋಗಿರುವೆಯೋ ನೋಡಿಕೋ

ಎಷ್ಟು ಬಳಲಿ ಹೋದೆಯೋ ಇದ್ದುಬಿಡು.
ಏನದು
ಹಾಗೆ ಇಳಿಬೀಳುತ್ತಿರುವೆ
ಕಾಣಿಸದ ಕೆಸರಿನಲ್ಲಿ.
ಏಕೆಂದು
ಕಡುಕಪ್ಪು ಒಳನುಗ್ಗುತ್ತಿದೆ.
ಮೆರೆಯುವ ನಿನ್ನ ಕೆಂಪಿನಲ್ಲಿ.
ಯಾವ ನೈಲ್ಯ ಕವಿದಿದೆಯೊ ನನ್ನ ಕಣ್ಣನ್ನು
ಯಾವ ಕತ್ತಲು ನುಂಗಿಬಿಟ್ಟಿದೆಯೊ ಈ ಬೆಳಕನ್ನು.
ಎಲ್ಲಿ ?
ನನ್ನ ಗೆಳೆಯನೆಲ್ಲಿ ?
ವ್ಯೋಮಕ್ಕೂ ಭೂಮಿಗೂ ಇರುವ
ಎಲ್ಲೆಯನ್ನು ಅಳಿಸಿಹಾಕಿದ
ಆ ವಿಶ್ವಾಮಿತ್ರನೆಲ್ಲಿ ?
ಎಲ್ಲಿ ನನ್ನೊಂದಿಗೆ ಕದಲಿಬಂದ
ಪಕ್ಷಿಗಳೂ ಪ್ರಸೂನಗಳೂ ?
ಅಂಧಕಾರದ ಪಂಜಾ ಏಟಿಗೆ ಹೆದರಿ
ಆಕಾಶ ಆತುಕೊಂಡಿದೆಯೇ
ಬಿಕ್ಕುಬಿಕ್ಕೆನ್ನುತ್ತಿರುವ ತಾರೆಗಳಾಗಿ.
ಎಲ್ಲಿದ್ದಾನೆ
ನನ್ನೊಂದಿಗೆ ನಡೆದ ಜಗನ್ನೇತ್ರ ?
ಸುತ್ತುಗಟ್ಟಿದ ಕತ್ತಲ ಧಾಳಿಗೆ
ತಡೆದುಕೊಳ್ಳಲಾರದೆ ಓಡಿಹೋಗಿ
ತಲೆಮರೆಸಿಕೊಂಡನೇ ಶೂನ್ಯದಲ್ಲಿ
ಬಿಸಿಸತ್ತ ಬೆಳದಿಂಗಳ ದಿಬ್ಬವಾಗಿ.
ಇನ್ನು ನಾನೂ ಇಷ್ಟೇನಾ ?
ಕುಂಟುತ್ತಿರುವ ಒಂಟಿತನದಲ್ಲಿ
ಕುಪ್ಪೆಗೂಡುತ್ತಿರುವ ಆಶೆಗಳನ್ನೆಳೆದುಕೊಳ್ಳುತ್ತಾ
ಕೆಸರಿನಂಥ ಕತ್ತಲಲ್ಲಿ ಬಿದ್ದು
ಅರಚುತ್ತಾ ಹೋಗುವುದೆ ?
ಈ ಮೂದಲಿಕೆಗಳು ರೋದನಗಳಾಗಿ

ಈ ರೋದನಗಳೇ ಆರ್ದ್ರ ಘೋಷಗಳಾಗಿ
ಚಿಮ್ಮಿಕೊಂಡು ಹೋಗವೆ ನಿಶೆಯನ್ನು .
ಸೀಳಿಕೊಂಡುಹೋಗವೆ ರೋದಸಿಯನ್ನು ?'

ನನ್ನ ಘೋಷಣೆ ಕೇಳಿದೆಯೇ ಅಂಬರ
ಹೌದೆಂದಿತೇ ದಿಗಂತರ.
ಇರಿಮುಕೊಂಡು ಬಂದಿದೆ ಅದೇ ಭಾನುಬಿಂಬ
ಉಕ್ಕಿಹೋಗುತ್ತಿರುವ ಆಶಾಪೂರ್ಣ ಕುಂಭ.
ತುಳುಕಿದ ಆ ಪೂರ್ಣಕುಂಭದ ಹನಿಗಳೇ
ಸುರಿಯುತ್ತಿವೆ ಚಿಗುರುಗಳಾಗಿ
ಸುರಿದ ಆ ತರುಣಕಿರಣ ಕಣಿಕೆಗಳೆ
ಅರಳಿಕೊಳ್ಳುತ್ತಿವೆ ಕಳಿಕೆಗಳಾಗಿ.
ಪ್ರತಿ ತರುವೂ ಬೆಳೆಯುತ್ತಿದೆ
ಹಸಿರು ಉಸಿರಿಂದ.
ಪ್ರತಿ ಕುಸುಮವೂ ನುಡಿಯುತ್ತಿದೆ
ಪರಿಮಳ ಭಾಷೆಗಳಿಂದ.
ಕದಲುತ್ತಿರುವಳು ನನ್ನ ಸಹಚರಿ
ಬಳ್ಳಿಗಳು ಸಾವಿರಸುರುಳಿ ಸುತ್ತಿಕೊಳ್ಳಲು.
ನಗುತ್ತಿದೆ ಆ ರಸಝರಿ
ಹೂವುಗಳು ಪದವಾಗಿ ಸೆಳೆದುಕೊಂಡು ಬರಲು.
ನನ್ನನ್ನು ಸೇರಿದ ಸುತಿ ಮೆತ್ತಗೆ
ನರಗಳಲ್ಲಿ ಹೊಳಪು ಸಾಮುಗರಡಿ ಮಾಡಲು.
ನನ್ನನ್ನು ತಾಗಿದೆ ಹೊಚ್ಚ ಹೊಸದಾಗಿ
ನನ್ನ ಸರ್ವವೂ ಸಿಹಿಯಾದ ಗರ್ವದಿಂದ ಹೆಡೆಯೆತ್ತಲು.
ಏನು ಅನುಭೂತಿ ಇದು
ಹೃದಯಾಂತರಾಳ ಕುಣಿದಾಡಿದಂತೆ
ರಕ್ತದಲ್ಲಿ ಅವ್ಯಕ್ತ ರಾಗಗಳು ರಂಗಳಿಸಿದಂತೆ.
ಏನು ಚಿತ್ರವಾಂಛೆ ಇದು
ಎದುರಿಗಿರುವ ಸೊಗಸುಗಳನ್ನೆಲ್ಲ ಕುಡಿದುಬಿಡಬೇಕೆಂಬಂತೆ
ಪರಿಮಳಗಳ ಉರಿಗಳಲ್ಲಿ ಬಿದ್ದುಸಾಯಬೇಕೆಂಬಂತೆ.
ಇದ್ದೇನೆ ನನ್ನ ಸಹಚರಿಯ ಮಡಿಲಲ್ಲಿ—

ಉಸಿರಿನಲ್ಲಿ ಉಸಿರು ಮುಳುಗು ಹಾಕಿದೆ.
ಇದ್ದಾಳೆ ರಸಝರಿ ನನ್ನ ಮಡಿಲಲ್ಲಿ—
ಕಾಲ ಲಿಪ್ತವಾಗಿ ಕರಗಿಬಂದಿದೆ.
ಪರವಶತೆ ಪಕ್ಕೆಯನ್ನು ಉರುಳಿಸಿದೆ.
ಪ್ರಕೃತಿ ಬೇರೊಂದು ಪಾರ್ಶ್ವವನ್ನು ತೋರಿಸಿದೆ.

ಏನಿದು ?
ಈ ನದಿ ಗರ್ಭದಲ್ಲಿ
ಮರುಭೂಮಿ ಮಲಗಿದೆ
ಉಕ್ಕುವ ಅಲೆಗಳನ್ನು ನುರಗಿಬಿಟ್ಟು
ಸುಡುವ ಮರಳನ್ನು ಹಾಕುತ್ತಿದೆ.
ಏನಿದು ?
ಕಚ್ಚಿಕೊಂಡಿದೆ ಮಂಜುಗಡ್ಡೆಗಳು
ಹಾಸಿಕೊಂಡ ಹಸಿರು ಬೀಡುಗಳನ್ನು.
ಮುಸುರಿಕೊಂಡಿವೆ ಹೊಗೆಯ ಪೊರೆಗಳು
ಮೆರೆವ ದಿಶೆಗಳ ನೊಸಲುಗಳನ್ನು.
ಏನು ಏನಿದು ?
ನಿಂತುಹೋಗಿದೆಯೆ ಈ ಗಿಡಗಳ ಉಸಿರು
ನಿಂತುಕೊಂಡಿವೆ ಶವಗಳಂತೆ.
ಬಿಕ್ಕುಬಿಕ್ಕೆನ್ನುತ್ತಿವೆ ಹೂಗಳೂ ಎಲೆಗಳೂ
ರೆಕ್ಕೆಸುಟ್ಟ ಹುಳುಗಳಂತೆ.
ಇನ್ನು ನಾನೂ ಇಷ್ಟೇನೆ ?
ಮರಳು ಗುಡ್ಡೆಯಂತೆ ಕುಸಿದು ಬಿದ್ದು
ಮಂಜುಗಡ್ಡೆಯಂತೆ ಬಿಗಿದುಹೋಗಿ
ಮೈಯನ್ನು ಹಚ್ಚಗೆ ನುಡಿಸಿದ
ಉಸಿರನ್ನು ಕಳೆದುಕೊಂಡು
ಭೂಮಿ ಮೇಲೆ ಶಾಶ್ವತ ಸ್ಥಾಣುವಾಗಿ
ಬಿದ್ದಿರುವುದೇನಾ ?
ಮೆದುಳನ್ನು ಸುಲಿಯುತ್ತಿರುವ
ಸಂಶಯದ ಮಧ್ಯೆ
ಗುಂಡಿಗೆಯನ್ನು ಹಿಂಡುತ್ತಿರುವ

ಭಯದ ನಡುವೆ
ಮೈಯಲ್ಲಿ ಏದುರು ನಡೆಯುತ್ತಿರುವ
ರಕ್ತನಾಳಗಳ ನಡುವೆ
ಊಪೆಗಳಲ್ಲಿ ಘೀಳಿಡುತ್ತಿರುವ
ಗ್ರಹಭ್ರಮಣೆಯ ನಡುವೆ
ಅಲ್ಲವೆಂದಿದೆ ವನಿಯತ್ತಿ ಜೀವನದಿ.
ಅಲ್ಲವೆಂದಿದೆ ಹೂಗಳನ್ನು ಮುಕ್ಕಳಿಸುತ್ತ
ಕವಲಿ ಬರುವ ವಸಂತ ಸಂಜೀವನೀ ಹೃದಿ.
ಸೃಷ್ಟಿರಹಸ್ಯಗಳನ್ನು ಅಗೆದು ತೋರಿಸಿದೆ
ಜೀವಪ್ರಕೃತಿ.
ವಿಶ್ವಂಭರೆಯನ್ನು ತೆರೆ ತೆಗೆದು ತೋರಿಸಿದೆ
ವಿನೂತನ್ನಮತಿ.
ಹೆಬ್ಬಾವಿನಂತೆ ತೆವಳುವ ಕತ್ತಲು
ಕತ್ತಲನ್ನು ಕೆಡಹುವ ಬೆಳಕ ಮೆಟ್ಟಲು
ದಿಕ್ಕುಗಳನ್ನು ಕಬಳಿಸುವ ಮರುಭೂಮಿಗಳು
ಮರುಭೂಮಿಗಳನ್ನು ಪಳಗಿಸುವ ಹುಲ್ಲುದಾರಿಗಳು
ಕೊಂಬೆಗಳನ್ನು ಕಚ್ಚಿಹಾಕುವ ಮಂಜು ಕೋರೆಗಳು
ಬಿದ್ದ ಗಾಯಗಳಲ್ಲಿ ಹಸಿರುತನವನ್ನು ತುಂಬುವ
ವಸಂತ ಪವನಧಾರೆಗಳು.
ಅವ್ಯಕ್ತವಾಗಿ ಆಕೃತಿ ತಳೆದ
ನೆತ್ತರ ಮುದ್ದೆಗಳು
ಆ ಮುದ್ದೆಗಳಿಗೆ ಕಿರ್ರನೆ ಅಳುವ
ಹಾಲ ಕೊರಳುಗಳು
ತೀಕ್ಷ್ಣತುಟಿಗಳಿಗೆ ಮುಗಿದುಬೀಳುವ
ಪಾರವಶ್ಯಗಳು
ಪ್ರಪಂಚವನ್ನು ಅಲ್ಲಾಡಿಸುವ
ಪಂಚೇಂದ್ರಿಯಗಳು
ಶರೀರ ಪಂಜರವನ್ನು ಕಚ್ಚಿ ತಿನ್ನುವ
ಶೈಥಿಲ್ಯಗಳು
ನಿರಾಶೆಗಳ ಕೆಸರಿನಲ್ಲಿ ಹೂತುಹೋಗುವ
ಸರ್ವಾವಯವಗಳು.

ಒಂದು ದೇಹ ಮಣ್ಣಿನ ಒಳಕ್ಕೆ
ಒಂದು ಜೀವ ಮಣ್ಣಿನ ಮೇಲಕ್ಕೆ.
ಇದುವೆ ಕ್ರಮ ಪ್ರಕೃತಿಗೆ.
ಇದೇ ಕ್ರಮ
ಪ್ರಕೃತಿಯನ್ನು ಅರ್ಧಾಂಗಿಯಾಗಿ
ರೂಪಿಸಿಕೊಂಡ
ಪ್ರತಿಯೊಬ್ಬ ಪುರುಷನಿಗೆ.

ಈಗ ತಿಳಿದಿದೆ
ಕೆಂಡವನ್ನು ಆರಿಸುವ ನೀರಿರುತ್ತದೆಂದು
ನೀರನ್ನು ಹಾರಿಸುವ ಕೆಂಡವಿರುತ್ತದೆಂದು
ಹೂಗಳನ್ನು ಚುಚ್ಚುವ ಮುಳ್ಳುಗಳಿರುತ್ತವೆಂದು
ಮುಳ್ಳುಗಳನ್ನು ಪ್ರಶ್ನಿಸುವ ಹೂವುಗಳಿರುತ್ತವೆಂದು.
ಈಗ ತಿಳಿದಿದೆ
ಕುರುಡು ಕತ್ತಲೆಗೆ
ಆಕಾಶದ ತುಂಬಾ ಕೋಟಿ ಕಣ್ಣುಗಳಿರುತ್ತವೆಂದು.
ಸೂರ್ಯಚಂದ್ರರನ್ನು ಚಪ್ಪರಿಸಿ ಬಿಟ್ಟುಬಿಡುವ
ಸೂಕ್ಷ್ಮ ಶಕ್ತಿಗಳಿರುತ್ತವೆಂದು.
ಹೆಜ್ಜೆ ನೆಲದಮೇಲೆ ತಾಗದ ಯೌವ್ವನ
ಕೆಸರಿನೊಳಕ್ಕೆ ಇಳಿಬೀಳುತ್ತದೆಂದು.
ನಿತ್ಯದೀಪ್ತವೆಂದು ಅಂದುಕೊಂಡ ಜೀವಿತ
ಲಿಪ್ತದಲ್ಲಿ ಆರಿಹೋಗುತ್ತದೆಂದು.
ಕದಲುತ್ತಿವೆ ಮನುಷ್ಯನ ಹೃದಯದಲ್ಲಿ
ಗಾಂಡ್ರಿಸುವ ಅರಣ್ಯಗಳು
ಘೀಳಿಡುವ ಸಮುದ್ರಗಳು
ಘೋರ್ಗರೆವ ಜಲಪಾತಗಳು
ತಿರುಗಿಬೀಳುವ ಚಂಡಮಾರುತಗಳು
ದಡಗಳಿಗೆ ಕಾಟುಹಾಕುವ ನದಿಗಳ ಬುಸಬುಸಗಳು
ಗಿರಿ ಬೇರುಗಳ ಬುಡಮೇಲುಮಾಡುವ ಭೂಗರ್ಭ ಕಂಪನಗಳು
ವಿಸ್ಮಯ ಸಾವಿರ ಬಾಯಿಗಳಿಂದ ಅರುಚಿದೆ
ಭಯ ಲಕ್ಷ ಉಗುರುಗಳಿಂದ ಬಡಿದಿದೆ.
ಆಕಾಶ ಸಿಡಿದಷ್ಟು ಶಬ್ದ

ಪಿಸ್ವಲಿಸಿದ ಮನುಷ್ಯ
ಬೆನ್ನು ತಟ್ಟುವ ಹನಿಗಳು.
ಆ ಅನುಭೂತಿ ಅಮೃತ
ಆದರೂ ಅದು ಕ್ಷಣಿಕ.
ಆಕಾಶ ಕುಸಿದುಬೀಳುವಷ್ಟು ಮಳೆ.
ಮರ ಕೊಡೆಯಾಗಿ
ಸಿಡಿದುಹೋಗಿದೆ ತುಸುಹೊತ್ತಿನಲ್ಲಿ
ನಡುನೆತ್ತಿಮೇಲೆ ಉರಿಗಳಿಂದ.
ಗುಹೆಗುಂಡಿಗ ತರೆದುಕೊಂಡಿದೆ
ಬೆಟ್ಟದಷ್ಟು ಕರುಣೆಯಿಂದ.
ಮತ್ತೆ ಕುದುರಿಕೊಂಡ ಮನಸ್ಸಿಗೆ
ಗುಹೆಯಲ್ಲಿ ಮೋಡದಂಥ ಆರ್ಭಟ.
ಲಂಘಿಸುತ್ತಿರುವ ಎರಡು ಅಗ್ನಿಕಣಿಕೆಗಳು.
ಒಂದು ಕ್ಷಣ ದಿಕ್ಕು ತೋಚದ ಮೊರೆತ.
ಗುಹೆಯಾಚೆಗೆ ಚಿಮ್ಮಿಕೊಂಡು ಬಂದ ಮನುಷ್ಯನಿಗೆ
ನಖ ಮೂಡಿದ ಹಸಿ ಗುರುತುಗಳು.
ಗುಹೆಯಲ್ಲಿನ ನಖಗಳಿಗೆ ಹೆದರಿದ ಮನುಷ್ಯನಿಗೆ
ಗೂಡಾಗಿದೆ ಹೊಳೆಯ ದಡ.
ಹರಿಯುವ ಆ ಹೊಳೆ ಕಂಡಿದೆ ತನಗೆ
ಹಾಲ ಬೆರಳುಗಳಿಂದ ನೇವರಿಸಿದಂತೆ.
ಗುಹೆ ಸೆಳೆದುಕೊಂಡು ಬಂದಿದೆ ಗುಡಿಸಿಲಿನೊಳಕ್ಕೆ
ಉಗುರಿಗೆ ಎದುರು ಈಟಿ
ಕೋರೆಗೆ ಎದುರು ಖಡ್ಗಧಾರೆ.
ಆತ್ಮರಕ್ಷಣೆಗೆ ಕಲಿತುಕೊಂಡ
ಆದಿಪಾಠವದು.
ಮೃತ್ಯುಹತ್ಯೆಗೆ ಹಾಕಿಕೊಂಡ
ಮೂಲಪೀಠವದು.
ಹೊಳೆಯ ಲಾಲನೆ ಎಲ್ಲಿಯತನಕ ?
ನೀರಿಗೆ ನೋವು ಹುಟ್ಟುವ ತನಕ.
ಗುಡಿಸಲು ತೇಲಿದೆ ಒಣಎಲೆಯಂತೆ
ಮನುಷ್ಯನಿಗೆ ಉಳಿದಿದೆ ಬೇರೊಂದು ಪ್ರಶ್ನೆಯಾಗಿ.
ಮನೆ ಮೊಳೆತಿದೆ ಇಟ್ಟಿಗೆಯೇ ಕಂಡವಾಗಿ

ಕಬ್ಬಿಣವೇ ಆಸರೆಯಾಗಿ.
ಬಿದ್ದುಹೋಗಿದೆ ಗುಹೆಯ ಬಾಯಿ
ಹೆದರಿಕೊಂಡಿದೆ ಪ್ರವಾಹ ಮೊರೆತ.
ಕಾಲವನ್ನು ತೊಟ್ಟುಕೊಂಡಿದ್ದಾನೆ ಮನುಷ್ಯ
ಕತ್ತರಿಸಿ ಹೊಲಿಗೆ ಹಾಕಿ.
ಪೃಥ್ವಿಯನ್ನು ತಿರುಗಿಸಿಕೊಂಡಿದ್ದಾನೆ ಮನುಷ್ಯ
ನಾಲ್ಕು ದಿಕ್ಕುಗಳನ್ನು ನಡೆಸಿ.
ಹೊಳೆಯನ್ನು ಸೀಳಿದನು ಎರಡಾಗಿ
ಈಟಿಯಂಥ ಕೈಗಳಿಂದ.
ನಡೆದನು ಕಡಲ ಅಂಚಿನ ಮೇಲೆ
ದೋಣಿಗಳ ಅಂಗಾಲುಗಳಿಂದ.
ಒಳನುಗ್ಗಿದನು ಗಿರಿಗಳ ಗುಂಡಿಗೆಗಳಲ್ಲಿ
ಸೂಜಿಗಣ್ಣಿನ ದಾರದಂತೆ.
ಮುನ್ನುಗ್ಗಿದನು ಘೋರಾರಣ್ಯಗಳಲ್ಲಿ
ಬಿಸಿ ಎಸೆದ ಬಾಣದಂತೆ.
ಕೋಲುಗಳ ಮಸೆತದಲ್ಲಿ ಉದುರುವ ಕೆಂಡವನ್ನು
ಕೊನೆಯುಗುರಿಂದ ಸಿಂಪಡಿಸಿ
ಬಿಗಿದುಕೊಂಡು ಬಿದ್ದಿರುವ ನೆಲವನ್ನು
ಚಿಗುರುಗಳ ಬಾಯಿಗಳಿಂದ ನುಡಿಸಿ
ಅಡವಿಗಳಲ್ಲಿ ಅರಳುವ ಅಂದವನ್ನು
ಅಂಗಳದಲ್ಲಿ ನಾಟಿಸಿ
ಕೋರೆಗಳ ಮಧ್ಯೆ ನಡುಗುವ ಜೀವಿಗಳನ್ನು
ಊರಿನ ಮಡಿಲಲ್ಲಿ ಬೆಳೆಸಿಕೊಂಡು
ತಿರುಗುವ ಚಕ್ರಗಳ ರಭಸದಲ್ಲಿ
ಓಡುವ ಬದುಕನ್ನು ರೂಪಿಸಿಕೊಂಡು
ಹಸಿಯಾಗಿ ಹರಿಯುವ ನೀರನ್ನು
ಹಣ್ಣು ಮನದಿಂದ ಕರೆದುಕೊಂಡು.
ವಿಸ್ತರಿಸಿದನು ಮನುಷ್ಯ
ವಿಶ್ವಾಸವನ್ನು ಆತ್ಮೀಕರಿಸಿಕೊಂಡು.
ಆವರಿಸಿದನು ಮನುಷ್ಯ
ಅಂಬರವನ್ನು ಅಂಗೈಯಲ್ಲಿ ಹಿಡಿದುಕೊಂಡು.

2

ಮನುಷ್ಯನ ಮನಸ್ಸಿನಲ್ಲಿ ಒಂದು ಪ್ರಭಾತ.
ಮೌನವನ್ನು ಮುರಿದುಕೊಂಡು
ಮಂಕುತನವನ್ನು ಸೀಳಿಕೊಂಡು
ಉತ್ತುಂಗವಾಗಿ ನೆಗೆಯುವ
ಉನ್ಮತ್ತನಾದ ಜಲಪಾತ.
ಎಲ್ಲಿನದು ಈ ನಾದ ?
ನಾಭಿಪಾತಿಯಲ್ಲಿ ಹುಟ್ಟಿತೇ
ನರಗಳಲ್ಲಿ ಎಳೆಯೆಳೆಯಾಗಿ ಸುತ್ತಿತೇ
ಎದೆಯಾಳದಲ್ಲಿ ಘೂರ್ಣಿಸಿತೇ
ಮಸ್ತಿಷ್ಕದಂಚಿನಲ್ಲಿ
ಪ್ರತಿಧ್ವನಿಸಿತೇ ?
ಎಷ್ಟು ಒದಗು ಇದಕ್ಕೆ
ಎಷ್ಟು ಓಟ ಇದಕ್ಕೆ.
ಪ್ರಕೃತಿಯಲ್ಲಿನ ಘೋಷಗಳೆಲ್ಲಕ್ಕೂ
ಪಾಠಾಂತರವೇ ಇದು ?
ಎಲ್ಲೋ ಒಂದು ಹಸಿರು ಕೋನದಲ್ಲಿ
ಹಬ್ಬಿದ ಕ್ರೇಂಕಾರ ;
ಅದು ನಾದಗರ್ಭ ಪ್ರಸವಿಸಿದ ಷಡ್ಜ.
ಎಲ್ಲೋ ಒಂದು ಮೋಡದ ನೆರಳಲ್ಲಿ
ದನಿಯತ್ತಿದ ಜಾತಕ ಶ್ರುತಿ ;
ಅದು ನಾದವರ್ಷ ಪ್ರಸರಿಸಿದ ಋಷಭ.
ಎಲ್ಲೋ ಒಂದು ಹುಲ್ಲು ಬೀಡಿನಲ್ಲಿ
ಸಿಕ್ಕುಬಿಟ್ಟ ಮೇಷ ಸ್ವರ ;
ಅದು ನಾದಕ್ಷೋಣಿ ಸ್ಪಂದಿಸಿದ ಗಾಂಧಾರ.
ಎಲ್ಲೋ ಒಂದು ಹೊಳೆಯ ದಡದಲ್ಲಿ
ರೆಕ್ಕೆಯತ್ತಿದ ಕ್ರೌಂಚಕಂಠ ;
ಅದು ನಾದಮಾರುತ ಮೀಟಿದ ಮಧ್ಯಮ.

ಎಲ್ಲೋ ಒಂದು ಕೊಂಬೆಯ ಮಡಿಲಲ್ಲಿ
ಚಿಗುರೆತ್ತಿದ ಕುಹೂರವ ;
ಅದು ನಾದತರುವು ಪರಿಮಳಿಸಿದ ಪಂಚಮ.
ಎಲ್ಲೋ ಒಂದು ನೀರಿನಕುಂಟೆಯಲ್ಲಿ
ಮುಕ್ಕಳಿಸಿದ ಭೇಕಧ್ವನಿ ;
ಅದು ನಾದಸರಸಿ ಅಲೆಯೆತ್ತಿದ ಧೈವತ.
ಎಲ್ಲೋ ಒಂದು ಬೆಟ್ಟದಕಣಿವೆಯಲ್ಲಿ
ದಿಕ್ಕುಗಳನ್ನು ಅದಿರಿಸಿದ ಘೀಂಕೃತಿ ;
ಅದು ನಾದರೋದಸಿ ನಿನದಿಸಿದ ನಿಷಾದ.
ತನ್ನಲ್ಲಿ ಉಕ್ಕಿದ ಶಾಖೆಗಳು ಏಳು
ತಾನೋ ಸ್ವರಸಂಗಮ.
ತನ್ನಲ್ಲಿ ಪರಿದ ಗಾಳಿಗಳು ಏಳು
ತಾನೋ ಸ್ವರಸಂಗಮ.
ತನ್ನಲ್ಲಿ ಪರಿದ ಗಾಳಿಗಳು ಏಳು
ತಾನೋ ಪ್ರಾಣಸಂಪುಟ.
ಪ್ರಕೃತಿಯೊಳಗಿನ ಮೂಲನಾದವೇ
ಹೊಮ್ಮಿಬಂದಿದೆಯಾ ತನ್ನೊಳಕ್ಕೆ ?
ತನ್ನಲ್ಲಿನ ಜೀವನಾದವೇ
ಪೊರಟು ಹೋಗಿದೆಯಾ ಪ್ರಕೃತಿಯೊಳಕ್ಕೆ ?
ತನ್ನ ಉಸಿರು ಶ್ರುತಿಯಾಗಿ ಸಾಗಿವಾಗ
ಬಿದಿರು ನಡೆದುಬಂದಿದೆ ವೇಣುವಾಗಿ.
ತನ್ನ ಉಗುರುಗಳಲ್ಲಿ ಪುಳಕ ಅರಳಿದಾಗ
ಕಬ್ಬಿಣ ಕರಗಿ ಬಂದಿದೆ ವೀಣೆಯಾಗಿ.
ತನ್ನ ಬೆರಳುಗಳಲ್ಲಿ ತರಂಗಗಳು ಬೀಸಿದಾಗ
ಚರ್ಮ ಕದಲಿಬಂದಿದೆ ಡೋಲಾಗಿ
ಕಂಚುಕೂಡಿಬಂದಿದೆ ತಾಳವಾಗಿ.

ಎಷ್ಟು ಅಂಚುಗಳೋ ರಾಗಾತ್ಮಕ್ಕೆ ?
ಎಷ್ಟು ಅಲೆಗಳೋ ನಾದಾತ್ಮಕ್ಕೆ ?
ಸಭಾಸರಸಿಯಲ್ಲಿ ಅರಳಿದ ಪದ್ಮವಾಗಿ
ಸಮರಾವನಿಯಲ್ಲಿ ಮೊಳಗಿದ ಶಂಖವಾಗಿ —

ಬೆಳೆದ ಗದ್ದೆಗಳನ್ನು ನುಡಿಸಿದ ಸುಗ್ಗಿಹಾಡಾಗಿ
ಹಾಲಿನಿದ್ರೆಯನ್ನು ತರಿಸಿದೆ ಜೋಗುಳವಾಗಿ
ಆಲಯಗಳನ್ನು ಬೆಳಗಿಸಿದೆ ಆರತಿಯಾಗಿ
ಆರ್ತಿಯನ್ನು ಅನುವದಿಸಿದೆ ಆರ್ದ್ರಕೃತಿಯಾಗಿ
ನಿಂತಿದೆ ಧರಾಗಗನಗಳಿಗೆ ಏಣಿಯಾಗಿ
ಕೂಡಿಸಿದೆ ಅಂತರಂಗಗಳನ್ನು ಸೇತುವೆಯಾಗಿ
ಒಳಗೆ ಪ್ರವೇಶಿಸಿದೆ ಸ್ಥಾಣುಗಳಲ್ಲಿ ಜೀವಲಹರಿಯಾಗಿ
ಹೊಮ್ಮಿ ಬೆಳಗಿದೆ ಕಗ್ಗತ್ತಲಲ್ಲಿ ದೀಪಕಳಿಕೆಯಾಗಿ
ಕರಗಿಸಿದೆ ಕೊಂಬುಗಳನ್ನು ಮೇಣವಾಗಿ
ತೂಗಿಸಿದೆ ಹೆಡೆಗಳನ್ನು ಮಂತ್ರವಾಗಿ.
ಒಂದು ಇರುಳಿನಲ್ಲಿ
ನಡೆಯುತ್ತಿದೆ ರಾಗಾತ್ಮ ನದೀತೀರದಲ್ಲಿ.
ಎಳೆತನ ಪರವಶಿಸಿದ
ಎರಡು ಕತ್ತಲ ಕಣ್ಣುಗಳು ಈಜುತ್ತಿವೆ
ತುಂಬುಬೆಳದಿಂಗಳ ಪಾರಾವಾರದಲ್ಲಿ.
'ಎಷ್ಟು ಚೆನ್ನಾಗಿದೆ ಬೆಳದಿಂಗಳು
ಎಷ್ಟು ಈಜಿದರೂ ತೀರದು ತೃಷೆ.'
'ಹೇಗಿರುತ್ತದೋ ಬೆಳದಿಂಗಳು ?'
ವಿಷಾದದಿಂದ ಉಸುರಿದೆ ಒಂದು ಪ್ರಶ್ನೆ.
ರಾಗಾತ್ಮದೆದುರು ನಿಂತಿದೆ ಎಳೆತನ
ನೋಟಗಳ ಹುಲ್ಲು ಮನೆಯಲ್ಲಿ
ಶೂನ್ಯವನ್ನು ಹೊತ್ತುಕೊಂಡು.
ರಾಗಾತ್ಮದಲ್ಲಿ ತಂತಿ ಸಾಗಿದ ತಪನ
ಕತ್ತಲಕಣ್ಣುಗಳಿಗೆ ಬೆಳದಿಂಗಳ ಸೊಬಗು ತೋರಿಸಬೇಕೆಂದು.
ಉಬ್ಬಿ ಉಕ್ಕಿದೆ ರಾಗಾತ್ಮ
ತಾಯಿ ಬೆಳದಿಂಗಳಾಗಿ.
ನೆಗೆದಿದೆ ಹಾಲಬೆಳದಿಂಗಳು
ನಾದನಿರ್ಝರಿಯಾಗಿ.
ನಿನದಿಸಿದ ಆ ತುಂಬು ಬೆಳದಿಂಗಳು
ಅನ್ನಿಸಿದೆ ಮಗುವಿಗೆ
ಮಲ್ಲಿಗೆಎಸಳುಗಳಾಗಿ

ಹಾಲಹೊಳೆಗಳಾಗಿ
ನೀಹಾರ ಯವನಿಕೆಗಳಾಗಿ
ಶರನ್ನೀರದ ಮಾಲಿಕೆಗಳಾಗಿ
ಕಲಹಂಸ ರೆಕ್ಕೆಗಳಾಗಿ
ಕರಗಲು ಸುರಿದ ಚುಕ್ಕೆಗಳಾಗಿ.
ಅರಳಿದೆ ಮಗುವಿನ ಮನದಲ್ಲಿ
ಬೆಳದಿಂಗಳ ನೋಡಿದ ಅನುಭೂತಿ.
ಕೇಳಿಸಿದೆ ಮಗುವಿನ ಕಣ್ಣಲ್ಲಿ
ವಿಶ್ವ ಗೀಚಿದ ಚಿತ್ರಗೀತೆ.

ಮನುಷ್ಯನ ಮನದಲ್ಲಿ ಒಂದು ಪ್ರಕಂಪನ.
ಹೆಜ್ಜೆಗಳಲ್ಲಿ ತಲೆಯೆತ್ತಿ
ಅಂಗಾಂಗಳಲ್ಲಿ ಅಲೆಗಳೆತ್ತಿ
ಸುಪ್ತ ಚೇತನಕ್ಕೆ ಜಡೆಗಳು ಒದರಿದ
ದೀಪ್ತಲಯ ಸ್ಪಂದನ.
ಅಂಗಾಲುಗಳಲ್ಲಿ ನುಗ್ಗಿದುವು
ಓಟಕೀಳುವ ಹುಲ್ಲೆಗಳು.
ಚರಣಗಳಲ್ಲಿ ಗರಿಬಿಚ್ಚಿದವು
ಸಂಭ್ರಮಿಸುವ ನವಿಲುಗಳು.
ಸೊಂಟದಲ್ಲಿ ಹುರಿತಿರುಗಿದವು
ಹೆಡೆಯೆತ್ತಿ ಆಡುವ ನಾಗರಗಳು.
ಕರಯುಗಳಿಯಲ್ಲಿ ಸುರುಳಿ ತಿರುಗಿದವು
ನೊರೆಗಳೇಳುವ ಗಿರಿವಾಹಿನಿಗಳು.
ಕೊರಳುತೂಗಿದೆ ತರುಶಾಖೆಯಂತೆ
ಶಿರ ಕದಲಿದೆ ಅಗ್ನಿಶಿಖೆಯಂತೆ.
ಎಲ್ಲಿನದು ಈ ಚಲನೆ ?
ಏಕಿಷ್ಟು ಲಯೋಲ್ಬಣ ?
ಇದು ಸೃಷ್ಟಿಗೆ ಜೀವಹೇತು
ಪ್ರಕೃತಿ ಪುರುಷರಿಗೆ ಮೂಲಧಾತು.
ಇರಲಾರದು ಭೂಮಿ ತಿರುಗದೆ
ನಿಲ್ಲಲಾರದು ನೀರು ಹರಿಯದೆ

ಅವಿತುಕೊಳ್ಳದು ಬೆಳಕು ಹೊರಡದೆ
ನಿಲ್ಲಲಾರದು ಗಾಳಿ ಕದಲದೆ.
ಸುಮ್ಮನಿರಲಾರದು ಸುಳಿವಿಲ್ಲದ ಗಗನ
ಗ್ರಹತಾರೆಗಳು ಚರಣಗಳಾಗಿ
ಅಹರ್ನಿಶಿಗಳು ಪರಿಭ್ರಮಣಿಸದೆ.
ತನ್ನ ತನುವಿನಲ್ಲಿರುವುದು ಆ ಭುವನವೆ
ತನ್ನ ಶ್ವಾಸದಲ್ಲಿರುವುದು ಆ ಪವನವೆ
ತನ್ನ ರುಧಿರವಲ್ಲಿರುವುದು ಆ ಪ್ರವಾಹವೆ
ತನ್ನ ಕಣ್ಣುಗಳಲ್ಲಿರುವುದು ಆ ಪ್ರಸಾರವೆ
ತನ್ನ ಶಿರಸ್ಸಿನಲ್ಲಿರುವುದು ಆ ಚಲನವೆ.

ಪ್ರಕೃತಿಯಲ್ಲಿನ ಚಲನ ಶೀಲಕ್ಕೆ
ಪರಿಣಾಮ ಮನುಷ್ಯ.
ಜಗದಲ್ಲಿನ ಭ್ರಮಣಗುಣಕ್ಕೆ
ಪ್ರತಿರೂಪ ಮನುಷ್ಯ.
ಹಾಡಿನಂತೆ ಸಾಗಿದ ಮನಸ್ಸು
ಆಟದಂತೆ ತೂಗಿದ ಮನಸ್ಸು
ಮಾತುಗಳನ್ನು ಹೊದೆದುಕೊಂಡು
ಅರ್ಥಗಳನ್ನು ಹೆಣೆದುಕೊಂಡು
ನುಡಿದಿದೆ ಅನಂತಮುಖಗಳಾಗಿ
ಚೆಲ್ಲಿದೆ ವಿಭಿನ್ನ ಕಂಠಗಳಾಗಿ.

ಕತ್ತಲಲ್ಲಿ ಕಾಣಿಸದು ಕೈಸನ್ನೆ
ನೋವೋ ಅಳುವೋ ತಿಳಿಪಡಿಸದು ಹುಚ್ಚುಕೇಕೆ.
ಉಕ್ಕೇಳುವ ಹೃದಯವನ್ನು ಹಿಡಿದುತೋರಲಾರದು
ನುಣುಪುಮಾತು.
ಹೇಗೆ ಬಿಚ್ಚುವುದು ಮನಸ್ಸಿನ ಪೊರೆಗಳನ್ನು ?
ಹೇಗೆ ಬೊಂಬೆಗಟ್ಟುವುದು ಊಹೆಗಳ ತಂಗಾಳಿಯನ್ನು ?
ಬದಲು ನುಡಿದಿದೆ ಪ್ರಕೃತಿ
'ಇಗೋ ನಾನಿದ್ದೇನೆ' ಎಂದು.
ಮನದಲ್ಲಿನ ಪ್ರತಿ ಚಲನೆಯನ್ನು

ತುಟಿಗೆ ತಂದುಕೋ ಎಂದು.
ತನ್ನಲ್ಲಿ ಒಂದು ಕಲ್ಲೋಲ —
ಘೋಷಿಸಿದೆ ಕಡಲ ಅಲೆ.
ತನ್ನಲ್ಲಿ ಒಂದು ಉಲ್ಲಾಸ —
ಪುಳಕಿಸಿದೆ ಹುಣ್ಣಿಮೆ ಕಿರಣ.
ತನ್ನಲ್ಲಿ ಒಂದುವೇದನೆ —
ಎದುರಾಗಿದೆ ಶ್ರಾವಣ ಮೇಘ.
ತನ್ನಲ್ಲಿ ಒಂದು ಗರ್ಜನೆ —
ಎಗರಿ ಧುಮುಕಿದೆ ಸಿಂಹಮರಿ.
ತನ್ನಲ್ಲಿ ಒಂದು ಮಾಧುರ್ಯ —
ಮಾತನಾಡಿದೆ ರಾಸನಿಲಯ.
ತನ್ನಲ್ಲಿ ಒಂದು ಮಾತ್ಸರ್ಯ —
ಆಕಳಿಸಿದೆ ಧೂಮವಲಯ.
ತನ್ನಲ್ಲಿ ಒಂದು ನಿಯತಿ —
ನಿಂತಿದೆ ನಿಸ್ತರಂಗ ಸರಸಿ.
ತನ್ನಲ್ಲಿ ಒಂದು ವಿಕೃತಿ —
ಕವಿದಿದೆ ಅಮಾವಾಸ್ಯನಿಶಿ.
ಪ್ರಕೃತಿ ನುಡಿದಿದೆ ಕೃತಿಯಾಗಿ
ಕೃತಿನಿಂತಿದೆ ಮಾನಸಾಕೃತಿಯಾಗಿ.
ಕದಲಿಹೋಗುತ್ತಿದೆ ಮನಸ್ಸು ತೆರೆಯಮೇಲೆ
ಕವಿತಾತ್ಮ ಪರಮಹಂಸದಂತೆ —
ಕಾಲದಪ್ಪೊದೆಗಳು ಬಿಚ್ಚುತ್ತಾ
ಲೋಕದ ಆಳವನು ಅಗೆಯುತ್ತಾ.
ಅರಚಿದ ಬಲಿಪಶುವಿನ ಕಂಠ
ಗುಡುಗಿದೆ ವರುಣ ಮಂತ್ರವಾಗಿ.
ಎದೆಒಡೆದ ತಮಸಾತೀರ
ಘೂರ್ಣಿಸಿದೆ ಶೋಕಚ್ಛಂದವಾಗಿ.
ಬೆವರುಗೊಂಡ ವಿರಹ ಕೈಚಾಚಿ
ಕವಿದುಹೋಗಿದೆ ಆಷಾಢಮೇಘವಾಗಿ.
ನೋಟಮೊಂದದ ನಯನ
ಊಹೆಚಾಚಿ ರೂಪವೆತ್ತಿದೆ

ಕಳೆದುಕೊಂಡು ಬೊಂದಿದ ಸ್ವರ್ಗದಂತೆ.
ಕವಿತಾತ್ಮ ಬೆಳಗಿಸಿದೆ ಗುಡಿಗಳಲ್ಲಿ
ಕರ್ಪೂರ ನೀರಾಜನಗಳನ್ನು.
ಆಗ್ರಹಿಸಿದ ಆ ಕವಿತಾತ್ಮ
ಆರಿಸಿದೆ ರೆಕ್ಕೆಬೀಸಿ
ಮತಗಳು ಚೆಲ್ಲಿಸಿದ
ಮನುಷ್ಯರ ರಕ್ತವನ್ನು
ಘೃತದಂತೆ ಇಳಿನುಂಗುವ ದೀಪಗಳನ್ನು.
ಕವಿತಾತ್ಮ ಅಕ್ಷರಗಳನ್ನು ತೊಡಗಿಸಿದೆ
ಕಮನೀಯ ರಾಸರಹಸ್ಯಗಳಿಗೆ.
ವಿಕ್ರಮಿಸಿದ ಆ ಕವಿತಾತ್ಮ
ಕೇಳಿಸಿದೆ ವಿಹಾಯಸವನುತಾಗಿ
ಕರ್ಮಕ್ಷೇತ್ರದಲ್ಲಿ ಕಾಲುಕಂಪಿಸಿದ ನರರಿಗೆ
ನಿಷ್ಕಾಮ ಕರ್ಮ ಭಾಷ್ಯಗಳನ್ನು.

ಕವಿತಾತ್ಮ ಕಲಕಲಲಾಡಲು —
ಮುಖಗಳಲ್ಲಿ ಪದ್ಮಗಳ ಪುನರ್ಮುದ್ರಣಗಳು
ಕಣ್ಣುಗಳಲ್ಲಿ ಕೆನ್ನೈದಿಲೆಯ ಕಲಭಾಷಣಗಳು
ತುಟಿಗಳಮೇಲೆ ತುಂಬುಬೆಳದಿಂಗಳ ಪ್ರಚುರಣಗಳು
ಕೆನ್ನೆಗಳಲ್ಲಿ ಚಿಗುರುಗೆಂಪಿನ ಪ್ರಸರಣಗಳು.
ಕವಿತಾತ್ಮ ವಿಲವಿಲ ಲಾಡಲು —
ಎಲೆಗಳುದುರಿಸಿದೆ ಹರಿತವೃಕ್ಷ
ಆಕಾಶ ಸುರಿಸಿದೆ ಜಲದಬಾಷ್ಪ
ರಾತ್ರಿಯನ್ನು ಆವರಿಸಿದೆ ಕೃಷ್ಣಪಕ್ಷ
ಧಾತ್ರಿಯನ್ನು ಆವಹಿಸಿದೆ ಧೂಮಗಾತ್ರ.
ಕಣ್ಣುಗೆಂಪಗೆ ಮಾಡಿದೆ ಕವಿತಾತ್ಮ —
ಸೌದೆ ಪುಳ್ಳೆಗಳು ಕರವಾಲಧಾರೆಗಳಾಗಿ
ಮಣ್ಣುಮುದ್ದೆಗಳು ಮಹಾಗ್ನಿಗೋಳಗಳಾಗಿ
ಕುರಿಯಕಂಠಗಳು ಶಾರ್ದೂಲ ಘೋಷಗಳಾಗಿ
ಮೂಳೆಗೂಡುಗಳು ಪ್ರಭಂಜನಶ್ವಾಸಗಳಾಗಿ.
ಕೊರಳೆತ್ತಿ ಹಾಡಿದೆ ಕವಿತಾತ್ಮ —

ಕತ್ತಿಮೊನೆಗಳು ನೇಗಿಲಗುಳಗಳಾಗಿ
ಶೂಲಗಳು ಮೊಳಗುವಲೇಖನಿಗಳಾಗಿ
ಮರುಭೂಮಿಗಳು ಹಸಿರುಗೀತೆಗಳಾಗಿ
ಕಬ್ಬಿಣ ಡೇಗೆಗಳು ರಜತಕಪೋತಗಳಾಗಿ.

ಓಡಿದೆ ಮನುಷ್ಯನ ಮನಸ್ಸು ಬಣ್ಣಗಳೊಳಕ್ಕೆ
ತೆವಳಿದೆ ಲಲಿತಮತಿ ರೇಖೆಗಳೊಳಕ್ಕೆ.
ಸಾಗಿಬಂದಿದೆ ಪ್ರಕೃತಿ ಸರ್ವಸ್ವ
ಕನಸುಗಾಣುವ ತುದಿ ಬೆರಳುಗಳೊಳಕ್ಕೆ.
ಕೊಳೆತುಹೋಗುವ ತೊಗಲಮೇಲೆ
ಮೊಳೆತುಬರುತ್ತಿವೆ
ಸುರಭಿಳ ಸುಮಲತೆಗಳು
ತರುಣಚಂದ್ರದ್ಯುತಿಗಳು.
ಹಲಗೆಯಾದ ಮರದ ಮೇಲೆ
ಪ್ರವಹಿಸುತ್ತಿವೆ
ಝರಿಗಳ ಸುರುಳಿ ಓಟಗಳು
ಎಳೆಜಿಂಕೆಗಳ ಚಿಗುರೆ ಕಾಲುಗಳು.
ಬರಿಮಣ್ಣಿನ ಪಾತ್ರೆಗಳ ಮುಖಗಳಮೇಲೆ
ಹುಟ್ಟಿ ಬರುತ್ತಿವೆ
ಅಪ್ಸರಾಂಗನೆಯರ ನಯನಭಂಗಿಗಳು
ಆಕಾಶಕ್ಕೆಟುಕದ ತರಳನೀಲಿಮಗಳು.
ಹೆಣೆದುಕೊಂಡ ಹತ್ತಿಯೆಳೆಗಳಂಚಿನ ಮೇಲೆ
ಹೊರಹೊಮ್ಮಿ ಬರುತ್ತಿವೆ.
ಮಂದವಾದ ಇಂದ್ರಧನುರ್ವರ್ಣ ವಾಹಿನಿಗಳು
ಮೊಂಡಾಗದ ಮಧುಮಾಸಹಾಸವನಗಳು.
ಎಲೆಗಳ ಮೇಲೆ
ರೇಕುಗಳ ಮೇಲೆ
ನಖಗಳ ಮೇಲೆ
ಗೋಡೆಗಳ ಮೇಲೆ
ಕತ್ತಿ ಒರಗಳ ಮೇಲೆ
ಕಾಗದದ ಪೊರೆಗಳ ಮೇಲೆ

ಛತ್ರಗಳ ಮೇಲೆ
ತಂಬೂರಿ ಬುರುಡೆಗಳ ಮೇಲೆ
ರೆಕ್ಕೆಗಳೆತ್ತಿ ನೆಗದಿವೆ
ಗೊರಸುಗಳೆತ್ತಿ ನಡೆದಿವೆ
ಹೆಡೆಗಳೆತ್ತಿ ನರ್ತಿಸಿವೆ
ಕೊಡೆಗಳೆತ್ತಿ ವರ್ತಿಸಿದೆ
ಚಲಿಸುವ ಆಕೃತಿಗಳನ್ನು ರೇಖೆಗಳಲ್ಲಿ
ಕುಮರಿಸಿದ ಚಿತ್ರಕಳಾತ್ಮ.
ಕುಸುಮಿಸಿದ ರೂಪಗಳಲ್ಲಿ ಚೈತನ್ಯ
ಬಸಿದಿರುವ ಸ್ನಿಗ್ಧವರ್ಣಾತ್ಮ.
ಮಲಗಿಕೊಂಡಿದೆ ಮನಸ್ಸು ಒಂದು ದಿನ
ಪರ್ವತದ ಮಡಿಲಲ್ಲಿ.
ಕರಗಿಹೋಗುತ್ತಿದೆ ತಾನಿರುವ ಶಿಲಾತಲ
ಕನಸಿನಂಥ ಸ್ಪರ್ಶದಲ್ಲಿ.
ಯಾವುವು ಆ ಬೆಟ್ಟಗಲ್ಲುಗಳು
ಯಾವುವು ಆ ಶಿಖರಗಳು
ಕಾಣುವುದಿಲ್ಲವೆ ಆ ಕಣಿವೆಗಳು
ನೆಗೆದುಹೋದುವೆ ಆ ಗುಹೆಗಳು ?
ಪರಿಭ್ರಮಿಸುತ್ತಿವೆ ತನ್ನ ಸುತ್ತಾ
ಚಿನ್ನದಮುದ್ದೆಗಳು
ಮೇಣದ ಕಂಬಗಳು
ಹಾಲನೊರೆಗಳು
ಹತ್ತಿಯೆಳೆಗಳು.
ಕಟ್ಟೆಯೆದುರು ನಿಂತ ಕಣಿವೆಯಲ್ಲಿ
ಕನಸು ಮುರಿದಿದೆ.
ಗಾಬರಿಗೊಂಡ ಮನಸ್ಸಿನಲ್ಲಿ
ಉಳಿ ಮೆರೆದಿದೆ.
ನಡೆದಿದೆ ಉಳಿ
ಜಡಗಟ್ಟಿದ ಅಡವಿಗಳನ್ನು ಒದರುತ್ತಾ.
ಕವಲಿದೆ ಉಳಿ
ಕಂದರಗಳ ಮೂತಿಕಟ್ಟುಗಳನ್ನು ಬಿಚ್ಚಿಹಾಕುತ್ತಾ.

ತಟ್ಟಿದ ಉಳಿ
ಹುಟ್ಟಿನೊಂದಿಗೆ ನಿದ್ರಿಸುತ್ತಿರುವ ಮೊಂಡುಬೆನ್ನುಗಳನ್ನು.
ತಡವಿದೆ ಉಳಿ
ಮುಡಿಬಿಚ್ಚಿಕೊಳ್ಳಲಾರದ ಭಂಡನ್ನೋಟಗಳನ್ನು,
ಶಿಲೆ ನುಡಿಸಿದೆ
ನಿಲುವೆತ್ತರ ನಿಶ್ಯಬ್ದರಾಗಕೃತಿಗಳನ್ನು,
ಶಿಲೆ ಸವರಿಸಿದೆ
ಕೆನ್ನೆಗಳ ಮೇಲೆ ಮಧುಮಗಳ ಮೇಲು ಮುಸುಕುಗಳನ್ನು.
ಶಿಲೆ ಚಿಮ್ಮಿಸಿದೆ
ಕಹಿಕಣ್ಣೀರಲ್ಲಿ ನೆನೆದ ನಿಟ್ಟುಸಿರನ್ನು.
ಶಿಲೆ ರಗಳಿಸಿದೆ
ಮೈಮೇಲೆಬಂದ ನೀಳಕತ್ತಿಗಳ ಬೆಂಕಿನೊಸಳುಗಳನ್ನು.
ತನ್ನನ್ನು ಸುಲಿಯುತ್ತಿರುವ ಮನುಷ್ಯನೊಂದಿಗೆ
ತಾದಾತ್ಮ್ಯವೇಕೋ ಶಿಲೆಗೆ ?
ಸರ್ವಾಂಗಗಳನ್ನು ಇರಿಯುತ್ತಿರುವ ಉಳಿಯೊಂದಿಗೆ
ಸಹಯೋಗವೇಕೋ ಶಿಲೆಗೆ ?
ಹೆಬ್ಬುಲಿಗಳು ಅಬ್ಬರಿಸಿದ ತನ್ನಲ್ಲಿ
ಬಿಂಬಾಧರಗಳನ್ನು ನುಡಿಸಿದ್ದಕ್ಕಾಗಿಯೇ ?
ವಿಷಸರ್ಪಗಳು ಫೂತ್ಕರಿಸಿದ ತನ್ನಲ್ಲಿ
ಬೆಳದಿಂಗಳ ಬಳ್ಳಿಗಳನ್ನು ಮೊಳೆಸಿದ್ದಕ್ಕಾಗಿಯೇ ?
ಪರವಶಿಸಿದೆ ಶಿಲಾಪ್ರಕೃತಿ
ಪಲ್ಲವಿಸಿದೆ ಸ್ವಪ್ನಾಕೃತಿ
ಅಮೃತ ಸ್ನಿಗ್ಧವಾಗಿ
ಆತ್ಮಕ್ಕೆ ಕನ್ನಡಿಯಾಗಿ.

ಕಾನನಗಳಲ್ಲಿ ಅವತರಿಸಿದ ಕೈಲಾಸಸದನಗಳು
ಕೋಣಗಳಲ್ಲಿ ಪ್ರತಿಫಲಿಸಿದ ಆದಿತ್ಯಚರಣಗಳು
ಅನಂತದಲ್ಲಿ ಅಂದಿಗೆ ಹಾಕಿದ ಆನಂದ ತಾಂಡವ ಹೇಲಾಗಳು
ದಿಗಂತದಲ್ಲಿ ಗುಟುರುಹಾಕಿದ ದೀಪ್ತ ಚೈತನ್ಯ ಲೀಲೆಗಳು
ಬುಟ್ಟಿಪಲಕದಲ್ಲಿ ಕಟ್ಟುಬಿದ್ದ ಚಪಲನಾಗಿನಿಗಳು
ಮರವನೆರಳಲ್ಲಿ ಬೆಳಕುಚೆಲ್ಲಿದ ಧ್ಯಾನವಾಹಿನಿಗಳು

ಹಾಲಿನಬಣ್ಣದಲ್ಲಿ ಗಡ್ಡೆಗಟ್ಟಿದ ಅಶ್ರುಗೀತೆಗಳು
ಕೈಯೆತ್ತಿ ನೆಟ್ಟಗೆ ನಿಂತ ಅಮರ ಜ್ಯೋತಿಗಳು
ಕಾಲದಮೂಲವಲ್ಲಿ ಹುಟ್ಟಿದ ಸಂಗತಿಗಳು
ಕಾಲಾತೀತವಾಗಿ ಕಟ್ಟಿದ ಕಥಾಕೃತಿಗಳು
ಪ್ರತೀಕಗಳಾಗಿ ತಿದ್ದಿಕೊಂಡ ವಿಶ್ವಾಸಗಳು
ರಾಜಸಮಾಧಿಗಳಲ್ಲಿ ತುಳಿಯಲ್ಪಟ್ಟ ನಿಶ್ವಾಸಗಳು
ಮುದ್ರೆಗಳಾಗಿ ಮೂರ್ತಿಗಟ್ಟಿದ ಜನ್ಮರಹಸ್ಯಗಳು
ಮೂರುಕಾಲಗಳಲ್ಲಿ ಕಣ್ಣಿಗೆ ತಟ್ಟಿದ ಜೀವನದೃಶ್ಯಗಳು—
ಶಿಲ್ಪಾತ್ಮವನ್ನು ದರ್ಶಿಸಿದ ಮುಕುರಗಳು
ಜೀವಾತ್ಮ ಎಸೆಯಲ್ಪಟ್ಟ ಶಕಲಗಳು.
ಮನುಷ್ಯನ ಮನಸ್ಸು ನೋಡಿಕೊಂಡಿದೆ
ತನ್ನ ನೆರಳನ್ನು ಅಗಣ್ಯರೂಪಗಳಾಗಿ.
ರಸಾಹಂಕೃತಿ ಕೂಡಿಸಿಕೊಂಡಿದೆ
ರಕ್ತಿಯನ್ನು ಚೈತನ್ಯಕೋಶಗಳಾಗಿ.

3

ಎಷ್ಟು ವಿಚಿತ್ರಮನಸ್ಸು ?
ಯಾವ ರೂಪವೂ ಇಲ್ಲ ತನಗೆ.
ಆದರೂ ಅದು
ನಾದವಾಗಿ ನೆಗೆದಿದೆ —
ಪದವಾಗಿ ನಡೆದಿದೆ
ರೇಖೆಗಳಾಗಿ ಮೆರೆದಿದೆ
ಮೂರ್ತಿಗಳಾಗಿ ನಿಂತಿದೆ
ಅಣುಅಣುವಿನಲ್ಲಿನ ಲಯಗಳನ್ನು
ತನುವಿನಲ್ಲಿ ಚೆಲ್ಲಿದೆ.
ಮದಿರಾಕ್ಷಿ ಕಣ್ಣುಗಳಲ್ಲಿ ಮುಳುಗುಹಾಕಿದೆ
ತುಟಿಮುಡಿ ಬಿಚ್ಚಿನೋಡಿದೆ
ತೆರೆತೆರೆಯಾಗಿ
ಪರಿಮಳಗಳನ್ನು ಹಿಡಿದಿದೆ.
ಪೊರೆಪೊರೆಯಾಗಿ
ಸುಸ್ವರಗಳನ್ನು ಸೆಳೆದಿದೆ.
ಮೆತ್ತನೆ ಬೆರಳುಗಳ ಮೊನೆಗಳಿಂದ
ಮೈಯನುಣುಪನ್ನು ಬಸಿದಿದೆ.

ಮನಸ್ಸೊಂದು ರೋದಸಿ ;
ಸಿಡಿಲಿನ ಅಡಿಗಳು ಬೀಳುತ್ತಿರುತ್ತವೆ
ಹೊಳಪಿನ ಬರೆಗಳು ಅಂಟುತ್ತಿರುತ್ತವೆ.
ಚಂದ್ರನ ಕುಲುಮೆಯಚ್ಚಿನಲ್ಲಡಗಿದ ಬೆಳದಿಂಗಳು
ಎಳೆಗಳಾಗಿ ಸಾಗುತ್ತಿರುತ್ತವೆ.
ಸೂರ್ಯನ ಕಣ್ಣುಕುಲುಮೆಯಲ್ಲಿ ಊದಿದ ಬೆಂಕಿ ಕಣಿಕೆಗಳು
ಹಸೀಇದ್ದಿಲಾಗಿ ಬಿದ್ದುಹೋಗುತ್ತಿರುತ್ತವೆ.
ರೋದಸಿಗೆ ಬಿಳಿಯ ಲೇಪ ಬಳಿದರೆ —
ಅದು ಬೆಳಕು.

ರೋದಸಿಗೆ ಕಪ್ಪುಬಣ್ಣ ಉಜ್ಜಿದರೆ
ಅದು ಕತ್ತಲು.
ಮನಸ್ಸಿಗೆ ಗೆಜ್ಜೆಗಳು ಕಟ್ಟಿಕೊಂಡರೆ
ತೆರೆಯೇಳುತ್ತದೆ.
ಮನಸ್ಸನ್ನು ಆಕಳಿಕೆ ಸುತ್ತಿಕೊಂಡರೆ
ತೆರೆಯಿಳಿಯುತ್ತದೆ.
ತೂಗಬೇಕೆಂದುಕೊಳ್ಳುತ್ತದೆ ಅದು
ಉಯ್ಯಾಲೆಗಳಾಗುತ್ತವೆ ಮೋಡಗಳು.
ಮೊಳಗಬೇಕೆಂದುಕೊಳ್ಳುತ್ತದೆ ಅದು
ಮೃದಂಗಗಳಾಗುತ್ತವೆ ಗುಡುಗುಗಳು.

ಮನಸ್ಸೊಂದು ವೃಕ್ಷಮೂಲ ;
ಅದು ಹೀರಿಕೊಳ್ಳುತ್ತದೆ
ಕಾಣಿಸದ ಪೊರೆಗಳಲ್ಲಿನ ಜೀವಸಾರ.
ಒಡೆದುಬಿದ್ದು ನಗುತ್ತವೆ
ಚಿಗುರುಗಳು ಬಿಚ್ಚರಳಿದ ಎಸಳುಗಳಾಗುತ್ತವೆ.
ಕುದಿದು ಕುದಿದು ಅಳುತ್ತದೆ
ಎಲೆಗಳು
ಜಳಜಳ ಉದುರುವ ಮಂಜಿನ ತೊಟ್ಟುಗಳಾಗುತ್ತವೆ.
ನೆತ್ತಿಸುಡುವ ಉರಿಬಿಸಿಲಲ್ಲಿ
ನೆರಳತುಂತುರು ಸುರಿಸುತ್ತದೆ.
ತನ್ನನ್ನು ತುಂಡುತುಂಡಾಗಿ ಕತ್ತರಿಸುವ ಕೊಡಲಿಗೆ
ತಾನೇ ಆಧಾರವಾಗಿ ನಿಲ್ಲುತ್ತದೆ.
ತಾನು ನೆಲದಲ್ಲಿ ಇಳಿಬಿದ್ದಿದ್ದರೂ
ತನ್ನಮಕ್ಕಳನ್ನು ಗಾಳಿಯಲ್ಲಿ ಹಾರಿಬಿಡುತ್ತದೆ.
ಕಾಲ ತನ್ನಕಣ್ಣಲ್ಲಿ ಧೂಳಿಸೆದರೂ
ಕದಲದ ಕಾಲುಗಳಿಂದ ನಿಂತುಬಿಡುತ್ತದೆ.
ಎಂದೂ ಕುದುರುಬಿಡದ ಮನಸ್ಸು ಬೆರಳುಗಳನ್ನು
ಆಗಾಗ ಆಲೆ ಕೊರೆಯುತ್ತದೆ.
ಕೊಂಬೆಗಳ ಕೈಗಳೆತ್ತಿ ಆಡಬೇಕೆಂದು ;
ಚಿಗುರೆಲೆಗಳ ಕರವಸ್ತ್ರಗಳನ್ನು ಬೀಸುತ್ತಾ

ಪಥಿಕರ ಕಣ್ಣುಗಳನ್ನು ಮಾತನಾಡಿಸಬೇಕೆಂದು.
ಬೇರಕೊನೆಗಳು ಬುಡಮೇಲಾಗಿದ್ದರೆ
ವೃಕ್ಷಮಾತೃಕೆ ನಾಶವಾಗುತ್ತದೆ.
ಆಶೆಗಳ ಅಂಚುಗಳು ಹೊಗೆಯೆಬ್ಬಿಸಿಸುತ್ತ ಬಂದರೆ
ಅಂತರಂಗ ಹೂತುಹೋಗುತ್ತದೆ.
ಮನಸ್ಸೊಂದು ಮಹಾಸಾಗರ ;
ತಾನು ಕಟ್ಟಿಕೊಂಡ ತೀರವನ್ನು
ತಾನೇ ಕಬಳಿಸಬೇಕೆಂದು ನೋಡುತ್ತದೆ.
ತನ್ನ ಒಡಹುಟ್ಟಾದ ಧರಾತಲವನ್ನು
ತಾನೇ ಕುಡಿದುಬಿಡಬೇಕೆಂಮು ನೋಡುತ್ತದೆ.
ಭೋರ್ಗರೆಯುತ್ತಾ ಕುಪ್ಪಳಿಸಿ ಕುಪ್ಪಳಿಸಿ ಬರುತ್ತದೆ.
ಬಾಯೊತ್ತಿಕೊಳ್ಳುತ್ತಾ ತಿರುತಿರುಗಿ ಹೋಗುತ್ತದೆ.
ತನ್ನಲ್ಲಿ ಅಂಬರಗಳನ್ನು ಹಾಸಿಕೊಳ್ಳುತ್ತದೆ.
ತಾನೇ ಆಕಾಶವೆಲ್ಲಾ ಆವರಿಸಬೇಕೆಂದು
ತಹತಹಸಿಸುತ್ತದೆ.

ನದಿಗಳನ್ನು ತನ್ನಲ್ಲಿ ಬೆರೆಸಿಕೊಂಡರೂ
ಮಧುರಿಮಗಳೆಷ್ಟೆಷ್ಟೋ ತುಂಬಿಕೊಂಡರೂ
ತನಗೆ ನಿಂತ ರೂಪವೊಂದೆ
ತನಗೆ ಉಳಿದ ರುಚಿ ಒಂದೆ.
ಅನಂತ ಜಲರಾಶಿ ತಾನಾದರೂ
ಆರಿಸಿಕೊಳ್ಳಲಿಲ್ಲ ತನ್ನಲ್ಲಿನ ಕಿಚ್ಚನ್ನು.
ತನ್ನ ಮೇಲೆ ಎಷ್ಟು ಬಿಳುಪು ಸುರಿಯುತ್ತಿದ್ದರೂ
ಮುಚ್ಚಿಕೊಳ್ಳಲಾರದು ತನ್ನ ಮೈಯ ಕಪ್ಪನ್ನು.
ಹಿಮಗಿರಿಗಳ ಮೇಲೆ ಹಾರುವ ಮನಸ್ಸೇ
ಇಕ್ಕಟ್ಟಾದ ಕಣಿವೆಗಳಲ್ಲಿ ನುಗ್ಗಿಬಿಡುತ್ತವೆ.
ಅರುಣೋದಯಗಳನ್ನು ಪ್ರತಿಷ್ಠಿಸುವ ಮನಸ್ಸೇ
ಹೇಡಿಕತ್ತಲಲ್ಲಿ ಇಳಿಬೀಳುತ್ತದೆ.
ಹಸಿರನ್ನು ಅತಿಮೇಯ್ದು
ಮರಳನ್ನು ನೆಮರುಹಾಕುತ್ತದೆ.
ಉರಿಯುವ ಮರಳನ್ನು ನುಂಗಿ

ಗದ್ದೆಗಳನ್ನು ಮುಕ್ಕಳಿಸುತ್ತದೆ.
ಬೀಜವಾಗಿರುತ್ತಲೇ
ವೃಕ್ಷವಾಗಿ ಕುಳಿತುಕೊಳ್ಳುತ್ತವೆ ಅದು.
ಅಂತರಿಕ್ಷವಾಗಿದ್ದುಕೊಂಡೇ
ಅಣುವಿನಂತೆ ಅಣಗಿಸಿಕೊಳ್ಳುತ್ತದೆ.
ಅದು ಅಗಮ್ಯ
ಅನ್ವೇಷಿಸುತ್ತದೆ ಗಮ್ಯ.
ಅದೊಂದು ಶೂನ್ಯ
ಅವಲೋಕಿಸುತ್ತದೆ ಕಾಮ್ಯ.
ಅದು ಕಾಲಾತಿರಕ್ತ—
ಆರು ಋತುಗಳು ಒಂದು ಲಿಪ್ತದಲ್ಲಿ.
ಅದು ಯೋಗಾಭಿಷಿಕ್ತ—
ಉದಯಾಂಶುಗಳು ಆ ಸುಷುಪ್ತಿಯಲ್ಲಿ.
ಯಾವಾಗ ಹನಿಯಾಗುತ್ತದೋ
ಯಾವಾಗ ಸಿಡಿಲಾಗುತ್ತದೋ
ಯಾವಾಗ ಅಡಿಯಿಡುತ್ತದೋ
ಯಾವಾಗ ಮಡುವಾಗುತ್ತದೋ
ಯಾವಾಗ ನಗುತ್ತದೋ
ಹೇಗ್ಹೇಗೆ ನಗುತ್ತದೋ.
ಬೆಳ್ಳಗೆ ನಕ್ಕಿದೆಯಾ
ತೆರೆಚಾಪೆಗಳೆತ್ತುವ ಜ್ಯೋತ್ಸ್ನಾಸರಿತ್ತುಗಳು.
ಕಪ್ಪಗೆ ನಕ್ಕಿದೆಯಾ
ನಾಗಫಣೆಗಳೆತ್ತುವ ವಿಷಮರಾತ್ರಿಗಳು.
ಹಚ್ಚಗೆ ನಕ್ಕಿದೆಯಾ
ಬಿರುಕುಬಿಟ್ಟ ನೆಲದಲ್ಲಿ
ಪಲ್ಲವ ಜಯಂತಿಗಳು.
ಕೆಂಪಗೆ ನಕ್ಕಿದೆಯಾ
ಹುಚ್ಚೆದ್ದು ಅರಚುವ ರುಧಿರಸ್ರವಂತಿಗಳು.
ರಾಜಸಮುದ್ರ ಬಿಡಲಾಗದ ಮನಸ್ಸು
ರಾಚಿಕೊಂಡಿವೆ ಒಂದು ದಿನ
ಪರಿಪೂರ್ಣ ಸತ್ವಲಬ್ಧಿಗೆ

ಪೊರೆಗಳಿಲ್ಲದ ಸತ್ಯಸಿದ್ಧಿಗೆ.
ಸಾಗುತ್ತಿದೆ ಆ ತಪಸ್ಸು
ಕ್ಷಣಗಳ ಶಿಖರಗಳು ಧುಮುಕಿ
ದಿನಗಳ ಗಹನಗಳು ದಾಟಿ
ಕಾಲಘಟ್ಟಗಳನ್ನು ಸೀಳಿಕೊಂಡು
ವೇಲಾವಲಯಗಳನ್ನು ತೂರಿಕೊಂಡು
ಸಮುನ್ನತ ಲಕ್ಷ್ಯಸಾಗರ
ಸಂಗಮಕ್ಕಾಗಿ.
ನಿಂತುಕೊಂಡಿದೆ ಆ ತಪಸ್ಸು
ನಿರಂತರ ವರ್ಷಾಘಾತದಲ್ಲಿ ಗುಹಾಗರ್ಭದಂತೆ
ನಿತಾಂತ ಹಿಮಪಾತದಲ್ಲಿ ಮಿಹಿರಬಿಂಬದಂತೆ
ಉದಗ್ರನಿದಾಘತಾಪದಲ್ಲಿ ವಟಚ್ಛಾಯೆಯಂತೆ
ಉನ್ಮತ್ತ ಋತುಗತಿಗಳಿಗೆ ಬೆದರಿದ
ಉದಾತ್ತಹೃದಯ ಸ್ಥಾಯಿಯಂತೆ ;
ವಿಕೃತಿಗಳನ್ನೆಲ್ಲಾ ಮೂಟೆಗಟ್ಟಿ
ಪ್ರಕೃತಿ ಮಡಿಲಿನೊಳಕ್ಕೆ ಬೀಸೆಸೆಯುತ್ತಾ.
ಬೆಳೆಯುತ್ತಿದೆ ಆ ತಪಸ್ಸು
ಶಿರಸ್ಸುಮೇಲಿನ ಹುತ್ತಗಳನ್ನು ಭೇದಿಸಿಕೊಳ್ಳುತ್ತಾ
ಸ್ಥಿರ ಸಂಕಲ್ಪವನ್ನು ನಾದವಾಗಿ ಪ್ರಬೋಧಿಸಿಕೊಳ್ಳುತ್ತಾ
ನಕ್ಷತ್ರ ಮಂಡಲಗಳನ್ನು ಬುಡಮೇಲು ಮಾಡುತ್ತಾ
ಅಕ್ಷೀಣ ಕಾಂತಿಗೋಳಗಳನ್ನು
ಆಕ್ರಮಿಸಿಕೊಳ್ಳುತ್ತಾ
ಅನಾಹತವಾಗಿ ಅಶರೀರವಾಗಿ ಪ್ರಸ್ಥಾನಿಸುತ್ತಾ
ದೊಡ್ಡಸ್ಥಿಕೆ ಚಟವಾದ ವೈಭವಮತ್ತುಗಳ
ಎತ್ತರದ ಗದ್ದುಗೆಯನ್ನು ಪ್ರತಿಘಟಿಸುತ್ತಾ.

ಅಚ್ಚರಿಗೊಂಡಿದೆ ದೊಡ್ಡಸ್ಥಿಕೆ
ಗುತ್ತಿಗೆ ಸ್ವತ್ತು ಕೈಜಾರಿದಂತೆ.
ಅಗಮ್ಯವಾಗಿ ಬಚ್ಚಿಟ್ಟ
ಅಮೃತಭಾಂಡದ ಕುದುರು ಕದಲಿದಂತೆ.
ಹಿತ್ತಲಿನಲ್ಲಿ ಕಟ್ಟಿಹಾಕಿದ ವಾಹನದಮೇಲೆ

ಮತ್ತಾರೋ ಮೆರವಣಿಗೆ ಹೋದಂತೆ.
ತನ್ನ ಸುತ್ತೂ ಹೆಣೆದುಕೊಂಡ ಆನಂದವನಿ
ಧರಣಿಮೇಲಕ್ಕೆ ಕಳಚಿಬಿದ್ದಂತೆ.
ಮಿಲಮಿಲಲಾಡಿದ ಅಧಿಕಾರ
ಸಾವಿರಕಣ್ಣು ಉರಿದುಹೋಗಲು.
ಚಿಟಿಕೆಹಾಕಿದ ಅಧಿಶಾಸನ
ಕ್ಷಣವಲ್ಲಿ ಒಂದು ಮಿಂಚುಬಳ್ಳಿ ಜಗಿದುಬರಲು.
ನಯನಸಮುಂಕೃತಿಯನ್ನು ಅರಿತ ಆ ಮಿಂಚು ಬಳ್ಳಿ
ಹಿಗ್ಗಿವಾಲಿದ ಭೂಮಿಮೇಲಕ್ಕೆ ;
ಸಡಲಿಹೋಗದ ರೂಕ್ಷತಪೋದೀಕ್ಷೆ
ಜಡೆಗಟ್ಟಿಕೊಂಡ ಮೌನವಾಟಿಗೆ.
ಮಿಂಚುಬಳ್ಳಿ ನಿಂತು ನೋಡಿದೆ
ಮೆರೆದಿದ ಜಟಾಟವಿಯಲ್ಲಿ ಒಂದು ವಿಶ್ವ ;
ಊರ್ಧ್ವಲೋಕಗಳನ್ನು ಅಧಃಕರಿಸುವ
ಉಗ್ರತಪಸ್ಸರ್ವಸ್ವ.
ತಿರುಗಿನೋಡಿದೆ ಆ ಮಿಂಚುಬಳ್ಳಿ
ಪುರುಷಾತಪ
ಪೂರ್ಣಚಂದ್ರಿಕೆಗಳ ಉರುಳು ಬಿಚ್ಚಲು —
ಶ್ವಾಸ ಗಡ್ಡೆಕಟ್ಟಿದ
ಸೌರಭ ಝುಂಝುಗಳು ರೆಕ್ಕೆಗಳೆತ್ತಲು.
ಆ ಬಳ್ಳಿಯ ಚಿಗುರುಅಡಿಗಳಿಗೆ
ಹೂಗಳೇ ಗೆಜ್ಜೆಗಳಾಗಿ
ಪರಿಮಳಗಳೇ ನಾದಗಳಾಗಿ
ಸಕಲ ಜೀವಾಣುಗಳು
ಮುಖರಿಸಿಹೋಗಲು.
ಮುಚ್ಚಳಬಿದ್ದ ಕಿವಿಗೆಹಾಕಿದ ಮುಡಿ
ಸಡಿಲಿ ಹೋಗಿದೆ ಚಿತ್ರವಾಗಿ.
ತಲೆಗೇರಿದ ಕಣ್ಣಾಲಿಗಳ ನೋಟ
ಹೊರಉಕ್ಕಿದೆ ಆತುರವಾಗಿ
ಶಿಲೆಯಲ್ಲಿ ಉಬ್ಬರವಿಳಿತಗೊಂಡಿದೆ ಅಲೆ
ಹಿಮದಲ್ಲಿ ಇರಿದುಕೊಂಡು ಬಂದಿದೆ ಸಮಜ್ವಾಲೆ.

ಚೆದುರಿದ ಉಷಸ್ಸು ಕಣ್ಣಿಗೆ
ಕತ್ತಲೇ ಬಲೆಗಳ ಮುಂಗುರುಳಾಗಿ —
ಮುರಿದ ತಪಸ್ಸು ಮೈಗೆ
ಮಿರುಪುಮಿಟ್ಟೆಗಳೇ ಮರುಳ ದೊಂತಿಗಳಾಗಿ —
ನಿಯತಿ ಜಜ್ಜಿಹೋಗಲು
ನಿಷ್ಠೆ ನೀರಾಗಿಹೋಗಲು
ಸಂಚರಿಸಿದೆ ಸತ್ತ್ವ ಶೈಲ
ಸಮೂಲವಾಗಿ.
ಬಿದ್ದುಹೋಗಿದೆ ತಪಸ್ ಶಿಖರ
ಪ್ರಕಾಮವಾಗಿ.

ವರ್ಷಗಳ ತಪಸ್ಸು ಬೇರುಗಳನ್ನು ತಾನೇ
ಬುಡಮೇಲು ಮಾಡಿಕೊಳ್ಳುತ್ತದೆ ಮನಸ್ಸು.
ತೀವ್ರ ಝಂಝಗಳ ಪಂಜಾಪೆಟ್ಟುಗಳನ್ನು
ತಿರುಗಿಸಿಹೊಡೆಯುತ್ತದೆ ಮನಸ್ಸು.
ಆವಿಯಾದ ಆ ಮನಸ್ಸು ಒಂದು ದಿನ
ಆಶ್ರಯಿಸಿದೆ ತರುಮೂಲವನ್ನು
ತೃಷ್ಣಾಮೂಲಾನ್ವೇಷಣೆಯಲ್ಲಿ
ದುಃಖಹೇತುಗವೇಷಣದಲ್ಲಿ.
ಈಗಿನ ಈ ವಿರಾಗಪಥ
ಆಗಿನ ಅನುಭೋಗ ಪದ.
ಎಷ್ಟೆಷ್ಟು ಬೆಳದಿಂಗಳ ಎಸಳುಗಳೊಂದಿಗೆ
ಬೆಳೆದಿದೆಯೋ ಆ ಮನಸ್ಸು.
ಎಷ್ಟೆಷ್ಟು ವಸಂತಗಳ ರೆಕ್ಕೆಗಳೊಂದಿಗೆ
ನೆಗೆದಿದೆಯೋ ಆ ಮನಸ್ಸು.
ಅದು ನೋಡಿದ್ದು ಕಚ್ಚುವ ಮಂಜನ್ನಲ್ಲ
ಒಣಬಿಸಿಲಲಿ ನೆನೆಯುವ ಮಂಜನ್ನು.
ಅದು ನೋಡಿದ್ದು ಕಗ್ಗತ್ತಲನ್ನಲ್ಲ
ಕಡೆಗಣ್ಣಿನಿಂದ ಕಡಿಯುವ ಸುಂದರ ಕತ್ತಲನ್ನು.
ಪ್ರಭಾತಪದಗಳ ಸದ್ದಿಗೆ
ಹಾಸಿಗೆ ಉರುಳಿಸುವುದು.
ಪನ್ನೀರ ಕೆರೆಯ ಅಂದದಮೈಗೆ

ಪರಿಮಳಗಳನ್ನು ಹಂಚುವುದು.
ಕೇಳಿವನಗಳ ಸಂದಿಗಳಲ್ಲಿ
ಮುಸ್ಸಂಜೆಗಳನ್ನು ಕರಗಿಸುವುದು.
ನೊರೆಯೇಳುವ ಮದಿರೆಯ ತುಟಿಗಳಲ್ಲಿ
ಮೋಹಕ ರುಚಿಗಳನ್ನು ನುಡಿಸುವುದು.
ಕುಸುಮತಲ್ಪಗಳ ನೌಕೆಗಳಿಂದ
ಕೊನೆರಾತ್ರಿಗಳನ್ನು ಚುಂಬಿಸುವುದು.
ಕತ್ತಿಕೈಗೆಟುಕಿದರೆ ಸಾಕು
ಕುತ್ತಿಗೆಗಳು ನೂರು ಉರುಳುವುವು.
ಬಿಲ್ಲೇರಿಸಿದರೆ ಸಾಕು
ಸಾವಿರಗುಂಡಿಗೆಗಳು ಒಡೆಯುವುವು.
ಅಶ್ವದ ಬೆನ್ನುತಟ್ಟಿದರೆಸಾಕು
ಆರುನಿಲವುಗಳು ಉಕ್ಕಿಹೋಗುವುದು.
ರಥದಮೇಲೆ ಅಡಿಯಿಟ್ಟರೆ ಸಾಕು
ಪ್ರಭಂಜನ ಓಟ ಜೋರಾಗುವುದು.
ಕಂಠ ಬಿಚ್ಚಿದರೆ ಸಾಕು
ಗಾಂಧರ್ವಗಂಗೆಗಳ ಶಿರಸ್ಸುಗಳು ತೂಗುವುವು.
ಯೋಚನೆ ತೆರೆದರೆ ಸಾಕು
ಲಲಿತಕವಿತೆಗಳು ಲಾಸ್ಯವಾಡುವುವು.

ಕಲಹಾಸವೇ ವಿನಹ
ಕಣ್ಣೀರು ಕಾಣದ ಮನಸ್ಸು
ಕೋಟಿ ಕೊತ್ತಳಗಳ ಹೊರತು
ಸುಡುಗಾಡು ದಿಬ್ಬಗಳನರಿಯದ ಮನಸ್ಸು
ಸ್ವಪ್ನಗಳ ಪರಿಧಿ ದಾಟಿ
ಸಾಗಿದೆ ನಗರದ ನಡುವೆಗೆ,
ಕಹಿನಿಜಗಳು ನೆರಳಿನಂತೆ
ಅಲೆದಾಡುತ್ತಿರುವ ಎಡೆಗೆ.
ಒಂದು ದೃಶ್ಯ—
ಸಡಿಲಿಹೋದ ಕೀಲುಗಳನ್ನು ಎಳೆದುಕೊಳ್ಳುತ್ತಾ.
ಮತ್ತೊಂದು ದೃಶ್ಯ—

ಕುಡಿಗಟ್ಟಿದ ಉಸಿರನ್ನು ಮೇಲೆಳೆದುಕೊಳ್ಳುತ್ತಾ.
ಇನ್ನೊಂದು ದೃಶ್ಯ—
ಕಣ್ಣುಗುಡ್ಡೆಗಳುತೇಲಿದ
ಕೋಲನ್ನು ಹೊತ್ತುಕೊಳ್ಳುತ್ತಾ.

ನಿಂತಿದೆ ತನ್ನನೆರಳು
ನಿಲುವುಗನ್ನಡಿಯಂತೆ.
ತೋಚಿದೆ ತನ್ನರೂಪ
ಮಣ್ಣನ್ನು ತೊಟ್ಟುಕೊಂಡ ಮಾಣಿಕ್ಯದಂತೆ.
ಸಿಡಿಲುಬಿದ್ದಿದೆ ಮನಸ್ಸಿನಲ್ಲಿ.
ಪೇರಿಕೊಂಡ ಜೇನುಪೊರೆಗಳು
ಜಾರಿಬಿದ್ದಿವೆ ಕ್ಷಣದಲ್ಲಿ.
ಬಾಣದಂತೆ ಹೆಣೆದುಕೊಂಡಿದೆ
ಅಂತಶ್ಚೇತನ.
ಬದುಕೆಂದರೆ ದುಃಖವೇ ?
ಸುಖವೆಂದರೆ ಸ್ವಪ್ನವೇ ?
ಬಯಕೆಯಿಲ್ಲದೆ ಮನುಷ್ಯನಿಲ್ಲವೇ ?
ಕತ್ತಲಿಲ್ಲದ ಬೆಳಕುಬಾರದೇ ?
ಮಸ್ತಿಷ್ಕವನ್ನು ಪ್ರಶ್ನಿಸುತ್ತಿರುವ
ಉರಿಗಳ ಮಧ್ಯೆ
ಕಣ್ಣುಗಳಲ್ಲಿ ಬೊಬ್ಬಿಡುತ್ತಿರುವ
ಕಗ್ಗತ್ತಲ ಮಧ್ಯೆ
ಎದೆಯಲ್ಲಿ ಮುಲುಗುತ್ತಿರುವ
ಒಣಯೆಲೆಗಳ ಮಧ್ಯೆ
ಹೆಜ್ಜೆಗಳು ಕದಲುತ್ತಿವೆ
ಅಡಿಗಡಿಗೆ ಸುತ್ತಿಕೊಳ್ಳುತ್ತಿರುವ
ರಾಗರಜ್ಜುಗಳನ್ನು ಕಡಿದುಕೊಂಡು
ರಕ್ತಬಂಧಗಳನ್ನು ತಪ್ಪಿಸಿಕೊಂಡು.
ಹೆಜ್ಜೆಗಳೇ ಪ್ರಶ್ನೆಗಳಾಗಿ ಕೇಳುತ್ತಿವೆ
ಜಡೆಗಟ್ಟಿದ ಅರಣ್ಯಗಳನ್ನು
ಜ್ಞಾನಪೀಠಿಕೆಗಳನ್ನು

ಧ್ಯಾನವಾಟಿಕೆಗಳನ್ನು.
ಬದಲುದೊರೆಯದ ಹೆಜ್ಜೆಗಳು
ಕುಮುರಿಕೊಂಡಿವೆ ತರುಮೂಲದಲ್ಲಿ ;
ಸೃಷ್ಟಿರಹಸ್ಯ ಶೋಧನೆಯಲ್ಲಿ
ಜೀವಿತಲಕ್ಷ್ಯಸಾಧನೆಯಲ್ಲಿ.

ಅತ್ತ ನಕ್ಕಿದೆ ಒಂದು ಅಂದುಗೆ
ಇತ್ತ ನಕ್ಕಿದೆ ಒಂದು ಮುಚ್ಚಂಜೆ.
ಅತ್ತ ನುಡಿದಿದೆ ಒಂದು ಕುಸುಮಶಲಾಕೆ
ಇತ್ತ ನುಡಿದಿದೆ ಒಂದು ಮದನ ಪತಾಕೆ.
ಕಿರುಹನಿಗಳ ತರಂಗಗಳು —
ಕಿವಿ ಬಿಚ್ಚಲಿಲ್ಲ ತರು.
ವಿಲಾಸಿನೋಟದ ಧೂಳು —
ನಯನಗಳು ಬಿಚ್ಚಲಿಲ್ಲ ತರು.
ಸೌರಭಗಳ ಕಲ್ಲೋಲಗಳು —
ಚಲಿಸಲಿಲ್ಲ ತರು.
ಪ್ರಲೋಭಗಳ ಪ್ರಕಂಪನಗಳು —
ಪಟ್ಟುತಪ್ಪಲಿಲ್ಲ ತರು.
ತರು ಮೂಲದಲ್ಲಿರುವ ಮನಸೇ
ತನ್ನಶಿರಸ್ಸಿನ ಸುತ್ತಾ ಬೆಳಗಿದೆ.
ಜೀವವನ್ನು ಕವಿದುಕೊಂಡ ಮಂಜುಹೊಗೆ
ಆ ಬೆಳಕಲ್ಲಿ ಕರಗಿದೆ.

ಕಾಂಕ್ಷೆ ಮನಸ್ಸಿಗೆ ಬೇರು
ಚಲನ ಅದರ ರೀತಿ.
ಕಾಂಕ್ಷ ಬೆಳೆದರೆ ಆಶೆ
ಆಶೆ ಮುದುರಿದರೆ ಲೋಭ.
ಲೋಭಕ್ಕೆ ಎಷ್ಟೆಷ್ಟು ಪೊರೆಗಳು
ಆಳವರಿಯದ ಹಗೇಹುಗಳು.
ತನ್ನ ತೋರು ಬೆರಳ ನೆರಳಲ್ಲಿ
ಧರಾಗೋಳ ಒದಗಬೇಕೆಂಬ

ತನ್ನ ಕತ್ತಿಗಳ ಥಳಥಳಗಳು
ಇನಕಾಂತಿಗಳಾಗಿ ಕದಲಬೇಕೆಂದು
ತನ್ನ ಹಜಾರದಲ್ಲಿ ಧನರಾಶಿಗಳೆಲ್ಲಾ
ತಲೆಬಾಗಿ ನಿಲ್ಲಬೇಕೆಂದು
ತನ್ನ ಹಿಡಿಯಲ್ಲಿ ಮಾರಣಶಕ್ತಿಗಳೆಲ್ಲಾ
ದಾಸೋಹವೆನ್ನಬೇಕೆಂದು.

ತೆರಳಿಹೋಗಿದೆ ಒಂದು ನಾಡು
ತಲೆತಿರುಗಿದ ಲೋಭ
ಅಹಂಕಾರ ದಾಹ
ಧ್ವಜವೆತ್ತಿ ಬರಲು
ಆಕ್ರಮಣ ಮೋಹ ಕರಗಳೆತ್ತಿ ಹೋಗಲು.
ಯವನಾಶ್ವಗಳ ವಿಕಟಹೇಷಗಳಲ್ಲಿ
ಒಡೆದುಹೋಗುತ್ತಿರುವ ಅಷ್ಟದಿಕ್ಕುಗಳು.
ಖುರಪುಟವಿಕ್ಕುವ ಉಕ್ಕುಕಾಲುಗಳ ಕೆಳಗೆ
ಕಮರಿಹೋಗುತ್ತಿರುವ ಅಸುಗಳ ಮೊಳಕೆಗಳು.
ಪೊಗರುಕತ್ತಿಗಳ ಪಾಶವಿಕ ಕ್ರೀಡೆಯಲ್ಲಿ
ಕಡಿದುಬೀಳುತ್ತಿರುವ ಶಿರಸ್ಸುಗಳು.
ಸುರಿದ ನರರಕ್ತಸ್ಪರ್ಶದಿಂದ
ಕೆಂಪೇರಿದ ಸರಸ್ಸುಗಳು.
ಯಾವ ಪಶುತ್ವದ ಕೊಂಬು ಬೀಸಿದೆಯೆಂದು
ಈ ವಿಲಯ ವಿಹಾರ.
ಯಾವ ಅಧರ್ಮದ ಕಾಲು ಕೆರೆದಿದೆಯೆಂದು
ಈ ಭಯದ ಸಂಹಾರ.
ಮನೆಗಳನ್ನು
ಬೆಳೆದು ಒರಗಿದ ಪೈರುಗದ್ದೆಗಳನ್ನು
ಕೆಂಡದ ಪ್ರವಾಹದಲ್ಲಿ
ಯಾಕೆ ಪೂರಾ ಮುಳುಗಿಸೆತ್ತಿದಂತೆ ?
ಪ್ರಾಣಗಳನ್ನು
ಪ್ರಾಣಾಧಿಕವಾಗಿ ಬಚ್ಚಿಟ್ಟುಕೊಳ್ಳುವ ಮಾನಗಳನ್ನು
ರಾಕ್ಷಸಿ ಉಗುರುಗಳಿಂದ ಯಾಕೆ

ಪರಚಿಕೊಂಡು ಹೋಗುತ್ತಿರುವಂತೆ ?
ವಿಜೇತನಾಗಿ ಬೆಳಗಬೇಕೆಂದರೆ
ವಿಶ್ವವನ್ನೇ ಭಸ್ಮಮಾಡಬೇಕೇ ?
ಧರಾಲೋಭ ತೀರಬೇಕೆಂದರೆ
ನರರುಧಿರವೇ ಬೇಕೇ ?
ಸಾವಿರ ತೋಟಗಳನ್ನು ಕಡಿದ ಕೈ
ಅರಳಿಸುತ್ತದೆಯೇ ಒಂದು ಹೂವನ್ನು ?
ಮಾರಣ ಹೂಂಕೃತಿಗಳ ಚಟದ ಬಾಯಿ
ಹತ್ತಿರ ಕರೆಯುವುದೇ ಒಂದು ಶಿಶುವನ್ನು ?
ತನ್ನ ನೋಟವೇ ಶಾಸನ ಸೂಕ್ತವಾಗಿ
ತನ್ನ ಚಿಟಿಕೆಯೇ ಭೇರಿಧ್ವಾನವಾಗಿ
ಊರಿದ ತನ್ನ ಪ್ರತಿ ಹೆಜ್ಜೆಯೂ
ನಾಟದ ವಿಜಯಸ್ತಂಭವಾಗಿ
ಸಾಗಿಹೋಗಿದೆ ಆ ಲೋಭ
ಸಾಗರಗಳನ್ನು ಸುತ್ತಿಹಾಕಿಕೊಳ್ಳುತ್ತಾ.
ಮುಷ್ಟಿಯೆತ್ತಿದೆ ಆ ಲೋಭ
ಪೃಥ್ವೀತಲವನ್ನು ವಶೀಕರಿಸಿಕೊಳ್ಳುತ್ತಾ.
ಬಿಗಿಯಿಡಿದ ಆ ಮುಷ್ಟಿಯಲ್ಲಿ ಏನಿದೆಯೋ ?
ಜಗತ್ತುಜಾತಕ ಒದಗಿದೆಯೆ !
ವಿಶ್ರಮಿಸಿದ ಆ ಮೂರ್ತಿಯಲ್ಲಿ ಏನಿದೆಯೋ ?
ವಿಶ್ವವಿಜೇತೃಮುದ್ರೆ ಸಭೆ ಮಾಡಿದೆಯೇ !
ಪ್ರಶ್ನೆಯಾಗಿ ಮೆರೆದು ಹೋಗುತ್ತಿರುವ ಕಣ್ಣುಗಳಿಗೆ
ಪಾಪ ! ತಿಳಿಯದು -
ಹಿಡಿದ ಆ ಮುಷ್ಟಿ
ಕೊನೆ ಉಸಿರೆಳೆದಿದೆಯೆಂದು
ಪತಾಕೆ ಕಳಚಿಹೋಗಿ
ಬರೀಕೋಲು ಉಳಿದಿದೆಯೆಂದು.
ವಿಜ್ಞತೆನೋಟ ಸೋಕುತ್ತಲೆ
ಬಿಚ್ಚಿಕೊಂಡ ಆ ಹಿಡಿಯಲ್ಲಿ
ಆಕಳಿಸಿದೆ ದೈನ್ಯ
ಅಹಂಕೃತಿಗೆ ಸಮಾಧಿ ಕಟ್ಟಿದ ಶೂನ್ಯ.

ಸ್ವಲ್ಪ ಹೊತ್ತು ಶೂನ್ಯದಂತೆ ನೇತಾಡಿ
ಒಳನುಗ್ಗಿದೆ ಆ ಲೋಭ
ಮತ್ತೊಂದು ರಾಜ್ಯದಾಹದೊಳಕ್ಕೆ.
ಪ್ರತಿ ಕಹಳೆ ತನ್ನ ಶೌರ್ಯ ಮೊಳಗಬೇಕೆಂದು
ಪ್ರತಿ ಪತಾಕೆ ತನ್ನ ಹೆಸರಿನಲ್ಲಿ ನಿಲ್ಲಬೇಕೆಂದು
ಪ್ರತಿ ಮುಕುಟ ತನ್ನ ಕಾಲಿನುಗುರಿನಲ್ಲಿ
ಪ್ರತಿಫಲಿಸಬೇಕೆಂದು
ಪ್ರತಿಹೃದಯ ತನ್ನ ಬಿಚ್ಚುಗತ್ತಿಗೆ
ಪ್ರಣಾಮಿಸಬೇಕೆಂದು.
ಅದು ಕಿತ್ತುಹಾಕಿದೆ ಆತ್ಮೀಯತೆಯನ್ನು
ಹಿಸುಕಿಹಾಕಿದೆ ಆಪ್ಯಾಯತೆಯನ್ನು.
ಹಾಲುಕುಡಿಸಿ ಬೆಳೆಸಿಕೊಂಡಿದೆ ಕ್ರೌರ್ಯವನ್ನು
ಹಸಿನೆತ್ತರಿನಿಂದ ಅಭಿಷೇಕಿಸಿದೆ ಪೌರುಷ್ಯವನ್ನು.
ಅದು ನಡೆಸಿದ ಚೈತ್ರಯಾತ್ರೆಯಲ್ಲಿ
ಎಲ್ಲೆಡೆ ಹೆಣದ ರಾಶಿಗಳೇ.
ಹಿಂಸೋಲ್ಬಣದಲ್ಲಿ ಕಮರಿಹೋದ
ಮಾಂಸಖಂಡಗಳ ದಿಬ್ಬಗಳೆ.
ರಣೋನ್ಮಾದ ಮುದುರಿದ ಖಡ್ಗ
ಹನನತೃಷ್ಣೆ ತೀರದ ಕಂಠ
ಉಕ್ಕು ನಾಲಗೆ ಚಾಚಿಕೊಳ್ಳುತ್ತಾ
ಗಾಳಿಯಲ್ಲಿ ಮುಲುಗುತ್ತಿರುವ ಗರ್ಭಶೋಕವನ್ನು
ಕಹಕಹ ಧ್ವನಿಗಳಿಂದ ಬೀಳಿಸಿ ತುಳಿದುಕೊಳ್ಳುತ್ತಾ
ನಡೆಯುತ್ತಿವೆ ಅಡ್ಡಿಯಿಲ್ಲದೆ
ಸುರುಳಿಸುತ್ತುತ್ತಿರುವ ಸುಡುಗಾಡು ಹೊಗೆಯಂತೆ.
ಓಡಿಹೋಗುತ್ತಿವೆ ಹಳ್ಳಿಗಳು
ನೀರಾಗುತ್ತಿವೆ ನಗರಗಳು
ಒಂದುಹುಲ್ಲುಗುಡಿಸಲು ವಿನಹ
ಒಂದು ಬಡ ಮುದಿ ಜೋಡಿ ವಿನಹ.

'ಮುಂಚೂಣಿಯಲ್ಲಿ ನಿಂತ ಅಧಿನೇತ
ಮೂರುದಿಕ್ಕುಗಳು ಗೆದ್ದ ವಿಜೇತ.

ನಿಲ್ಲುವುದಿಲ್ಲವೇನು ನಿಮ್ಮ ತಲೆಗಳು ಬಾಗಿ
ಸೇವಿಸರೇನು ಗುಂಡಿಗೆಗಳು ಸಮರ್ಪಿಸಿ ?'
'ನರೋತ್ತಮರಿಗೇ ಸಲ್ಲುತ್ತವೆ ನಮನಗಳು
ದುರಾತ್ಮರಿಗಲ್ಲ.
ಕಾರುಣ್ಯಕ್ಕೇ ಬಾಗುತ್ತವೆ ಶಿರಸ್ಸುಗಳು
ಕಾಠಿಣ್ಯಕ್ಕಲ್ಲ.'
ನುಡಿದಿದೆ ಪುರುಷ ಸ್ವರ
ಪರಮಶಾಂತ ಪಲ್ಲವಿಸಲು.
ಗುಡುಗಿದೆ ನಗ್ನಖಡ್ಗ
ಉದಗ್ರ ಮದ ಪ್ರಜ್ವಲಿಸಲು.
ಬಾಗಿಹೋಗಿದೆ ಆ ಶಾಂತಸ್ವರ
ಉಕ್ಕಿಹರಿದಿದೆ ಅನಾಥ ಗಳ—
'ಇದು ನಿನ್ನ ಕೊನೆ ವಿಜಯ
ಇನ್ನು ಆಳಿಕೋ ಶ್ಮಶಾನಗಳನ್ನು.
ಎದುರಿಲ್ಲದ್ದು ನಿನ್ನ ವಿಭವ
ಇನ್ನುಹೀರಿಕೋ ವಿಷಪವನಗಳನ್ನು.
ಲಕ್ಷಪ್ರಾಣಗಳನ್ನು ಆರಿಸಿದ ಕತ್ತಿ
ಒಂದು ಉಸಿರನ್ನು ಬೆಳಗಿಸುವುದೇ ?
ಉರ್ವೀತಲವನ್ನು ನಡುಗಿಸಿದ ಶಕ್ತಿ
ಒಂದು ಹೃದಯವನ್ನು ಜಯಿಸುತ್ತದೆಯೇ ?
ಕೇಳುತ್ತೀಯಾ ನಿನ್ನ ಕೀರ್ತಿಗಾನ
ಗುಳ್ಳೆನರಿ ಗುಂಪಿನಬಾಯಿಂದ.
ಕೊಳೆತ ಶವಗಳನ್ನು ಕಿತ್ತುತಿನ್ನುವ
ರಣಹದ್ದುಗಳಿರುವ ಕಡೆ.'
ಚೆದುರಿಹೋಗಿದೆ ದರ್ಪ
ಕೈ ಜಾರಿಗೆ ಖಡ್ಗ.
ಕದಲಿಹೋಗಿದೆ ಪುನಾದಿಗಳೊಂದಿಗೆ
ಕಟ್ಟಿಕೊಂಡ ಅಹಂಕಾರ ದುರ್ಗ.
'ಏನು ? ಸಾಧಿಸಿದ್ದೇನು ?
ನರರುಧಿರದಿಂದ
ಕೆಂಪೇರಿದ ಕತ್ತಲು.

ಈ ಕತ್ತಲು ಬೆಳಕಾಗುವುದೇ ?
ಈ ಹಿಂಸೆ ಗೆಲುವಾಗುವುದೇ ?
ಮಂಕುತನವನ್ನು ಅರೆದುಹಾಕುವ ಲೋಭ
ಮನಸ್ಸಿಗೆ ಸುಪ್ರಭಾತವಾಗುವುದೇ ?
ಕುತ್ತಿಗೆಗಳನ್ನು ಕಡಿದರೆ ಅಲ್ಲ
ಹೃದಯಗಳನ್ನು ಬೆರಸಿದರೆ ಗೆಲುವು.
ವಿನಾಶ ಜರುಗಿದರೆ ಅಲ್ಲ
ವಿವೇಕ ಬೆಳೆದರೆ ಗೆಲುವು.
ಸಮರ ರಗಳೆಸುವುದು ಭೀತಿ
ಸಹನೆಯನ್ನು ವರ್ಷಿಸುವುದು ಪ್ರೀತಿ.
ಅನುರಾಗ ಮಾಡುವ ಶಾಸನವೇ
ನಿಜವಾದ ರಾಜನೀತಿ.'
ಸಮರವನ್ನು ತಿರಸ್ಕರಿಸಿದ ಸಾಮ್ರಾಟ
ಶಾಂತಿ ಶಿಖರಕೆ ಪ್ರಥಮಸೋಪಾನ.
ಪರಿಪಾಲನೆಗೆ ಮಾಡಿದ ವ್ಯಾಖ್ಯಾನ
ಪರಮಧರ್ಮ ನಡೆಸಿದ ಪ್ರಸ್ಥಾನ.
ಪ್ರಜಾಹಿತವೇ ಅಭಿಮತವಾಗಿ
ದಯಾಗುಣವೇ ಪ್ರಿಯರುತವಾಗಿ
ಎಲ್ಲೆಗಳು ದಾಟಿದೆ
ಆ ಧರ್ಮಪಥ
ತಣ್ಣಗೆ ಸಾಗಿದೆ
ಆ ಮನೋರಥ.

ಅರುಣೋದಯ ಸುಮ್ಮನಿರದು
ಕಿರಣಗಳನ್ನು ಪಸರಿಸದೆ.
ವಸಂತೋದಯ ಸುಮ್ಮನಿರದು
ಪರಿಮಳವನ್ನು ಪ್ರವಹಿಸದೆ.
ಪ್ರಸರಿಸುವ ನೀರು ಸುಮ್ಮನಿರದು
ಹಳ್ಳದ ತುದಿಮುಟ್ಟದೆ.
ಪ್ರತಿಘಟಿಸುವ ಮನಸ್ಸು ಸುಮ್ಮನಿರದು
ಪ್ರಶ್ನೆಗಳನ್ನು ಎದೆಯೇರಿಸದೆ.

ಎಷ್ಟೆಷ್ಟೋ ಪ್ರಶ್ನೆಗಳಿಗೆ
ಬೆನ್ನೆಲುಬಿನಂಥ ಪ್ರಶ್ನೆ
ಅಜ್ಞತೆಯನ್ನು, ಮದಮಗ್ನತೆಯನ್ನು
ಕನ್ನಡಿಯಿಡಿದು ತೋರಿಸಿದ ಪ್ರಶ್ನೆ
ಕುಳಿತಿದೆ 'ಕಟಕಟೆ'ಯ ನಡುವೆ ಬೆಟ್ಟದಂತೆ
ಬೀಸುವ ನಿಟ್ಟುಸಿರುಗಳ ನಡುವೆ ಚಲಿಸದ ಗುಂಡಿಗೆಯಂತೆ.
ಪ್ರಶ್ನೆ ಕೈಯಲ್ಲಿನ ವಿಷಪಾತ್ರಿಕೆ
ಮಾತಾಡಿಸುತ್ತಿದೆ ವಿಷಾದದಿಂದ
ಪ್ರಾಣಹರಣ ಗುಣವನ್ನು ಇಳಿನುಂಗಿಕೊಳ್ಳುತ್ತಾ
ಪರಮೋಜ್ವಲ ಸತ್ಯಕ್ಕೆ ಹಿಡಿಯುತ್ತಿರುವ ಗ್ರಹಣಕ್ಕೆ
ಪರಿತಪಿಸಿಕೊಳ್ಳುತ್ತಾ.
'ಗೊತ್ತೇ ನೀನು ಮಾಡಿದ ಅಪರಾಧ ?
ತೆರೆದೆಯಲ್ಲಾ ಜ್ಞಾನದ್ವಾರ.
ಏನೆಂದು ಹೇಳಲೇ ನಿನ್ನ ನೈಜ ?
ಹಾರಿಸಿದೆಯಲ್ಲವೆ ಸತ್ಯಧ್ವಜ.
ನಿರಸಿಸಿದೆ ಯಾಕೆಂದು
ತಲೆಮಾರುಗಳಿಂದ ಹೂತುಕೊಂಡ ದೈವಗಣಗಳನ್ನು.
ರಗಡಿಸಿದೆ ಯಾಕೆಂದು
ಹೊಗೆಯಪೊರೆಗಳು ದಾಟದ ಯುವಾಗ್ನಿಕಣಗಳನ್ನು.
ನಿನ್ನ ಹಣೆಯಲ್ಲೇ ಮೂಡಿದೆಯೇ ನ್ಯಾಯ ?
ನಿನ್ನ ಪಾತಿಯಲ್ಲೆ ಮೊಳೆತಿದೆಯೇ ಧರ್ಮ ?
ನಿಲ್ಲಿಸಿ ಕೇಳಿದೆಯಾಕೆ
ತಲೆಬಿಗಿಸಿದ ವಿಶೃತ ವಿದ್ವತ್ತನ್ನು.
ಬುಡಮೇಲು ಮಾಡಿದೆಯೇಕೆ
ಬೇರಿಳಿದ ಅಹಂಕಾರದ ಮತ್ತನ್ನು.
ಸೌಶೀಲ್ಯವೇ ಜ್ಞಾನವೆಂದು
ಸೌಂದರ್ಯವೇ ಸತ್ಯವೆಂದು
ಆತ್ಮತತ್ವ ಹೇತುರೀತಿಯಲ್ಲಿ
ಅನುವದಿಸಿದೆ ಯಾಕೆ ?
ಕಾನೂನುಕಟ್ಟಿದ ಸಂಘಪಟವನ್ನು
ಹಿಡಿದು ಊಗಿಸಿದೆ ಯಾಕೆ ?'

ನುಡಿಧಿದ್ದು ವಿಷಪಾತ್ರಿಕೆ ಅಲ್ಲ
ಪಕ್ವವಾದ ಅಧಿಕಾರ ನಾಲಿಗೆ.
ಕೇಳುತ್ತಿರುವುದು ಕಾರಾಗೃಹವಲ್ಲ
ವಿಚಲಿಸದ ವಿವೇಕ ದೀಪಿಕೆ.
ಪ್ರಶ್ನೆಯನ್ನು ಬಂಧಿಸಿದರೆ ಉದಯಿಸುತ್ತವೆ
ಪ್ರವಚನಗಳು.
ಗಾಳಿಯನ್ನು ಬಂಧಿಸಿದರೆ ಉಕ್ಕಿ ಬರುತ್ತವೆ
ಕಲ್ಲೋಲಗಳು.
'ನನಗೆ ತಿಳಿದಿದ್ದೊಂದೆ
ನನಗೇನು ಗೊತ್ತಿಲ್ಲವೆಂದು.
ಬೀಜ ಬಿತ್ತದೆಯೇ
ವೃಕ್ಷ ಮೊಳೆಯದೆಂದು.
ಕೆಡುಕು ಒಳಿತು ತಿಳಿದರೇನೇ
ಕೆಡುಕಿಗೆ ಮನಸ್ಸು ವಶವಾಗದೆಂದು.
ಕೆಸರಇರುವು ತಿಳಿದರೇನೆ
ಹೆಜ್ಜೆ ನೆಲದ ಮೇಲೆ ಬೀಳುತ್ತದೆಂದು.
ಸಮಮಾಡಿದ ಮನಸ್ಸಿನಲ್ಲೇ
ಹದವೇರುತ್ತದೆ ಜಿಜ್ಞಾಸೆ.
ಮುಸ್ಸಂಜೆಯಲ್ಲಿ ಯಾವಹೊತ್ತೂ
ಕಾಣಿಸದು ಪ್ರತ್ಯೂಷ.
ಆತ್ಮಾಹುತಿಯಲ್ಲೇ ಸತ್ಯ
ಅಮೃತವಾಗಿ ನಿಲ್ಲುತ್ತದೆ.
ತಾನು ಜ್ವಲಿಸಿದರೆಮಾತ್ರ ದೀಪ
ತನ್ನ ಸುತ್ತಲು ಬೆಳಕು ನೀಡುತ್ತದೆ.
ಆಲೋಚನೆಗಳ ಹೊತ್ತುಹುಟ್ಟುವಿಕೆಯನ್ನು
ತಡೆಯಲಾರದು ಯಾವ ಕತ್ತಲು.
ಹೊರಚಿಮ್ಮುವ ಆತ್ಮಕಿರಣಗಳನ್ನು
ನಿಲ್ಲಿಸಲಾರವು ಯಾವ ಗೊಲಸುಕಟ್ಟುಗಳು.'
ಮನಸ್ಸು ಒಡೆದ ವಿಷಚಷಕ
ತುಳುಕಿದೆ ಬಿಸಿಕಣ್ಣೀರಿನಂತೆ

ಕಡಿದುಹೋಗುತ್ತಿರುವ ಸ್ವರಗಳನ್ನು ಗಂಟುಹಾಕಿಕೊಳ್ಳುತ್ತ
ನಿಂತು ಹೋಗುತ್ತಿರುವ ಶ್ವಾಸಗಳನ್ನು ಸಾಗೆಳೆದುಕೊಳ್ಳುತ್ತ.
'ಸತ್ಯಕ್ಕೆ ಮೃತ್ಯುವೇ ?
ನ್ಯಾಯಕ್ಕೆ ನಾಶವೇ ?
ನೀತಿಗೆ ಖನನವೇ ?
ನಿಯತಿಗೆ ದಹನವೇ ?'
ತನುವೇನಾದರೂ ಆತ್ಮ ನಶಿಸದು
ಕಣ್ಣುಮರೆಯಾದರೂ ಕಾಂತಿ ನಶಿಸದು.
ಮರಣವಿಲ್ಲ ಪ್ರಶ್ನೆಗೆ
ಪರಿಧಿಯಿಲ್ಲ ಜ್ಞಾನತೃಷೆಗೆ.'

ಸೃಷ್ಟಿಗೆ ಮೂಲ
ಜ್ಞಾನ ಬೀಜ.
ವಿಶ್ವಂಭರಾಭ್ರಮಣಕ್ಕೆ ಮೂಲ
ಶಾಶ್ವತ ಚೈತನ್ಯ ತೇಜ.
ಪಕ್ಷಿಗಳ ರೆಕ್ಕೆಗಳು ಮಡಿಚಿಕೊಂಡು ಮಲಗಿದರೂ
ಪಶುಗಳ ಗೊರಸುಗಳು ಗೊರಕೆಯಿಡುತ್ತಿದ್ದರೂ
ಹುತ್ತಗಳಲ್ಲಿ ಫೂತ್ಕಾರಗಳು
ಮೂಕವಾಗಿದ್ದರೂ
ಮುಡಿ ಹರಡಿಕೊಂಡ ಮರಗಳು
ತೂಗುತ್ತಿದ್ದರೂ
ನಿದ್ರಿಸದು ಜ್ಞಾನ.
ನಿರಸಿಸದು ತೇಜ.
ಇಳಾಗರ್ಭ ಅಗೆದುಕೊಂಡಿದೆ ತನ್ನನ್ನು ತಾನು
ಎಷ್ಟೋ ಕೋಟಿ ಪೊರೆಗಳಾಗಿ.
ಇತಿಹಾಸ ತಿರುವಿಹಾಕಿಕೊಂಡಿದೆ ತನ್ನನ್ನು ತಾನು
ಎಷ್ಟೋ ಲಕ್ಷ ಪುಟಗಳಾಗಿ.
ಕೊಡವಿದ ಎಲ್ಲಾ ಪೊರೆಗಳಲ್ಲಿ
ಬಿಚ್ಚಿಕೊಂಡ ಎಲ್ಲಾ ಪುಟಗಳಲ್ಲಿ
ನಿತ್ಯ ನಡೆದ ಸೂರ್ಯಹತ್ಯೆಗಳೆಷ್ಟೆಂದು ?

ನಿರಂತರ ಹಾಕಿವ ಜ್ಞಾನಶಿಕ್ಷೆಗಳೆಷ್ಟೆಂದು ?
ಕಲ್ಲು ಎಸೆಯುವ ಕತ್ತಲ ಗುಂಪಿನ ಮಧ್ಯೆ
ರಕ್ಕಸಿತನ ಬೆಳೆಸಿಕೊಂಡ ಉಕ್ಕುಕಾಗೆಗಳ ಮಧ್ಯೆ
ಪ್ರಶಾಂತವಾಗಿ ನುಡಿದ ಕಿರಣಗಳವು.
ಪಾಪಪುಣ್ಯಗಳನ್ನು ನಿರ್ಣಯಿಸುವುದು ಯಾರೆಂದು ?
ಇದೆಯೇ ಪಾಪಚಿಂತನೆಯಿಲ್ಲದ ಶಿರಸ್ಸು ?
ಇದೆಯೇ ಅನ್ಯವಂಚನೆಯಿಲ್ಲದ ಮನಸ್ಸು ?
ಆತ್ಮಶೋಧನೆ ಒರೆಗಲ್ಲು ಶೀಲಕ್ಕೆ
ಆರ್ದ್ರವೇದನೆ ಉಜ್ಜಾರಿ ಹೃದಯಕ್ಕೆ.
ತಮಸ್ಸಿನಂತೆ ಕವಿದುಬಂದರೆ
ತಪ್ಪುವುದಿಲ್ಲ ಮೂಲಚ್ಛೇದ.
ಪ್ರಭಾತದಂತೆ ಕಣ್ಣು ತೆರೆದರೆ
ಪ್ರಸರಿಸುತ್ತದೆ ಜೀವನಾದ.
ಕತ್ತಲೆಗೆ ಮೈ ಉರಿಯುತ್ತದೆ
'ಕತ್ತಲು ?' ಎಂದು ಕರೆದರೆ.
ಅಜ್ಞಾನ ಗುಡುಗಿ ಬೀಳುತ್ತದೆ
'ಅಜ್ಞಾನ'ವೆಂದು ನಿಲ್ಲಿಸಿದರೆ.

ಸಹಸ್ರಕಿರಣ ಮುಖಗಳಿಂದ
ಸತ್ಯವನ್ನು ಪ್ರಬೋಧಿಸುವ ಕಾಂತಿಯನ್ನು
ಪಡುವಣದ ಮರಕ್ಕೆ ಬಂಧಿಸಿ
ಹರಿತ ಕತ್ತಲೆಮೊಳೆಗಳು ಇಳಿಸಿ
ಕಪ್ಪುಕಪ್ಪಾಗಿ ನಕ್ಕಿದೆ ಅಜ್ಞಾನ
ಹೊರಉಕ್ಕುವ ಮದದಿಂದ ಮತಿಭ್ರಮಿಸಿ.
ಅಲ್ಲಾಡಿ ಹೋಗಲಿಲ್ಲ ಕಾಂತಿ
ಆಕ್ರಂದಿಸಲಿಲ್ಲ ಶಾಂತಿ.
ಸುರಿದಿದೆ ಹಸಿನೆತ್ತರತೊಟ್ಟುಗಳು
ಕರುಣೆಗೆ ರೂಪಾಂತರದಂತೆ.
ನೆತ್ತಿಮೇಲೆ ಮುಳ್ಳು ಕಿರೀಟದಿಂದ
ನಿಲುವೆಲ್ಲ ನಾಟಿದ ಮೊಳೆಗಳಿಂದ

ತಣ್ಣಗೆ ನೋಡಿದೆ ಆ ಕಾಂತಿ
ಸಹನೆಯೆತ್ತಿದ ಅವತಾರದಂತೆ.
ಆ ಕಾಂತಿ ಬತ್ತಿ ಹೋಗಲಿಲ್ಲ ಮಣ್ಣಪೊರೆಗಳಲ್ಲಿ
ಆ ಕೊರಳು ಮೂಕವಾಗಲಿಲ್ಲ ಕತ್ತಲೆ ಧ್ವನಿಯಲ್ಲಿ.
ಅದು ಹೊಂದಿದೆ ಪುನರುತ್ಥಾನ.
ಅರುಣೋದಯ ಅಂಕುರಿಸುತ್ತಿರುವ ಕುದುರುಗಳಲ್ಲಿ.
ಆ ವಾಣಿ ಸ್ಪರ್ಶಿಸಿದೆ
ಆರ್ತರ ಗುಂಡಿಗೆಗಳನ್ನು ಅಭಯಹಸ್ತದಂತೆ.
ಆ ವಾಣಿ ತಣ್ಣಗಾಗಿಸಿದೆ
ದಾವಾಗ್ನಿಯಂಥ ದ್ವೇಷವನ್ನು ಅಮೃತವರ್ಷದಂತೆ.
ಅದು ನಿಂತಿದೆ ಚಪ್ಪರದಂತೆ
ವರ್ಣಾಹಂಕಾರಗಳ ಬಿಸಿಲಹೊಡೆತಗಳ ಮಧ್ಯೆ.
ಅದು ನಿಂತಿದೆ ಮಂದಿರದಂತೆ
ಅಜ್ಞಾನತಿಮಿರಗಳ ಪೆರ್ಬೊಬ್ಬೆಗಳ ಮಧ್ಯೆ.
ಬೀಜವನ್ನು ಮಣ್ಣಿನೊಳಕ್ಕೆ ಬಿಸಾಡಿದರೆ
ವೃಕ್ಷವಾಗಿ ಏಳುತ್ತದೆ ಅದು.
ಒಂದು ಬಾಯಿಯನ್ನು ಮಚ್ಚಿಸಬೇಕೆಂದು ನೋಡಿದರೆ
ಲಕ್ಷಕಂಠಗಳಾಗಿ ಮೊಳಗುತ್ತದೆ ಅದು.
ಅದು ಪ್ರಚಂಡ ಮೌನಘೋಷ
ಆರ್ದ್ರಹೃದಯ ಅದರ ಕ್ಷೇತ್ರ.
ಅದು ಸಾಗಿಹೋಗುತ್ತದೆ ನಿರಂತರ
ಆತ್ಮಸ್ಥೈರ್ಯ ಅದರ ಸೂತ್ರ.
ಉಜ್ಜಿಕೊಂಡ ಆಕಾಶದ ಕತ್ತಲಲ್ಲಿ
ಬೆಳಗುತ್ತದೆ ಮೆರುಗು ತಾರೆಯಂತೆ.
ಪೇರಿಕೊಂಡ ಮರಳುಗಾಡಿನ ದಿಬ್ಬಗಳಲ್ಲಿ
ಬೆಳೆಯುತ್ತದೆ ಗರಿಕೆ ಮೊಳಕೆಯಂತೆ.
ಕಾರಡವಿಗಳ ಗುಬುರುಪೊದೆಗಳಲ್ಲಿ
ಕದಲುತ್ತದೆ ಅದು ಪದಮುದ್ರಿಕೆಯಂತೆ.
ಆರ್ಭಟಿಸುವ ಕೋರೆಗಳ ಸೆಕೆಯಲ್ಲಿ
ಇರುತ್ತದೆ ಆಶ್ರಮವಾಟಿಕೆಯಂತೆ.

ದಾರಿತಪ್ಪಿದ ಕೂಸಿಗೆ
ತಾಯಿಯ ಮಡಿಲಿನಂಥದ್ದು.
ಬಿಸಿಗಾಳಿ ಉಗಿಯುವ ಬಾಯಿಗೆ
ಹಾಲಧಾರೆಯಂಥದ್ದು.
ಆ ತೇಜ ವಿಶ್ವಚರಿತೆಗೆ
ಅಭಿನವ ಭೂಮಿಕೆ.
ಆ ಜ್ಞಾನ ನವಮಾನವೀಯತೆಗೆ
ಅಖಂಡ ದೀಪಿಕೆ.

4

ಎಷ್ಟೆಷ್ಟು ಪ್ರಸ್ಥಾನಗಳು ಮನುಷ್ಯನಿಗೆ ?
ಎಷ್ಟೆಷ್ಟು ಪರಿಭ್ರಮಣಗಳು ಮನುಷ್ಯನಿಗೆ ?
ಅಷ್ಟರಲ್ಲೇ ನೊರೆಗಳ ಓಟ.
ಅಷ್ಟರಲ್ಲೇ ಚಲಿಸದ ಹೆಜ್ಜೆ.
ಯಾರು ತಾನು ?
ಯಾವ ಧಾತುಗರ್ಭದಿಂದ ಬೆಳೆದ ಮರ ?
ಹೇಗೆ ಹೊಂದಿಸಿಕೊಂಡಿವೆಯೋ
ಇಷ್ಟು ಮೊಳಕೆಯಲ್ಲಿ ಅಷ್ಟೊಂದು ಶಾಖೆಗಳು ?
ಹೇಗೆ ಉಡುಗಿಕೊಂಡಿವೆಯೋ
ಇಷ್ಟು ಬೀಜದಲ್ಲಿ ಅಷ್ಟು ಜೀವರೇಖೆಗಳು ?
ತರುವಿನಂತೆ ಬೆಳೆದ ಮನುಷ್ಯ
ತಿರಿಗಿನೋಡಿಕೊಳ್ಳುತ್ತಾನೆ ತನ್ನನ್ನು ತಾನು.
ಕವಿದು ಬರುತ್ತವೆ ಹರಿತ ಸ್ಮೃತಿಗಳು
ಮೊಳಕೆಯಿಂದ
ಕೊಂಬೆಗಳ ಚಪ್ಪರದವರೆಗೆ.
ತಾಯಿಮಡಿಲನ್ನೇ ಅನಂತ ವಿಶ್ವವೆಂದುಕೊಂಡು
ಸ್ತನ್ಯದೊಳಗೇ ಸಮಸ್ತ ಮಧುರಿಮಗಳನ್ನು ಪಡೆದುಕೊಂಡು
ಕೆಸರನ್ನು ಹಿಸುಕಿ
ಕೆನ್ನೆಗಳಿಗೆ ಬಳಿದುಕೊಂಡು
ಆಕಾಶದಲ್ಲಿನ ಚಂದಿರನನ್ನು
ಕನ್ನಡಿಯೊಳಕ್ಕೆ ಇಳಿಸಿಕೊಂಡು
ಕೋಲು ಕುದುರೆಯೇರಿ
ಕೋಟೆಗಾವುದ ತಿರುಗಾಡಿ
ಕಟ್ಟಿಗೆ ಪುಳ್ಳೆಗಳ ಹಿಡಿದು
ಕತ್ತಿವರಸೆ ಮಾಡಿ
ಬಾಲ್ಯಕುಲ್ಯಗಳನ್ನೀಜಿದ ಮನುಷ್ಯ
ಕನವರಿಸಿದನು ತನ್ನಲ್ಲಿ ತಾನು ಮರೆದು.

ಕಾಣಿಸಿದ ಸೊಗಸುಗಳೆಲ್ಲಾ
ಹೆಣ್ಣಾಗಿ ರೂಪಿಸಿಕೊಂಡು
ಹೆಣೆದುಕೊಂಡ ಸ್ವಪ್ನಗಳೆಲ್ಲಾ
ಆಕೃತಿಗಳಾಗಿ ನಿಲ್ಲಿಸಿಕೊಂಡು
ತಾಗಿದ ಹೂವಿನೆಸಳುಗಳೆಲ್ಲಾ
ತರುಣಿ ತುಟಿಗಳೆಂದುಕೊಂಡು
ಸೋಕಿದ ಗಾಳಿತರಂಗಗಳೆಲ್ಲಾ
ಸುರಭಿಳಶ್ವಾಸಗಳೆಂದುಕೊಂಡು
ಹೊರಟುಹೋಗುವ ಕಾಲವನ್ನು
ಪರಿಷ್ವಂಗದಲ್ಲಿ ಉಡಿಗಿಸಿಕೊಂಡು
ಪರವಶಿಸಿದ ಪ್ರತಿಕ್ಷಣವನ್ನು
ಸುರಾನುಭೂತಿಯಾಗಿ ಬಚ್ಚಿಟ್ಟುಕೊಂಡು
ಯೌವ್ವನ ಗಗನಗಳಂಟಿದ ಮನುಷ್ಯ
ನಗಾಡಿದ್ದಾನೆ ತನ್ನಲ್ಲಿ ತಾನು ಕುಣಿದು.

ಕಟ್ಟಿಕೊಂಡ ಬೆಳದಿಂಗಳ ಗೂಡಿನಲ್ಲಿ
ಸಂಸಾರವಿಟ್ಟು
ಬೆಳೆಸಿಕೊಂಡ ಮಮಕಾರದ
ಅಂಚುಗಳು ಮುಟ್ಟಿ
ಆಶಿಸಿದ ಸಂಪದದ
ಅಂದಗಳ ಮೇಲೆ ಮೆರವಣಿಗೆ ಮಾಡಿ
ಕೋರಿಕೊಂಡ ಅನುಭವಗಳನ್ನು
ಕಂಠಪೂರ್ತಿಕುಡಿದು
ಗೀಚಿದ ಗೆರೆ ಸಲ್ಲುತ್ತಿದ್ದರೆ
ಮೀಸೆಯ ಮೇಲೆ ಕೈಸಾಗಿ
ಹಾಕಿದ ಲಕ್ಷ್ಯಗಳು ಓಡುತ್ತಿದ್ದರೆ
ಬೆಳ್ಳಿಜುಟ್ಟುಮೆತ್ತಗೆ ತೂಗಿ
ಮುದಿತನವನ್ನು ತೊಟ್ಟುಕೊಂಡ ಮನುಷ್ಯ
ನಲಿದು ಸ್ವಗತಿಸಿ ಕೊಂಡಿದ್ದಾನೆ ತನ್ನಲ್ಲಿ ತಾನು ಹಿಗ್ಗಿ.

ಎಲ್ಲಿಯತನಕ ಈ ನಡಿಗೆ ?
ಈ ಹೆಜ್ಜೆಸಾಗುವತನಕ.

ಎಷ್ಟುದಿನ ಸಾಗುತ್ತದೆ ಈ ಹೆಜ್ಜೆ ?
ಎದುರಿಗೆ ಹಳ್ಳ ಬರುವ ತನಕ.
ಏನನ್ನುತ್ತದೆ ಆ ಹಳ್ಳ ?
ಎಳೆದುಕೊಳ್ಳುತ್ತದೆ ಅಗಾಧದತನಕ.
ಏನಾಗುತ್ತದೆ ಆಮೇಲೆ ?
ಇದು ಪ್ರಶ್ನೆಯಾಗಿ ಉಳಿದ ಪ್ರಶ್ನೆ.

ಎಷ್ಟು ಚೆನ್ನಾಗಿ ಮೆರುಗಿಟ್ಟೆ
ಈ ಚಿನ್ನದ ಪಂಜರಕ್ಕೆ ?
ಎಷ್ಟು ಮುತ್ತಿನ ಕಾಳನ್ನು ತಿನ್ನಿಸಿದೆ
ಈ ಪ್ರಾಣವಿಹಂಗಕ್ಕೆ ?
ಇದು ಉರುಳಿ ಹೋಗುವುದೇ ಕಣಿವೆಯೊಳಕ್ಕೆ ?
ಅದು ಹಾರಿಹೋಗುವುದೇ ಶೂನ್ಯದೊಳಕ್ಕೆ ?
ಮತ್ತೆ ಪ್ರಸವಿಸುವುದೇ ಶೂನ್ಯ
ಮತ್ತೊಂದು ಜನ್ಮಕ್ಕೆ ಬಳ್ಳಿಯಾಗಿ ಹಬ್ಬಿ.
ಮೃತ್ಯುವಿಗೆ ಪರಿಷ್ಕೃತಿ ಶೂನ್ಯವೇ ?
ಶೂನ್ಯಕ್ಕೆ ಆವಿಷ್ಕೃತಿ ಜನನವೇ ?
ಎಷ್ಟು ನದಿ ನೀರು ಕೂಡಿದರೂ
ಯಾವ ವಿಕೃತಿಯಿಲ್ಲ ಸಮುದ್ರಕ್ಕೆ.
ಎಷ್ಟು ಕಡೆ ಹೆಜ್ಜೆಯಿಟ್ಟರೂ
ಯಾವ ಕಶ್ಮಲ ಅಂಟುವುದಿಲ್ಲ ಇನಕಿರಣಕ್ಕೆ.
ಪಂಜರದಲ್ಲಿನ ವಾಸನೆಗಳು
ಪಕ್ಷಿಗೇಕೆ ಅಂಟುವುದಿಲ್ಲ ?
ಆಕೃತಿಯಲ್ಲಿನ ವಿಕಾರಗಳು
ಆತ್ಮಕ್ಕೇಕಂಟುವುದಿಲ್ಲ ?
ಕಾಣಿಸದಿರುವುದು ನಿತ್ಯವೇ ?
ಕಾಣಿಸುತ್ತಿರುವುದು ಮರ್ತ್ಯವೇ ?
ಯಾರು ಮಾಡಿದ ಸೃಷ್ಟಿ ಇದು ?
ಕಡೆಗೆ ಮೃತ್ಯುವೇ ಸತ್ಯವೆ ?
ನಿರಂತರ ಜೀವಯಾತ್ರೆ
ಮರಣಕ್ಕೆ ನೈಪಥ್ಯವೇ ?

ಎಲೆಗಳುದುರುವುದು ತಪ್ಪದೆಂದರೆ
ಅಂಕುರದಶವೇತಕ್ಕೋ ?
ಮರಣ ಬರುವುದು ತಪ್ಪದೆಂದರೆ
ಶರೀರಧಾರಣೆ ಏತಕೋ ?
ತೂತುಬಿದ್ದ ಮಡಕೆಯಲ್ಲಿ
ನೀರು ತರುವುದೇಕೆ ?
ಕೊಳೆತುಹೋಗುವ ಗೂಡಿನಲ್ಲಿ
ಜೀವಿ ಅಡಗುವುದೇಕೆ ?
ಯಾವ ಕತ್ತಿಯಿಂದ ಸೀಳಲಾಗದ್ದು
ಯಾವ ಕೆಂಡದಿಂದ ಸುಡಲಾಗದ್ದು
ಊದಿದರೆ ಹಾರುವ ಬೂದಿಗುಡ್ಡೆಯಲ್ಲಿ
ಉಡುಗಿ ಉಡುಗಿ ಇರುವುದೇತಕೆ ?
ಜನನವಿಲ್ಲದೆ ಸ್ಥಿತಿ ಇರುವುದೇ ?
ಗಮನವಿಲ್ಲದೆ ಗತಿ ಇರುವುದೇ ?
ಪಂಚಭೂತಗಳ ಪ್ರಸ್ತಾರಗಳಿಗೆ
ಮೀರಿದ ಪ್ರಕೃತಿ ಇರುವುದೇ ?
ಯಾವ ರೂಪವು ಇಲ್ಲದಿರುವುದಕ್ಕೆ
ಇಷ್ಟು ಬಿಡಿಬಿಡಿತೊಡುಗೆಗಳೇಕೆ ?
ಎಲ್ಲವೂ ತುಂಬಿರುವುದಕ್ಕೆ
ಗೂಡುಗೂಡಾಗಿ ನೆಲೆಗಳೇಕೆ ?
ಅಗ್ನಿಯಂಥದ್ದು ಒಳಗಿದ್ದರೆ
ಅಂಟುವುದೇ ಮೈಗೆ ಗೆದ್ದಲು ?
ಅಮೃತತ್ವ ಮೇಲೆ ಇದ್ದರೆ
ಅವನಿಗಿರುವುದೇ ಜೀವಭಯ ?

ದೇಹ ಒಂದು ಬುಗರಿ
ಇದನ್ನು ತಿರುಗಿಸುವುದು ಉಸಿರು.
ಯಾವಾಗ ನಿಂತುಹೋಗುತ್ತದೋ ಅದು
ಹೇಳುವವರು ಯಾರು ?
ದೇಹವನ್ನು ತಿರುಗಿಸದ ಪ್ರಾಣ
ಸೋಹಂ ಅನ್ನುವುದು ಯಾಕೆ ?

ತೆರೆಯಾಚೆ ನೋಡಲಾರದ ಮನುಷ್ಯ
ಪರತತ್ವ ಪ್ರವಚಿಸುತ್ತಾನೇತಕೆ ?
ಅಜ್ಞತೆಯನ್ನು ಮುಚ್ಚಿಹಾಕುವ
ಆಚ್ಛಾದನಗಳೇ ಇವು ?
ಅಶಕ್ತತೆಯನ್ನು ಮರೆಮಾಡುವ
ಅಭಿನಿರ್ತನಗಳೇ ಇವು ?
ಹೆಣೆದುಕೊಂಡ ಜೇಡರಬಲೆಗಳು
ಆಗುತ್ತವೆಯೇ ಸೌಧಗಳು ?
ಅಲೆಗಳೆತ್ತುವ ಬಿಸಿಲುಗುದುರೆಗಳು
ಆಗುತ್ತವೆಯೇ ಸಾಗರಗಳು ?
ಮೈಹಿಡಿದ ದೇಹಪ್ರೀತಿಗೆ
ಅರ್ಥವಾಗದ ಪ್ರಾಣಭೀತಿಗೆ
ಆಶ್ರಯಕೊಟ್ಟ ದಿವ್ಯಕಲ್ಪನೆ
ಅತಿಲೋಕಶಕ್ತಿಗಳ ಆರಾಧನೆ. . .

ಚಾಟಿಯ ತುದಿಗಳು 'ಛಳ್' ಅಂದಂತೆ
ನಾಗರಹಾವುಗಳು ಬುಸ್ಸೆಂದಂತೆ
ಬೆಚ್ಚಿಬಿದ್ದನು ಮನುಷ್ಯ
ಊಹಾಸ್ತಂಭ ಮುರಿದುಬಿದ್ದಂತೆ
ಹಾಸಿಕೊಂಡ ಚಾಪೆಯಮೇಲೆ ತಾನಿಲ್ಲ
ತಿರುಗುತ್ತಿರುವ ಚೆಂಡಿನ ಮೇಲೆ ಓಡುತ್ತಿದ್ದಾನೆ.
ಯಾವ ಅದೃಶ್ಯಹಸ್ತ ಎಸೆದ ಕಂದುಕವದು ?
ಎಂದೋ ವಿಮುಕ್ತವಾದ ಇನಖಂಡಿಕೆ ಅದು.
ಯಾವ ಕುದುರೂಯಿಲ್ಲದ ಗ್ರಹತಾರಕೆಗಳು
ಹೇಗೆ ಉಳಿದಿವೆ ?
ಕಾಣಿಸದ ಅಂತಸ್ಸೂತ್ರಗಳಲ್ಲಿ
ಕಟ್ಟುಬಿದ್ದಿವೆ.
ಪೊರೆಪೊರೆಗಳಾಗಿ ಅಗೆದುಕೊಳ್ಳುತ್ತಾ
ಪುರೋಗಮಿಸಿದೆ ಜಿಜ್ಞಾಸೆ.
ಎಷ್ಟೆಷ್ಟು ಸತ್ಯಗಳನ್ನು ಆಸ್ವಾದಿಸುತ್ತಿದ್ದರೂ
ಇನ್ನೂ ತೀರದ ಪಿಪಾಸೆ.

ಹಾರುವ ಹಕ್ಕಿಗಳನ್ನು ನೋಡುತ್ತಾ
ವರ್ಷಾಂತರಗಳಿಂದ ನಿಟ್ಟುಸಿರುಬಿಟ್ಟ ತಾನು
ಹಾರಿ ಹೋಗುತ್ತಿದ್ದಾನೆ ಗಗನವಾಟಿಕೆಗೆ
ಯಾವ ರೆಕ್ಕೆಯು ಪ್ರವೇಶಿಸದ ಗೂಡಿಗೆ.
ಹೊಳೆಯನ್ನು ದಾಟಬೇಕೆಂದರೆ
ಅಡಿಗಡಿಗೆ ಭಯಬೀಳುತ್ತಿದ್ದವನು
ಕಡಲಲೆಗಳ ಮನೆಗಳನ್ನು
ಮಲಗುವ ಕೋಣೆಗಳಾಗಿ ರೂಪಿಸಿಕೊಂಡಿದ್ದಾನೆ.
ಗಾಳಿಯಲ್ಲಿನ ಓಟವನ್ನು ಕಿತ್ತುಕೊಂಡು
ಚಲಿಸುವ ಚಕ್ರಗಳಿಗೆ ಅಂಟಿಸಿ
ಕಾಲಿನಮೇಲೆಕಾಲುಹಾಕಿಕೊಂಡು
ಲೀಲಾಜಾಲವಾಗಿ ಪಯಣಿಸುತ್ತಿದ್ದಾನೆ.
ಎಲ್ಲೋ ಚಿಗುರಿಸಿದ ಧ್ವನಿಯನ್ನು
ಎಷ್ಟೆಷ್ಟೋ ತಂತಿಗಳಾಗಿ ಹರಿಸಿ
ಶ್ರವಣಗಳ ಚಪ್ಪರಗಳಲ್ಲಿ
ಸೌರಭವನ್ನು ತುಂಬುತ್ತಿದ್ದಾನೆ.
ತೆರೆಯ ಹಿಂದೆ ಬೊಂಬೆಯಾಡಿಸುತ್ತಾ
ತಾಳಹಾಕಿಕೊಂಡ ತಾನು
ಮಾತನಾಡುವ ಮನುಷ್ಯರನ್ನು ತೆರೆಯ ಮೇಲೆ
ಬೆಳಕುನೆರಳುಗಳಾಗಿ ಆಡಿಸುತ್ತಿದ್ದಾನೆ.
ದೂರವನ್ನು ದೃಶ್ಯವಾಗಿ ಬದಲಿಸಿ
ದೃಶ್ಯಕ್ಕೆ ನಾದವನ್ನು ಕೂಡಿಸಿ
ಕಣ್ಣಮನೆಯೊಳಕ್ಕೆ ಸೇರಿಸಿ
ಸಂಸಾರ ಮಾಡಿಸುತ್ತಿದ್ದಾನೆ.
ಕ್ಷಣದಲ್ಲಿ ಬೆಳಗಿ ಆರುವ ಹೊಳಪುಗಳನ್ನು
ತನ್ನ ಅಂಗಣದಲ್ಲಿ ಪುನಸ್ಸೃಷ್ಟಿಮಾಡಿ
ಚೈತನ್ಯ ಶಕ್ತಿಯಾಗಿ ರಾಶಿಹಾಕಿ
ಚಾಕರಿ ಮಾಡಿಸುತ್ತಿದ್ದಾನೆ.
ಕಣ್ಣನೋಟಕ್ಕೆಟುಕದ
ಮೈಯಲ್ಲಿನ ಪೊರೆಗಳ ಆಳವನ್ನು
ಕಿರಣಗಳೇ ಚಿತ್ರನಯನಗಳಾಗಿ
ಪರಿಕಿಸಿ ನೋಡುತ್ತಿದ್ದಾನೆ.

ಯಂತ್ರವನ್ನೇ ಮತಿಯಾಗಿ ರೂಪಿಸಿ
ಮನುಷ್ಯನಿಗೆ ಪ್ರತಿಯಾಗಿ ನಿಲ್ಲಿಸಿ
ಆಲೋಚನೆಗಳಿಗೆ ಹೊಚ್ಚಹೊಸ
ಆಕೃತಿಗಳನ್ನು ಗೀಚುತ್ತಿದ್ದಾನೆ.
ಅವನಿಯ ಮೇಲೆ ಇರುತ್ತಲೇ ಕಣ್ಣನ್ನು
ಅಂತರಿಕ್ಷದೊಳಕ್ಕೆ ಕಳುಹಿಸಿ
ನಕ್ಷತ್ರಗಳ ನಾಡಿಯ ಜಾಡನ್ನು
ವೀಕ್ಷಿಸುತ್ತಿದ್ದಾನೆ.
ಕಾಣಿಸದ ಜೀವಾಣುಗಳ
ನಿಜರೂಪ ಬಯಲಿಗಿಟ್ಟು
ನೋಟಕ್ಕೆ ಊಹಿಸಲಾಗದ
ಸೂಕ್ಷ್ಮತೆಯನ್ನುಂಟುಮಾಡುತ್ತಿದ್ದಾನೆ.
ಮೃತ್ಯುವಿಗೂವ್ಯಾಧಿಗೂ ಇರುವ
ಸಖ್ಯವನ್ನು ಹಾಳು ಮಾಡಿ
ಆ ಎರಡಕ್ಕೆ ಮಧ್ಯೆ ಮತ್ತಷ್ಟು
ಅಖಾತ ಬೆಳೆಸುತ್ತಿದ್ದಾನೆ.
ಗಾಳಿಗೂಡಿನಲ್ಲಿ ಗಳಪೆಟ್ಟಿಗೆಯಲ್ಲಿ
ಮುಲುಗುವ ಅಕ್ಷರನಿಧಿಗಳನ್ನು
ಪ್ರತ್ಯಕ್ಷ ನಿಕ್ಷೇಪಗಳಾಗಿ
ಭದ್ರಪಡಿಸಿಕೊಂಡಿದ್ದಾನೆ.
ಹುಚ್ಚಾಗಿ ಓಟಕೀಳುವ ನದಿಗಳನ್ನು
ಪಳಗಿಸಿ ಹಿತ್ತಲಿನಲ್ಲಿಕಟ್ಟಿಹಾಕಿ
ಬೆಳೆಯಕೂಸುಗಳಿಗೆ ಹಾಲುಕೊಡುವ
ಗೋಮಾತೆಗಳಾಗಿ ರೂಪಿಸಿಕೊಂಡಿದ್ದಾನೆ.
ಅಗೋಚರವಾಗಿ ಬಿದ್ದಿರುವ
ಅಣುಗರ್ಭದಲ್ಲಿ ಅಡಗಿರುವ
ವಿಶ್ವತತ್ವವನ್ನು ಮುಷ್ಟಿಯಲ್ಲಿಬಿಗಿಸಿ
ಅಶ್ವಕ್ರೀಡೆಗಳಾಡುತ್ತಿದ್ದಾನೆ.

ಮನುಷ್ಯನ ತಲೆಯಲ್ಲಿ ಅಟ್ಟಹಾಸ
ಮಹೋದಧಿಯಾಗಿ ಗುಡುಗಿದೆ.

ಆರಡಿಯ ಶರೀರ ಬಾನುತಾಗಿ
ಅಹಂಕೃತಿಯಾಗಿ ಮೆರೆದಿದೆ.
ತನ್ನಪಾದ ಕಚ್ಚಿಕೊಂಡಿದೆ ಮಣ್ಣನ್ನು
ತನ್ನ ಮೂರ್ಧ ತಿವಿಯುತ್ತಿದೆ ಬಾನನ್ನು.
ಪಂಚಭೂತಗಳಿವೆ ತನ್ನಸುತ್ತಲೂ
ಸರದಿಗಾವಲು ಕಾಯುತ್ತಿರುವಂತೆ.
ಗಗನದಂತೆ ವಿಸ್ತರಿಸಿದ ಶಿರಸ್ಸಿನಲ್ಲಿ
ಗ್ರಹತಾರಕೆಗಳ ಬೃಂದಸ್ವರಗಳು.
ಯುಗಯುಗಗಳ ಶೂನ್ಯಫಲಕಗಳ ಮೇಲೆ
ಹಾರಿಬರುತ್ತಿರುವ ಸ್ಮೃತಿವಲಯಗಳು.
ಒಂದು ಪರಿಚಿತಕಂಠ
ಹೂಂಕರಿಸಿದ ಶಾಸನದಂತೆ.
ಧಿಕ್ಕರಿಸಿದ ಮತ್ತೊಂದು ಸ್ವರ
ಡಿಕ್ಕಿಹೊಡೆದ ಉದ್ರೇಕದಂತೆ.
ಅವೇ ಮಾತುಗಳು
ಅಕ್ಷರಶಃ ಅವೇಮಾತುಗಳು
ಆಗೆಂದೋ ತಾನಾಡಿದ ಹುಡುಗಾಟ.
'ಆದರೆ ಹೊರಟುಹೋಗು ಮಣ್ಣಿನ ಮನುಷ್ಯ
ಆ ಮಣ್ಣಿನೊಳಕ್ಕೆ'
'ಹಾಗೆಯೇ
ಹೋಗಿ ಉಕ್ಕಿಸುತ್ತೇನೆ ಆ ಮಣ್ಣನ್ನು
ಆಕಾಶಕ್ಕೆ'
'ಅಲ್ಲಿಯತನಕ ಬಂದಿದೆಯೇ ನಿನ್ನ ಅಹಂಕೃತಿ ?'
'ಅಲ್ಲಿಯೇ ಪ್ರಾರಂಭವಾಗುತ್ತದೆ
ಮಾನವಸಂಸ್ಕೃತಿ.'

ತಾನೀಗ ಬೆಲೂನಲ್ಲ
ಯಾವುದೋ ದಾರದ ಕೈಯಲ್ಲಿ ಹಾರುವ
ಗಾಳಿಪಟವಲ್ಲ.
ತನ್ನ ಕಣ್ಣುನುಡಿದರೇನೇ ಉದಯ
ತನ್ನ ಮನಸ್ಸು ಮುನಿದರೆ ಅಸ್ತಮಯ.

ತಾನೇ ಒಂದು ಚೈತನ್ಯವಾರಿಧಿ
ತಾನೇ ಅದಕ್ಕೆ ಕಟ್ಟಿದ ವಾರಧಿ.
ತನ್ನ ಜ್ಞಾನ ಸೃಷ್ಟಿಸಮಸ್ಯಾಪೂರಣ.
ತನ್ನ ಧ್ಯಾನ ಮೂಲರಹಸ್ಯಪ್ರೇರಣ.
ತನಗೆ ಗೊತ್ತು
ತಾನು ಬೆಳೆಸಿಕೊಂಡ ಮೂರುಬಣ್ಣದ ಗಿಳಿಯನ್ನು
ಒದೆದುಕೊಂಡು ಹೋಗುವುದಕ್ಕೆ
ಹಗಲಿರುಳು ಕೊಕ್ಕು ಮಸೆಯುತ್ತಿರುವ
ಆರು ಹದ್ದುಗಳಿವೆಯೆಂದು.
ತನಗೆ ಗೊತ್ತು
ತಾನು ಆಘ್ರಾಣಿಸುತ್ತಿರುವ ಐದು ಎಸಳ ಹೂವನ್ನು
ಬಿಸಾಡುವುದಕ್ಕೆ
ಅನುಕ್ಷಣ ಕಾಲಪ್ರಭಂಜನ
ಅಂಗಲಾಚುತ್ತಿದೆಯೆಂದು.
ಚೆಲುವೆಸಿಹಿ
ಸಂಪದಸಿಹಿ
ಉದರಸಿಹಿ
ಕೂಡಿ ಆಡುವ ನಿರಂತರ ನಾಟಕದಲ್ಲಿ
ತಾನುಹಾಕುವ ನಾಯಕಪಾತ್ರಕ್ಕೆ
ಕಡೆಗೆ ಉಳಿಯುವುವು
ನೀರಿನ ಸುಳಿಗಳೆಂದು.
ಅಣುವಿನಲ್ಲಿನ ಅವ್ಯಕ್ತಮೂರ್ತಿಯನ್ನು
ಅಜಾಂಡವಾಗಿ ನೋಡಿದ ತಾನು
ಗ್ರಹಗಳಲ್ಲಿ ಸುಪ್ತವಾಗಿ ಬಿದ್ದಿರುವ
ಗಾಳಿಯ ಇರವನ್ನು ತೂಗಿದ ತಾನು
ನೋಡಿಕೊಂಡನೆ ತನ್ನಲ್ಲಿನ ರೂಪ ?
ತಿಳಿದುಕೊಂಡನೆ ತನ್ನ ಮನಸ್ಸಿನ ತೂಕ ?
ಯಾವುದೋ ಪಾದ ತನ್ನ ಪಕ್ಕೆಯನ್ನು ತಾಗಿದರೆ
ಎಷ್ಟು ವಿಷ ಕಕ್ಕುತ್ತಾನೆ ?
ಯಾವುದೋ ಕೈ ತನ್ನ ಕೂದಲನ್ನು ತಗುಲಿದರೆ
ಎಷ್ಟು ಹೊಗೆ ಚಿಮ್ಮುತ್ತಾನೆ ?

ತನ್ನ ಹೊಲದಗಟ್ಟು ಸ್ವಲ್ಪ ಕಡಿದರೆ
ತಲೆಬುರುಡೆಗಳು ಒಡೆಯುತ್ತವೆ.
ತನ್ನ ಆಟದ ಬಯಲು ಸ್ವಲ್ಪ ಚೆದರಿದರೆ
ಅನುಬಂಧಗಳು ಕಡಿಯುತ್ತವೆ.
ಉಷಸ್ಸಿನಲ್ಲಿ ತಾನು ಗೀಚಿದ ಚಿತ್ರಗಳು
ಮುಸ್ಸಂಜೆಯಲ್ಲಿ ಮಸಿಯಿಡುತ್ತವೆ.
ಬಿಡಿಯಾಗಿ ತಾನುಕೆತ್ತಿನ ಸ್ವಪ್ನಶಿಲ್ಪಗಳು
ನಡುಬೀದಿತುಳಿತದಲ್ಲಿ ಚೂರಾಗುತ್ತಿವೆ.
ಮೌನದಲ್ಲಿ ಮಿಾಟಿಕೊಂಡ ಸ್ವರಸಂಪುಟಗಳು
ಮಹಾರ್ಣವ ಘೋಷದಲ್ಲಿ ಮುಳುಗಿಹೋಗುತ್ತಿವೆ.
ಪಯಣದಲ್ಲಿ ಕರೆಯುತ್ತಿರುವ ಮೈಲಿಗಲ್ಲುಗಳು
ಪಾದಗಳಿಗೆ ಪ್ರಶ್ನಾರ್ಥಕಗಳಾಗುತ್ತಿವೆ.

ಹತ್ತಿದ ಶಿಖರಗಳೇ ಅವು
ಈಗ ಮುಲುಗುತ್ತಿವೆ ಕಣಿವೆಗಳಂತೆ.
ಹಾರಿದ ಅಂಬರಗಳೇ ಅವು
ಈಗ ಮಡಚಿಕೊಂಡಿವೆ
ಇಕ್ಕಟ್ಟಾದಕೊಠಡಿಗಳಂತೆ.
ಹಾಕಿದ ಕೊನೆಕೇಕೆಗಳೇ ಅವು
ಕೇಳಿಸುತ್ತಿವೆ ಗುಬ್ಬಚ್ಚಿ ಕಂಠದಂತೆ.
ಮೇಲೆತ್ತಿದ ಕೈ ದೀವಟಿಗಳೇ ಅವು
ಬಿದ್ದಿವೆ ಸತ್ತಮಿಣುಕುಹುಳುಗಳಂತೆ.
ಕೊರಳನ್ನು ಮುದ್ದಾಡಿದ ಹೂಮಾಲೆಗಳು
ಕಚ್ಚುತ್ತಿವೆ ಯಾಕೆ ?
ಕೀರ್ತಿಯ ಸುತ್ತಲೂ ಓಡಾಡಿದ ದಂಡಕಗಳು
ಕೀಲುಗಳನ್ನು ಸುಲಿಯುತ್ತಿವೆ ಯಾಕೆ ?
ತನ್ನ ಅಂಗಣದಲ್ಲಿ ಬೆಳೆಯುತ್ತಿರುವ ನಾಯಿ
ತನ್ನ ಮೇಲೆರಗಿ ಬರುತ್ತಿದೆ ಯಾಕೆ ?
ಹಚ್ಚಗೆ ಬೆಳೆಸಿಕೊಂಡ ಮಲ್ಲಿಗೆಗಿಡ
ಹುಚ್ಚುಹೂವುಗಳನ್ನು ಮುಕ್ಕಳಿಸುತ್ತಿದೆ ಯಾಕೆ ?
ತಾನು ಪವಡಿಸುವ ಮೆತ್ತನೆಹಾಸಿಗೆ

ತನ್ನನೇ ಎತ್ತಿಬಿಸಾಡುತ್ತಿದೆಯೇಕೆ ?
ತಾನುಪೇರಿಸಿದ ಅಕ್ಷರಗಳ ಜೋಡಣೆ
ತನ್ನನ್ನೇ ತಪ್ಪುಹಿಡಿಯುತ್ತಿದೆಯೇಕೆ ?
ಇದು ತಾನೇರಿದ ಪೀಠವೇ —
ಯಾರನ್ನೋ ಹೊರುತ್ತಿದೆಯೇಕೆ ?
ಇದು ತಾನು ಕಲಿಸಿದ ಪಾಠವೇ —
ಯಾರನ್ನೋ ಸ್ಮರಿಸುತ್ತಿದೆಯೇಕೆ ?
ಏನಾಗಿದೆ ತನ್ನ ಕೈಯಲ್ಲಿನ ದಂಡ
ಯಾವ ಮಾಂತ್ರಿಕ ಪಳಗಿಸಿಕೊಂಡಿದ್ದಾನೆ?
ಏನಾಗಿದೆ ತನ್ನ ಆಜ್ಞಾಪತ್ರ
ಯಾವ ಅರ್ಭಕನು ಗಾಳಿಪಟವಾಗಿ ಮಾಡಿಕೊಂಡಿದ್ದಾನೆ ?

'ನನ್ನ ನೆರಳು ನನ್ನನ್ನೇ ಹಂಗಿಸುತ್ತಿದೆ
ನನ್ನಶವ ನನ್ನಕಡೆಯೇ ನಡೆದುಬರುತ್ತಿದೆ.
ಕಂಠದಲ್ಲಿ ನಾನು ಕುದುರಿಸಿದ ಸ್ವರ
ಗೂಬೆಯಾಗಿ ಎದುರುಬರುತ್ತಿದೆ.
ಇದು ನಾನು ಕಟ್ಟಿಕೊಂಡ ಕೋಟೆ
ಹೇಗೆ ಇರಿದುಕೊಂಡು ಬರುತ್ತಿವೆ ಗುಡಿಸಿಲುಗಳು ?
ಪ್ರಾಕಾರದಗೋಡೆ ಏನಾದಂತೆ
ಓಡಿಹೋಗಿದೆಯೆ ಉಟ್ಟಬಟ್ಟೆಯೊಂದಿಗೆ ?
ಬೇಲಿ ಎಲ್ಲಿ ಸತ್ತಹಾಗೆ
ಬೆರೆಸಿದೆಯೆ ಕೈಗಳು ಚಿತೆಯ ಉರಿಗಳೊಂದಿಗೆ ?
ಹೆಜ್ಜೆಯಿಟ್ಟ ಕಡೆಯೆಲ್ಲಾ
ಕೆಸರು ಚಿಮ್ಮಿಬರುತ್ತಿದೆ.
ಉಸಿರಾಡಿದಾಗಲೆಲ್ಲ
ಕಮರುಕಂಪು ಹೊಡೆಯುತ್ತಿದೆ.
ಏನು ಮಾಡಿಕೊಳ್ಳಲಿ ಈ ಬೆಳ್ಳಿತಟ್ಟೆ ?
ಯಾವ್ಯಾವುವೋ ಕ್ರಿಮಿಗಳು ಕದಲುತ್ತಿವೆ.
ಹೇಗೆ ಹಿಡಿದುಕೊಳ್ಳಲಿ ಈ ಮಧುಚಷಕ ?
ಯಾವುವೋ ವಿಕಟಸ್ಮೃತಿಗಳು ತುಳುಕುತ್ತಿವೆ.

ಕಡಿದುಹೋಗುತ್ತಿರುವ ಉಸಿರನ್ನು
ಅರ್ಧರ್ಧ ನುಂಗುತ್ತಿದ್ದೇನೆ.

ಬುರುಡೆಯಲ್ಲಿ ಹೋಳಾಗುತ್ತಿರುವ ಚೇಳು ಹೊಟ್ಟೆಗಳು.
ಹುಚ್ಚಾಗಿ ಬಡಿದುಕೊಳ್ಳುತ್ತಿರುವ ಎದೆ.
ಬೆರಳುಗಳಲ್ಲಿ ಸಿಕ್ಕಿಕೊಂಡ ಕೂದಲು.
ಕಾಲುಗಳನ್ನು ಸೆಲೆಯುತ್ತಿರುವ ಕೆಸರು.
ತಲೆಯನ್ನು ಸೀಳಿಹಾಕುವ ಕೇಕೆ
ಅಲೆ ಅಲೆಗಳಾಗಿ.
ಅಲೆಗಳ ನೊರೆಗಳ ಮೇಲೆ
ಅಚ್ಚಾಗುತ್ತಿರುವ ಅಕ್ಷರಗಳು
ಅವ್ಯಕ್ತವನ್ನು ಪ್ರಶ್ನಿಸುತ್ತಿರುವ ಆಕೃತಿಯಂತೆ.
ದೃಷ್ಟಿಗೆಟುಕದ ಸೃಷ್ಟಿಯಿದೆಯೇನೊ ?
ಸೃಷ್ಟಿಗೆಟುಕದ ದೃಷ್ಟಿಯಿದೆಯೇನೊ ?
ಮಾತಿಗೆಟುಕದ ಅರ್ಥವಿದೆಯೇನೊ ?
ಮನಸ್ಸಿಗೆಟುಕದ ಭಾವವಿದೆಯೇನೊ ?
ವ್ಯಕ್ತಿಯನ್ನು ಆವರಿಸುವ ಶಕ್ತಿಯಿದೆಯೇನೊ ?
ಶೂನ್ಯವನ್ನು ಚಿತ್ರಿಸುವ ಚೈತನ್ಯವಿದೆಯೇನೊ ?
ಇದ್ದಂತೇ ಇದೆ —
ತೂಗಿದೆ ಶಿರಸ್ಸು ಪರವಶಿಸಿ.
ಇದ್ದಂತೇ ಇದೆ —
ಮೊಳಗಿದೆ ಶರೀರ ಪ್ರತಿಸ್ಪಂದಿಸಿ.

ಅರೆಮುಚ್ಚಿದ ಕಣ್ಣುಗಳಲ್ಲಿ ಆವಿರ್ಭವಿಸುತ್ತಿವೆ
ಕಿರುನಗೆ ಕೆತ್ತಿಕೊಂಡ ಮುಖಗಳು
ವರಗಳು ಸುರಿಸುತ್ತಿರುವ ನೇತ್ರಗಳು
ಭಯವನ್ನು ಬೆದರಿಸುತ್ತಿರುವ ಹಸ್ತಗಳು
ಮುಕ್ತಿಗೆ ಮೂರ್ತಿಗಟ್ಟಿದ ಪಾದಗಳು.
ಕಲ್ಲುಗಳು ಹೂತುಕೊಳ್ಳುತ್ತಿವೆ
ಬಗೆಬಗೆಯ ಆಕಾರಗಳಿಂದ.
ಮರ ಕುದುರಿಕೊಳ್ಳುತ್ತಿದೆ

ಹೊಸ ಹೊಸ ರೂಪಗಳಿಂದ.
ದಿಕ್ಕುಗಳು ನಮನಗಳನ್ನು ಸ್ವೀಕರಿಸಿವೆ
ದೀಪಗಳು ವಿನತಿಗಳನ್ನು ಸ್ವೀಕರಿಸಿವೆ
ಅರ್ಚನೆಗಳನ್ನು ಸ್ವೀಕರಿಸಿವೆ ಅಸ್ಥಿಕಗಳು
ಆಲಯಗಳನ್ನು ಕಟ್ಟಿಕೊಂಡಿವೆ ಕೇಶಖಂಡಿಕೆಗಳು.
ಕಣ್ಣಿಗೊತ್ತಿಕೊಂಡಿದ್ದಾನೆ ತಾನು ತುಳಿದ ಮಣ್ಣನ್ನು.
ತಲೆ ಮೇಲೆ ಚೆಲ್ಲಿಕೊಂಡಿದ್ದಾನೆ
ತನ್ನ ಕಾಲುಗಳು ನಿಂತ ನೀರನ್ನು.
ಕೈಗಳೆತ್ತಿ ನಮಸಿಕೊಂಡಿದ್ದಾನೆ
'ಚಕಮಕಿ ಕಲ್ಲು' ಚಿಮ್ಮಿದ ಕೆಂಡವನ್ನು,
ತನ್ನ ಬದುಕಿಗೆ ಮುಡಿಹಾಕಿಕೊಂಡಿದ್ದಾನೆ
ತಾರಾಚಂದ್ರಾದಿಗಳ ಗತಿಗಳನ್ನು.
ಅಲಂಕರಿಸಿಕೊಂಡಿದ್ದಾನೆ ಕೊರಳಲ್ಲಿ
ಅಭಯಚಿಹ್ನೆಗಳನ್ನು.
ಬಳಿದುಕೊಂಡಿದ್ದಾನೆ ನೊಸಲ ಮೇಲೆ
ಆತ್ಮೀಯ ವಿಶ್ವಾಗಳನ್ನು.
ಮೇಲ್ಮೆಟ್ಟಿಲು ಹತ್ತಿಬಿಡಬೇಕೆಂದರೂ
ಹಗೆಯನ್ನು ತುಳಿದುಬಿಡಬೇಕೆಂದೂ
ಕಟ್ಟಿಕೊಂಡ ರಹಸ್ಯಗಳ ಮೂಟೆಗಳು
ಸಿಕ್ಕಿಬೀಳದಂತಿರಬೇಕೆಂದರೂ
ಮಳೆ ಬರಬೇಕೆಂದರೂ
ಪ್ರವಾಹ ಹೋಗಬೇಕೆಂದರೂ
ಗದ್ದೆ ಬೆಳೆಯಬೇಕೆಂದರೂ
ಮಡಿಲು ತುಂಬಬೇಕೆಂದರೂ
ಆ ಮನಸ್ಸಿಗೆ ಏಕೈಕ ಶರಣ
ಅತಿಲೋಕಶಕ್ತಿಗಳ ಸಂಸ್ಮರಣ.

ಸ್ಮರಣೆಯಲ್ಲಿಯೇ ನಿಂತುಹೋಗದ ಮನಸ್ಸು
ಪರಿಕ್ರಮಿಸಿದೆ ಬಹುಮುಖವಾಗಿ
ಕಾಣಿಸಿದ ಪ್ರತಿಕೈಗೂ
ತನ್ನ ನಂಬಿಕೆಯ ಗುಳಿಗೆಗಳನ್ನು ನೀಡುತ್ತಾ.

ಏನಿದೆಯೋ ಆ ಗುಳಿಗೆಗಳಲ್ಲಿ
ಏನಿದೆಯೋ ಆ ನುಡಿಗಳಲ್ಲಿ.
ಅಲೆಗಳೇಳುವ ಜ್ವಲನ್ಮತಿಗಳು
ನಿಂತುಹೋಗಿ ಕೇಳುತ್ತಿವೆ.
ಕಂಠೀರವಗಳ ಶಿರಸ್ಸುಗಳಲ್ಲಿ
ಕೋಲೆಬಸವಗಳು ಆಡಿಕೊಂಡಿವೆ.
ಉರಿಗಳುಗುಳುವ ಕಂಠಗಳಲ್ಲಿ
ಮಂಜುಗೆಡ್ಡೆಗಳು ಪೇರಿಕೊಂಡಿವೆ.
ಪ್ರಶ್ನೆಗಳು ನಾಟಿದ ಪಾತಿಗಳಲ್ಲಿ
ಪ್ರಾರ್ಥನೆಗಳು ಮೊಳಕೆಯೆತ್ತುತ್ತಿವೆ.
ಆಲೋಚನೆಗಳು ಚೆಲ್ಲಿದ ಬೀಜಗಳನ್ನು
ಅರ್ಚನೆಗಳು ಮರೆಮಾಡುತ್ತಿವೆ.
ತನ್ನ ಕಣ್ಣು ನೋಡಿದ್ದೇ ಬೆಳಕು.
ತನ್ನ ಕಾಲು ಹಾಕಿದ್ದೇ ಹೆಜ್ಜೆ.
ತಾನು ಧರಿಸಿದ್ದೇ ಸರಿಯಾದ ಪಾತ್ರ
ತಾನು ಕಂಡಿದ್ದೇ ನಿಜವಾದ ಪರಮಾತ್ಮ.
ಅದೇ ನಿಜವಾದರೆ ಇಷ್ಟು ಗೂಡುಗಳೇಕೆ ?
ಅಖಂಡಾತ್ಮಕದಲ್ಲಿ ಪೊರೆಗಳೇಕಿಷ್ಟು ?
ಕನಸಿನರೂಪ ಒಂದಾದರೆ
ಕಳವಳಗಳೇಕಿಷ್ಟು ?
ಮೂಲತತ್ತ್ವ ಒಂದಾದರೆ
ಮುಸುಕಗಳೇಕಿಷ್ಟು ?
ಪರಮಾರ್ಥ ಪ್ರವಚಿಸುವ ಲಕ್ಷ್ಯ
ನರಬಲಿಗಳಿಗೆ ದಾರಿಮಾಡುತ್ತದೆಯೇ ?
ಮಾನವತೆಯನ್ನು ಅನುಗಮಿಸುವ ಧ್ಯೇಯ
ಮನುಷ್ಯರನ್ನೇ ಬೇರೆ ಮಾಡುತ್ತದೆಯೇ ?
ಪ್ರೇಮಸಸಿ ಬೆಳೆಯಬೇಕೆಂದರೆ
ದ್ವೇಷವನ್ನು ಉಳುಮೆ ಮಾಡಬೇಕೇ ?
ಸಮತಾಜ್ಯೋತಿ ಬೆಳಗಬೇಕೆಂದರೆ
ಅಹಂತ ಕೆಂಡಕಾರಬೇಕೆ ?
ಇದು ತಿಳಿನೀರಲ್ಲ.

ಬರಿಕಸರ ಪ್ರವಾಹ.
ಇದು ಮನೋನಾದವಲ್ಲ
ಮತ್ತುಹಿಡಿದ ರೋದನ.
ಆದರ್ಶಗಳ ಪಾರಾಯಣವೇ ಇದು ?
ಅಸಮರ್ಥರ ಪಲಾಯನವೇ ಇದು ?
ಎಷ್ಟೆಷ್ಟು ನಂಬಿಕೆಗಳ ಏಣಿಯೇರಿದರೂ
ಇಲ್ಲೇ ನಿಂತಿದ್ದಾನೆ ಮನುಷ್ಯ.
ಎಷ್ಟೆಷ್ಟು ವಿಮುಕ್ತಿಪಥಗಳು ತುಳಿದರೂ
ಇಲ್ಲೇ ಕಟ್ಟುಬಿದ್ದಿದ್ದಾನ ಮನುಷ್ಯ.
ಬೆಟ್ಟದಂತೆ ಸಮಸ್ಯೆಗಳೆದುರಾದರೆ
ಗುಂಡಿಗೆಯನ್ನು ಮುಡುಪುಗಟ್ಟಿದರೆ ಹೇಗೆ ?
ಉಲ್ಕೆಯಂತೆ ಉಪದ್ರವಗಳು ಮೇಲೆರಗಿದರೆ
ಗಾಬರಿಬಿದ್ದು ಕೈಯೆತ್ತಿದರೆ ಹೇಗೆ ?
ನೆಲವನ್ನು ಉಳುಮಮಾಡುವವನಿಗೆ
ಧೂಳು ಅಂಟದಿದ್ದೀತೇ ?
ಶ್ರಮವನ್ನೇ ಪಣವಾಗಿಟ್ಟವನಿಗೆ
ಬೆವರಿಡಿಯದಿದ್ದೀತೆ ?
ಯಾವ ಗರಗಸದ ಕೊಯ್ಯಿಲಿಲ್ಲದಿದ್ದರೆ
ಹೇಗೆ ಹುಟ್ಟುತ್ತದೆ ವೇಣು ?
ಯಾವ ಉಳಿಯೇಟು ಬೀಳದಿದ್ದರೆ
ಹೇಗೆ ನುಡಿಯುತ್ತದೆ ಸ್ಥಾಣು ?

ಗುಹೆಯಿಂದ ಮಹಲಿನವರೆಗೆ
ನಡಿಗೆಯಿಂದ ರೋದಸಿನೌಕೆಯವರೆಗೆ
ಹಣತೆಯಿಂದ ವಿದ್ಯುದ್ದೀಪದವರೆಗೆ
ಅಂಬುವಿನಿಂದ ಅಣ್ವಸ್ತ್ರದವರೆಗೆ
ಪ್ರವಹಿಸಿದ ಸಂಸ್ಕೃತಿಗೆ ಮೂಲಹೇತು
ಮನುಷ್ಯನಲ್ಲಿ ವಿಕಸಿಸಿದ ವಿಜ್ಞಾನಧಾತು.
ತಾರೆಗಳನ್ನು ಲೆಕ್ಕಮಾಡುತ್ತಾ ಕುಳಿತರೆ
ಮುಗ್ಗಾರುಗಳು ಬೆಳೆಯುತ್ತಿರಲಿಲ್ಲ.
ಎಲ್ಲವೂ ಹಣೆಯಲ್ಲಿ ಬರೆದಿದೆಯೆಂದರೆ

ಯಂತ್ರಗಳು ನಡೆಯುತ್ತಿರಲಿಲ್ಲ.
ವಿಧಿಪರಿಧಿಯಲ್ಲಿ ಚಂಕ್ರಮಿಸುತ್ತಿದ್ದರೆ
ವಿವೇಕ ಬೆಳೆಯುತ್ತಿರಲಿಲ್ಲ.
ಸಂಕಲ್ಪ ನಡುಗಟ್ಟದಿದ್ದರೆ
ಚರಿತ್ರೆ ತಿರುಗುತ್ತಿರಲಿಲ್ಲ.
ಮನುಷ್ಯ ಜೀವನ
ಅನುಭವಾಂಕಿತ.
ಅದಲ್ಲ ಗಾಳಿಈಜು
ಅದಲ್ಲ ನೀರ ನೇತ.
ಹುಟ್ಟು ಸಾವುಗಳು
ಬದುಕಿಗೆ ಎರಡುದಡಗಳು.
ನಿತ್ಯಪ್ರಸ್ಥಾನ ತಪ್ಪುವುದೇ
ಮೃತ್ಯುತೀರ ತಲುಪುವ ತನಕ.
ಆಶೆಗಳ ದೀಪಸ್ತಂಭಗಳಿಗೆ
ನಿರಾಶೆಗಳು ಕೆಳನೆರಳುಗಳು.
ಸತ್ಯಗಳ ಜೀವವಾಹಿನಿಗಳಿಗೆ
ಸ್ವಪ್ನಗಳು ಬಣ್ಣದ ಗುಳ್ಳೆಗಳು.
ಆ ನೆರಳುಗಳಿಗೆ ಹೆದರಿಕೊಳ್ಳದೆ
ಆ ಗುಳ್ಳೆಗಳಿಗೆ ಭ್ರಮಿಸಿಹೋಗದೆ
ಸಾಗಿಹೋಗುತ್ತಾನೆ ಕಾಂತಿಲಹರಿಯಂತೆ
ಚೈತನ್ಯಕೇತನ ಮಾನವ.
ಆ ಬೆಳಕು
ಆಕಳಿಸುವ ಕಾಲಕ್ಕೆ ಚುಚ್ಚುಗೋಲು.
ಆ ಹೆಜ್ಜೆ
ನಿಂತುಹೋದ ಮಾರ್ಗಕ್ಕೆ ಬೇರೆತಿರುವು.

5

ಹೆಜ್ಜೆಸಾಗುತ್ತಿದೆ
ಕೆಸರಲ್ಲಿ ಅಡಗಿನ ಮುಳ್ಳುಗಳನ್ನು ತುಳಿಯುತ್ತಾ.
ಹಜ್ಜೆ ಸಾಗುತ್ತಿದೆ
ಅಡ್ಡವಾದ ಮಂಜುಗಡ್ಡೆಗಳನ್ನು ಕಕ್ಕಿಸುತ್ತಾ.
ಕಾಣಿಸುತ್ತಿವೆ ಹೆಜ್ಜೆಗಣ್ಣಿಗೆ
ಮನುಷ್ಯನ ತೊಗಲು ಹೊದೆದ ತೋಳಗಳು.
ಕೇಳಿಸುತ್ತಿವೆ ಹೆಜ್ಜೆಯಕಿವಿಗೆ
ಕಡಿಮುಹೋಗುತ್ತಿದ್ದರೂ ಅರಚಲಾರದ ಜಿಂಕೆಬಾಯಿಗಳು.
ಹೆಜ್ಜೆಯ ಎದೆಯಲ್ಲಿ ಉಕ್ಕಿದೆ
ಕಡಲನ್ನು ಮುಳುಗಿಸಿಬಿಡುವ ಕಣ್ಣೀರು.
ಹೆಜ್ಜೆಯ ಕಂಠದಲ್ಲಿ ಗುಡುಗಿದೆ
ಸಿಡಿಲನ್ನು ನುಂಗಿಬಿಡುವ ಊಳು.
'ಅಯ್ಯೋ ಮನುಷ್ಯ ?
ಅಹಂಕಾರದ ಬಣ್ಣದ ಕನ್ನಡಿಗಳನ್ನು
ಅಂತರಂಗಕೆ ತೊಟ್ಟುಕೊಂಡ ಮಸಿ !
ಕಪ್ಪು ಬಿಳುಪುಗಳ ಅಳತೆಯಿಂದ
ಬೆಲೆಕಟ್ಟುತ್ತಿರುವೆಯಾ ?
ಮಲ್ಲಿಗೆ ಹೂವಿಗೂ ಕಪ್ಪು ನೈದಿಲೆಗೂ
ಎಲ್ಲೆಗಳಿಡುತ್ತಿರುವೆಯಾ ?
ಯಾವ ಬಣ್ಣದ ಹಸುವಾದರೇನು ?
ಕೊಡುವ ಹಾಲು ಬಿಳುಪೆ.
ಯಾವ ಬಣ್ಣದ ತನುವಾದರೇನು ?
ಆ ರಕ್ತ ಕೆಂಪೆ.
ಗುಹೆಯಿಂದ ಹೊರಬಿದ್ದೆ
ಗುಡಿಯೊಳಕ್ಕೆ ನುಗ್ಗಿದೆ
ಧ್ಯಾನದಲ್ಲಿ ಜ್ವಲಿಸಿದೆ.

ಜ್ಞಾನವಾಗಿ ವರ್ಷಿಸಿದೆ.
ಐದು ರೂಪಗಳಾಗಿರುವ ಪ್ರಕೃತಿಯನ್ನು
ಆಲೋಕಿಸಿದೆ ಒಂದಾಗಿ.
ಐದು ಪಾದಗಳಾಗಿ ಸಾಗುವ ಶ್ರುತಿಯನ್ನು
ಆಲಾಪಿಸಿದೆ ಆತ್ಮಕೃತಿಯಾಗಿ.
ಯಾಕೆ ಒಳನುಗ್ಗಿದೆ ಇಕ್ಕಟ್ಟುದಾರಿ
ಈ ವಿಶಾಲ ಘಂಟಾಪಥದಲ್ಲಿ ?
ಯಾಕೆ ಏರ್ಪಟ್ಟಿದೆ ಉರಿಯುವ ಮರುಗಾಡು
ಈ ಶ್ಯಾಮಲ ಶಾರ್ದ್ವಲದಲ್ಲಿ ?
ಗುಡುಗುತ್ತಿರುವ ಅಡಿಯನ್ನು ನೋಡಿ
ಪರಿಹಸಿಸಿದೆ ವರ್ಣಾಹಂಕಾರ.
ಆ ಪ್ರಗತಿಯನ್ನು ಕಬಳಿಸಬೇಕೆಂದು
ಆವರಿಸಿದೆ ಶ್ವೇತಾಂಧಕಾರ.

ಯಾವಬಣ್ಣ ತಿಕ್ಕಿಕೊಂಡರೂ
ಎಂದಾದರೂ ಗೆದ್ದಿದೆಯಾ ಕತ್ತಲು ?
ಯಾವ ಶಾಸನ ನಿಷೇಧಿಸಿದರೂ
ಉದಯಿಸದಿರುವುದೆ ಕಿರಣಸಂಪುಟ ?
ಅಡಿ ಆಗ್ರಹಿಸಿ ಚಲಿಸಲು
ಕೆಸರು ಉಕ್ಕಿದೆ ಪ್ರವಾಹವಾಗಿ.
ಬಿಳಿಬಣ್ಣ ತಲೆಗೇರಿದ ಮೌಢ್ಯ
ತೇಲಿಹೋಗುತ್ತಿದೆ ಒಣಗರಿಕೆಯಂತೆ.
ಬಲೆಯಿಂದ ಹಿಡಿಯುವ ಮೀನೇ ಮನುಷ್ಯ ?
ಸರಪಳಿಯಿಂದ ಕಟ್ಟುವ ಮೃಗವೇ ಮನುಷ್ಯ ?
ಹತ್ಯೆ ತಿಳಿಯದ ಸತ್ಯವನ್ನೇ ಮರೆತೆಯಾ
ನಿತ್ಯವೂ ಶಿಲುಬೆಗೆ ನಮಿಸುವ ಮನುಷ್ಯ !
ಎಲ್ಲಿನದು ನೀನೇರಿದ ಆಸನ ?
ಯಾರದು ನೀನು ಪಠಿಸುವ ಭಾಷಣ ?
ಸಹಮನುಷ್ಯನ ಮೇಲೆ ಸವಾರಿ ಮಾಡುತ್ತಲೇ
ಸಾರುತ್ತಿರುವೆಯಾ ಪ್ರೇಮಶಾಸನ ?
ಹೋರಟುಹೋಗುತ್ತಿರುವ ಎಡುರಿಲ್ಲದ ಆ ಹೆಜ್ಜೆ

ದಾಸ್ಯಗ್ರೀಷ್ಮತಪ್ತರಿಗೆಯಿಡಿದ ಕೊಡೆ.
ಸಾಮ್ಯವನ್ನು ಪ್ರಸರಿಸಿದ ಆ ಹೆಜ್ಜೆ
ಸ್ವಾಮ್ಯವನ್ನು ಪ್ರತಿಘಟಿಸಿದ ಮೊದಲನುಡಿ.

ಆ ನುಡಿ ಅಕ್ಷರಲ್ಲಿಯೇ ನಿಂತಿದೆಯಾ ?
ಅದು ಸಾಗಿದೆ ಸ್ವೇಚ್ಛೆಗೆ ಉಸಿರಾಗಿ.
ದುರುಗುಟ್ಟಿನೋಡುತ್ತಿರುವ ಬೇಲಿಗಳನ್ನು ಉನ್ಮೂಲಿಸುತ್ತಾ
ಪರಿಕ್ರಮಿಸಿದೆ ಝುಂಝಾ ಲಹರಿಯಂತೆ.
ಕಪ್ಪನೆ ಹೆಗಲಮೇಲೆ ಇಳಿದಿದೆ
ಬೆಳ್ಳನೆ ಕೈ ಪಾರಿವಾಳದಂತೆ.
ದೌರ್ಜನ್ಯವನ್ನು ಬುಡಮೇಲು ಮಾಡಿ ಎದ್ದಿದೆ
ಸೌಜನ್ಯ ಗೋಪುರದಂತೆ.
ಲಕ್ಷ ಕೈಗಳು ಬೆಳೆಸುವ ಧಾನ್ಯ
ಒಂದು ಮನೆಯಲ್ಲಿ ಹರಡಿಕೊಂಡರೆ.
ಕೋಟ್ಯಂತರ ಬೆವರ ಹನಿಗಳು ಸುರಿಯುವ ಮೌಲ್ಯ
ಒಂದು ಹಿಡಿಯಲ್ಲಿ ಅಡಗಿರುವ
ಅಪ್ಪಟವಾದ ಸೌಜನ್ಯ
ಸತ್ತಹೆಣದಂತೆ ಬಿದ್ದಿರುತ್ತದೆಯೆ ?
ರೇಗಿದ ರಕ್ತ ಘೋಷದಿಂದ
ಬೆಂಕಿರೆಕ್ಕೆಗಳು ಚಾಚದಿರುತ್ತದೆಯೆ ?
ಕೊಟ್ಟರೆ ಮಾತ್ರ ತೆಗೆದುಕೊಳ್ಳುವ ಕೈ
ಮುಷ್ಟಿಯೆತ್ತಿ ಕೇಳದಿರುತ್ತದೆಯೆ ?
ಬೈಯುತ್ತಿದ್ದರೂ ಸುಮ್ಮನಿರುವ ಬಾಯಿ
ಸಿಡಿಲಿನಂತೆ ಪ್ರಶ್ನಿಸದಿರುತ್ತದೆಯೆ ?
ಯಾವ ಮನೀಷಿ ಶಿರದಲ್ಲೋ
ಮೊಳಕೆಹೊಡೆದ ಸಾಮ್ಯವೇದ
ಯಾವ ಮನಸ್ವಿ ಲೇಖನಿಯಲ್ಲೋ
ಹಾರಿ ಬಂದ ಕ್ರಾಂತಿನಾದ
ದಿಕ್ಕುಗಳ ಸಿಕ್ಕುಗಳನ್ನು ಬಿಡಿಸಿ
ದೇಶಗಳ ಗೆರೆಗಳನ್ನು ಅಳಿಸಿ
ಒಳನುಗ್ಗದಿರುವುದೇ

ದೀಪ್ತಮತಿಗಳ ನರಗಳಲ್ಲಿ.
ಉರಿಬಿಚ್ಚಿಕೊಳ್ಳುವುದೇ ?
ಚಿರಪೀಡಿತರ ದನಿಗಳಲ್ಲಿ.
ಆ ನರಗಳಲ್ಲಿ ಮುಳುಗಿದ ಮುಲುಕುಗಳಿಗೆ
ಆ ದನಿಗಳಲ್ಲಿ ಮುತ್ತಿದ ಮೂರ್ಛನಗಳಿಗೆ
ತನ್ನ ಗುಂಡಿಗೆಯನ್ನು ಗರ್ಜಿಸುವ ಸಂದ್ರವಾಗಿ ಬದಲಿಸಿ
ತನ್ನ ಕಂಠವನ್ನು ಘೋಷಿಸುವ ಯಂತ್ರವಾಗಿ ರೂಪಿಸಿ
ನುಗ್ಗಿ ಬರುತ್ತಿದ್ದಾನೊಬ್ಬ
ವಿಕ್ರಾಂತಿನೇತಾರ
ಅಳಿಸಿ ಹೋಗುತ್ತಿದೆ
ಗತಕಾಲ ಗೀಚಿದ ಗೆರೆ.

ಅದು
ಉಗ್ರಚೇತನ ತರಿಸಿದ
ಉದಗ್ರ ಭೂಕಂಪ.
ಕಾಲಶಿಖರ ಧುಮುಕಿಸಿದ
ಜ್ವಾಲ ಜಲಪಾತ.
ನಡುಕ ಹುಟ್ಟಿದೆ
ಹೂತುಹೋದ ವಜ್ರದುರ್ಗಗಳಿಗೆ.
ಬೆವರಿಡಿದಿದೆ
ಬಿಗಿಯಾದ ಕಟ್ಟು-ಕಟ್ಟಳೆಗಳಿಗೆ.
ಕೋಲೆ ಬಸವಗಳ ಕೊಂಬುಗಳಲ್ಲಿ
ಕತ್ತಿ ಮೊನೆಗಳು ಮೆರೆಯುತ್ತಿವೆ.
ಗೋಮಾತೆಗಳ ಗೊರಸುಗಳಲ್ಲಿ
ಕುಡುಗೋಲ ಅಂಚುಗಳು ನಡೆಯುತ್ತಿವೆ.
ಕಡಿದು ಹೋಗುತ್ತಿರುವ ಕಂಡಗಳು
ಹಾರುತ್ತಿವೆ ಬಾವುಟಗಳಾಗಿ.
ಒಡೆದುಹೋಗುತ್ತಿರುವ ಹೃದಯಗಳು
ಮೇಲೆ ಬೀಳುತ್ತಿವೆ ಅಗ್ನಿಕುಂಡಗಳಾಗಿ.
ಮೇಲೆತ್ತಿದ ಆ ಕೈಗಳಲ್ಲಿ
ಕಂಠನಾಳ ಕಡಿದ ಬೇಡಿಗಳು.

ಕದಲಲು ಬಿಡದ ಆ ಬೀದಿಗಳಲ್ಲಿ
ಪಥಚಲನೆ ಮಾಡಿದ ಹಿಡಿಗಳು.
ಕಟಕಟೆಗಳಂತೆ ಅಡ್ಡನಿಂತ
ಕಗ್ಗತ್ತಲ ಗುಡ್ಡಗಳನ್ನು ಸೀಳಿಕೊಂಡು
ಉರುಳಿಬರುತ್ತಿರುವ ಹೊತ್ತಿನುದಯಗಳು.
ಕಣ್ಣೀರ ಹನಿಗಳಲ್ಲಿ
ಬೆವರ ತುಂತುರುಗಳಲ್ಲಿ
ಥಳಥಳಿಸುತ್ತಿರುವ
ದಿನಕರ ಬಿಂಬಗಳು.
ಅಂಧಕಾರದ ಗದ್ದುಗೆಯನ್ನು ಉನ್ಮೂಲಿಸಿದೆ
ತೆರಳಿ ತೆರಳಿ ಹೋಗುತ್ತಿರುವ
ಅರುಣ ಕಿರಣ ಪಟಲಗಳು.
ಚೆಲ್ಲಿದ ಬೆವರ ಬಿಂದುಗಳಿಗೇ
ಎಟುಕಿದ ಸಸ್ಯ ಫಲಗಳು.
ಪರಿಶ್ರಮಿಸಿದ ಶರೀರಗಳಿಗೇ
ಪ್ರಾಪ್ತಿಯಾದ ನಿತ್ಯಸುಖಗಳು.
ಮೂಲೆಗೆ ಬಿದ್ದಿವೆ ಬಿಚ್ಚುಕೊರಡೆಗಳು
ಮೂಕವಾಗಿವೆ ಹುಚ್ಚುಚಟಗಳು.
ತೊಲಗಿ ಹೋಗಿವೆ ವರುಷ ವರುಷಗಳಿಂದ
ತಲೆಗೆ ಏರಿದ ಕರಿಮದ್ದು ಜ್ವರದೆಗಳು.
ಬೆಳಕಿಗೆ ಮುಡುಪು ಕಟ್ಟಿದ ನೋಟಗಳು
ಭೂತಲ ಸ್ವರ್ಗವನ್ನು ನೋಡುತ್ತಿವೆ.
ಅದೃಷ್ಟ ರೇಖೆಗಳನ್ನು ತಡವಿಕೊಳ್ಳುವ ಕೈಗಳು
ಆಶಿಸಿದ ಭವಿತವ್ಯವನ್ನು ಬೆಳೆಸುತ್ತಿವೆ.
ಚಕ್ರಗಳನ್ನೂ ಕಾನೂನುಗಳನ್ನೂ ತಿರುಗಿಸಿದ ಹಸ್ತ
ಕಾವ್ಯಸೃಷ್ಟಿಯನ್ನು
ಶಾಸ್ತ್ರದೃಷ್ಟಿಯನ್ನು
ವಿಸ್ತರಿಸಿದ ಮಸ್ತಕ
ಹಂಚಿಕೊಂಡ ಬೆಲೆ ಒಂದೇ
ಬೆಳೆಸಿಕೊಂಡ ಗೌರವ ಒಂದೇ.

ಸಮತೆಯನ್ನು ಸಾಧಿಸುವ ಆ ಹೆಜ್ಜೆ
ನಿಂತುಹೋಗದು ಒಂದು ಎಲ್ಲೆಗೆ.
ಸಾಗಿಹೋಗುತ್ತಲೇ ಇರುತ್ತದೆ
ಸರಹದ್ದುಗಳನ್ನು ದಾಟಿ ಮುಂದುಮುಂದಕ್ಕೆ.
ಮೌನವೇ ನಿನದವಾಗಿ
ಮಂದಹಾಸವೇ ಮಹಾಸ್ತ್ರವಾಗಿ
ಸಹನೆಯೇ ಕವಚವಾಗಿ
ಶಾಂತವೇ ಪ್ರವಚನವಾಗಿ
ನಿರಾಡಂಬರವಾಗಿ ಸಾಗುವ ಆ ಹೆಜ್ಜೆ
ಗಿರೀಂದ್ರಗಳ ತಲೆಗಳ ಬಗ್ಗಿಸಿದೆ.
ನಿಶ್ಶಬ್ದವಾಗಿ ಮೊಳಗುವ ಆ ಹೆಜ್ಜೆ
ನೀರಧಿಗಳನನು ಅನುವದಿಸಿದೆ.
ಉಪ್ಪುಕಂಠದಲ್ಲಿ ಧ್ವನಿಸಿದೆ
ಕೆಂಡದಂಥ ಸ್ವರ.
ಕದರು ನರಳಾಟದಲ್ಲೂ ಕೇಳಿಸಿದೆ
ಕದನ ಶಂಖಾರವ.
ಉಜ್ವಲಿಸಿದೆ ಕೋಟಿ ಹೃದಯಗಳಲ್ಲಿ
ಒಂದೇ ಮಾತೃಮೂರ್ತಿ.
ಉಕ್ಕಿಬಂದಿದೆ ಕೋಟಿ ಕಂಠಗಳಲ್ಲಿ
ಒಂದೇ ಧಾತ್ರಿಗೀತೆ.
ಎಲ್ಲ ದಿಕ್ಕುಗಳು ಹಾರುತ್ತಿವೆ
ಒಂದೇ ಪತಾಕೆಯಾಗಿ
ಎಲ್ಲ ಕಣ್ಣುಗಳು ಹೆಣೆದುಕೊಂಡಿವೆ
ಒಂದೇ ಪ್ರತೀಕವಾಗಿ.
ಗುಂಡಿಗೆಗಳು ಸವಾಲು ಮಾಡುತ್ತಿವೆ
ತುಪಾಕಿ ಗುಂಡುಗಳನ್ನು.
ತಲೆಗಳು ಪ್ರತಿಭಟಿಸುತ್ತಿವೆ
ಲಾಠಿಗಳ ಮೊನೆಗಳನ್ನು.
ಹಿಮ್ಮಡಿಗಳು ಪ್ರವಹಿಸುತ್ತಿವೆ
ಸೆರೆಮನೆಗಳು ತುಳುಕುವಂತೆ
ಕೊರಳುಗಳು ಪರಿಕ್ರಮಿಸುತ್ತಿವೆ

ನೇಣುಗಂಬಗಳು ಅರಗುವಂತೆ.
ಎಲ್ಲಿನವು ಈ ತರಂಗಗಳು ?
ಅದೆಷ್ಟೆಷ್ಟು ಬಣ್ಣಗಳ ವಿಹಂಗಗಳು ?
ಉಕ್ಕುತ್ತ ನಡೆಯುತ್ತಿವೆ
ನಡೆಯುತ್ತ ಹಾರುತ್ತಿವೆ
ಮುದುರಿಹೋದ ಸಂದಿಗಳಿಂದ
ಹಾಸಿಕೊಂಡುಹೋದ ರಹದಾರಿಗಳಿಂದ.
ಯಾವ ಗುಡಿಸಲು ಕಳುಹಿಸಿದವುಗಳೋ ಇವು ?
ಯಾವ ಗುಡಿಗಳು ಮಂತ್ರಿಸಿದವುಗಳೋ ಇವು ?
ಯಾವ ಮಹಲುಗಳು ಅರ್ಪಿಸಿದವುಗಳೋ ಇವು ?
ಯಾವ ಮಮತೆಗಳು ಹರಿಸಿದವುಗಳೋ ಇವು ?

ನಿನ್ನೆಯ ಮಣ್ಣಿನ ಹೆಂಟೆಗಳೇನಾ
ಇಂದು ಉರಿಯುತ್ತಿರುವ ವಿಸ್ಫುಲಿಂಗಗಳು.
ನಿನ್ನೆಯ ಹುಲ್ಲು ಪೊರಕೆಗಳೇನಾ
ಇಂದು ಏಳುತ್ತಿರುವ ಧ್ವಜಸ್ತಂಭಗಳು.
ನಿನ್ನೆಯ ಮೇಷ ಕಂಠಗಳೇನಾ
ಇಂದು ಗರ್ಜಿಸುತ್ತಿರುವ ಕಂಠೀರವಗಳು.
ನಿನ್ನೆಯ ಅರಳೆ ಪುಂಜಗಳೇನಾ
ಇಂದು ಪ್ರತಿಘಟಿಸುತ್ತಿರುವ ಲೋಹ ಬಾಹುಗಳು.
ಮಂಕುಗೊಂಡಿದೆ —
ತನ್ನ ಸೀಮೆಯಲ್ಲಿ ಅಹರ್ನಿಶಿಗಳು
ಸೂರ್ಯನನ್ನು ಕಟ್ಟಿಹಾಕಿಕೊಂಡ ದೊರೆತನ.
ತತ್ತರಿಸಿದೆ —
ತನ್ನ ದೊಡ್ಡಸ್ಥಿಕೆಯನ್ನು ಆಯುಧಗಳಲ್ಲಿ
ಕಂಠಪೂರ್ತಿ ತುರುಕಿಕೊಂಡ ದೊರೆತನ.
ನಡುಕ ಹುಟ್ಟಿದೆ
ಕೊಬ್ಬೇರಿದ ಕರಗಳಿಗೆ.
ಕೊಂಪೆ ಮುಳುಗಿದಂತಾಗಿದೆ
ಸುವಿಶಾಲ ಸಾಮ್ರಾಜ್ಯತೀರಗಳಿಗೆ.
ಇಷ್ಟುಕಣಜಗಳ ತುಪಾಕಿಮದ್ದು

ಹಾರಿಹೋಯಿತೆ
ಒಂದು ತೆಳು ಬಡಕಲು ನಿಶ್ವಾಸದೆದುರು.
ಇಷ್ಟು ಅಂತಸ್ತುಗಳ ಬುನಾದಿ ಕಲ್ಲುಗಳು.
ನೆಗೆದು ಬಿದ್ದವೆ
ಒಂದು ಕಪಟವಿಲ್ಲದ ವಿಶ್ವಾಸದೆದುರು.

ಅದು ಅಪೂರ್ವೋದಯ
ಅರ್ಧರಾತ್ರಿ ಉಷೋದಯ
ಹಾರಿದೆ ಮೂರುಬಣ್ಣಗಳಿಂದ
ಎದುರು ನೋಡುತ್ತಿರುವ ಭಾನು ಹೃದಯ.
ನದಿನದಗಳ ತುಟಿಗಳ ಮೇಲೆ
ಚಲಿಸುವ ವಿಮುಕ್ತ ರಾಗಿಣಿಗಳು.
ಗಿರಿಪದಗಳಲ್ಲಿ
ಪುರಪಥಗಳಲ್ಲಿ
ಪರವಶಿಸುವ ಉತ್ಸಾಹವಾಹಿನಿಗಳು.
ಕುಣಿದಾಡುವ ಯಂತ್ರಾಲಯಗಳು
ಶಿರಸ್ಸುಗಳು ತೂಗುವ ಸಸ್ಯಾಲಯಗಳು
ಪುಳಕಿಸುವ ಮನೆಗಳು
ಉಕ್ಕೇಳುವ ಅಂಗಡಿಗಳು
ಸ್ವಚ್ಛಂದಚ್ಛಂದದಂಥ
ಸತ್ಕವಿತಾಸ್ಪಂದದಂಥ
ಸಂರಂಭದಲ್ಲಿ ನೆನೆದು
ಸಂತೃಪ್ತಿಯಾಗಿ ತುಂಬಿತುಳುಕಿ
ಹೆಜ್ಜೆ ಪ್ರಸ್ಥಾನಿಸಿದೆ
ಬುವಿಯ ತುಂಬಾ ಉಷಸ್ಸುಗಳನ್ನು ಮುದ್ರಿಸುತ್ತಾ.
ಕಟ್ಟುಬಿದ್ದ ನಾಲಿಗೆಗಳ ಮೇಲೆ
ಕ್ರಾಂತಿಭಾಷೆಗಳ ಆವಿಷ್ಕರಿಸುತ್ತಾ.

ಹೆಜ್ಜೆ ತಿರುಗಿ ನೋಡಿಕೊಂಡಿದೆ.
ಅನಂತವಾಗಿ ಪ್ರವಹಿಸುತ್ತಿರುವ ಚರಿತ್ರೆಯಲ್ಲಿ
ತನ್ನ ಮುದ್ರೆಗಳೆಷ್ಟೆಂದು ?

ತಾನು ತಿರುಗಿಸಿದ ತಿರುವುಗಳೆಷ್ಟೆಂದು ?
ಆ ಮುದ್ರೆಗಳು ತನ್ನವೇ
ಆ ಬೆರಳ ಸಂದಿಗಳಲ್ಲಿ ಹುಚ್ಚುಗೆರೆಗಳೇನು ?
ಆ ತಿರುವುಗಳು ತನ್ನವೇ
ಆ ಮೂಲೆಗಳಲ್ಲಿ ಮುಸುರಿಕೊಂಡ ನೆತ್ತರ ನೆರಳುಗಳೇನು ?
ತಾನು ಸವರಿದ ಪಾರಿವಾಳಗಳೆಲ್ಲಿ ?
ತಲೆಯೆತ್ತಿ ನಿಗುರುತ್ತಿವೆ ರಣಹದ್ದುಗಳು.
ತಾನು ನೆಟ್ಟ ಹೂಗಿಡಗಳೆಲ್ಲಿ ?
ತಲೆಗಳು ಬಲಿತು ನಿಂತಿವೆ ಮುಳ್ಳುಬೇಲಿಗಳು.

'ಮನುಷ್ಯಾ ! ಎಲ್ಲಿ ನೀನೆಲ್ಲಿ ?
ನೆಲದಿಂದ ಬಾನಿಗೆ ಚಿಮ್ಮಿ ಬರುತ್ತಿರುವೆಯಾ ?
ನಿರ್ಮಿಸಿಕೊಂಡ ಅಹಂಕಾರಗಳ ಪ್ರಾಕಾರಗಳು
ಮಣ್ಣುಮುಕ್ಕುತ್ತಿದ್ದರೆ
ನಿಟ್ಟುಸಿರಿನ ಶಿಥಿಲಗಳ
ಹಿಡಿದುಕೊಂಡು ನೇತಾಡುತ್ತಿರುವೆಯಾ ?
ಪರಮಾಣುಗಳ ಶಿರಸ್ಸುಗಳಲ್ಲಿ ಒಳಹೊಕ್ಕು
ಪರಿಕಿಸಿದ ಸತ್ಯಗಳ ಪರಮಾವಧಿ
ವಿನೂತನ ಚೈತನ್ಯಸೃಜನವೇ ?
ವಿಶ್ವಗೋಳ ವಿಧ್ವಂಸನವೇ ?
ಎಷ್ಟುಹಸಿರಾಗಿ ಬೆಳಗುತ್ತಿದೆ
ಇಷ್ಟುದಿನ ನೀನು ಬೆಳೆಸಿದ ಸಂಸ್ಕೃತಿ
ಸಹಮಾನವ ಹನನದಲ್ಲಿ
ಸಮಜೀವನ ದಹನದಲ್ಲಿ;
ಅದೇಸ್ವರ ಅದೇಸ್ವರ
ಅಧಿಕಾರವಾಗಿ ಪ್ರತಿಧ್ವನಿಸುತ್ತಾ
ಮನುಷ್ಯನಲ್ಲಿನ ಸಂಕಲ್ಪ ಮೂಲವನ್ನು
ಮತ್ತೆಮತ್ತೆ ಎತ್ತಿ ಚುಚ್ಚುತ್ತಾ.
ಮನುಷ್ಯ ಚಲಿಸಲಿಲ್ಲ
ಮೌನವನ್ನು ವರ್ಷಿಸಿದ.


ಮಾತಿಗೆಟುಕದ ಶ್ರುತಿಯಲ್ಲಿ
ಮನಸ್ಸಿನಿಂದ ಘೋಷಿಸಿದ.

ಇದು ನಿತ್ಯ ಪ್ರಸ್ಥಾನ
ಏರಿಳಿತಗಳು ತಪ್ಪವು.
ಇದು ನಿತ್ಯಪ್ರಯೋಗ
ಎದಿರೇಟುಗಳು ತಪ್ಪವು.
ಮಸಣದ ದಿಬ್ಬಗಳ ಸುತ್ತಲೂ
ಊರುಗಳ ಸಂಸಾರಗಳು.
ಮರಳು ಉರಿಯುವ ಮರುಭೂಮಿಯ ಸುತ್ತಲೂ
ಹಸಿರು ಬೆಳೆಯುವ ಖುಷ್ಕಿಭೂಮಿ.
ಮಾರಣ ಧೂಮವನ್ನು ಊದಿಬಿಡುವ
ಜೀವನ ಪವನಗಳು.
ಮರಣಶಾಸನವನ್ನು ಇರಿದುಬರುವ
ನಿತ್ಯ ಶಿಶೂದಯಗಳು.
ಎಲೆಗಳು ಉದುರಿಹೋದರೇನು ?
ಚಿಗುರೆಲೆಗಳು ಹುಟ್ಟವೆ ?
ನೀರು ಇಂಗಿಹೋದರೇನು ?
ನೀಲಿ ಮೋಡಗಳು ಹೆಪ್ಪುಗಟ್ಟವೆ ?
ಅಲೆಗಲು ಚಲಿಸಿದಾಗಲೇ
ಜಲಕ್ಕೆ ಉದ್ದೀಪನ.
ರಕ್ತ ಪಸರಿಸಿದಾಗಲೇ
ನರಗಳಿಗೆ ಉಜ್ಜೀವನ.
ಅಣುವಿನಿಂದ ಅಂತರಿಕ್ಷಕ್ಕೆ
ಅಂಬರದಿಂದ ಅವನಿತಲಕ್ಕೆ
ಅನುಭೂತಿಯಿಂದ ಆಕೃತಿಗೆ ?
ಅದೃಶ್ಯದಿಂದ ಅಭಿವ್ಯಕ್ತಿಗೆ
ಜರುಗುತ್ತಿರುವ ಅವಿರಳ ಶೋಧನೆಯಿದು.
ಜಾರಿಬೀಳುತ್ತಿದ್ದರೂ
ಮೆಟ್ಟಿಲು ಮೆಟ್ಟಿಲಾಗಿ
ಆರೋಹಿಸುತ್ತಿರುವ ಸಾಧನೆಯಿದು.

ಯಾವ ಮುಸ್ಸಂಜೆಗಳು ಕವಿದುಕೊಂಡರೂ
ಆ ಮನಸ್ಸು ಕಾಂತಿ ಚಕ್ಷುವೆ.
ಯಾವ ಮಂಜುಗಡ್ಡೆಗಳು ಪೇರಿಕೊಂಡರೂ
ಆ ಮೇಧ ಜ್ವಲನ ಧಾತುವೆ.
ಆ ಕಣ್ಣನ್ನು ಕಬಳಿಸಬೇಕೆಂದು
ಆ ಕಾಂತಿಯನ್ನು ಹರಿಸಬೇಕೆಂದು
ತಮಸ್ಸು ಬಲೆ ಹೆಣೆದಾಗ
ಮನಸ್ಸು ಆಯತಪ್ಪಿದಾಗ
ಆಲೋಚನೆ ಆಯುಧವಾಗಿ
ಅಂತಶ್ಚೇತನ ಆಲಂಬನವಾಗಿ
ಪುರೋಗಮಿಸುತ್ತಾನೆ ಮನುಷ್ಯ
ಪರಿಸರಗಳ ಮೇಲೆ ನೆಗೆದು
ಎರಡು ದಡಗಳನ್ನು ಉಜ್ಜಿಕೊಳ್ಳುತ್ತಾ
ಹಗಲಿರುಳುಗಳನ್ನು ಹೊತ್ತುಕೊಳ್ಳುತ್ತಾ
ಎದೆಯಲ್ಲಿನ ನೀರಿನ ಸುಳಿಗಳನ್ನು
ತುಂಬು ನಗೆಯಾಗಿ ರೂಪಿಸಿಕೊಳ್ಳುತ್ತಾ.

ಉರಿದುಬೀಳುವ ಗ್ರೀಷ್ಮದಲ್ಲಿ
ಮೋಡದ ಕನಸುಗಳು ನಾರು ಬಿಟ್ಟುಕೊಳ್ಳುತ್ತಾ
ಕುಂಭವೃಷ್ಟಿಪಾತದಲ್ಲಿ
ಬೆಟ್ಟಗಳನ್ನು ಸೀಳಿಕೊಳ್ಳುತ್ತಾ
ಸಾಗಿಹೋಗುವ ಪ್ರವಾಹ
ಸಾವಿಲ್ಲದ ಜೀವನ.
ಹೆಜ್ಜೆ ನೆಲದ ಮೇಲೆ ಊರುತ್ತಲೇ
ಆಕಾಶದ ಅಂಚುಗಳನ್ನು ತಟ್ಟುತ್ತಾ
ರೆಕ್ಕೆಗಳೆರಡರಿಂದ ಈಜುತ್ತಲೇ
ದಿಕ್ಕುಗಳೆಲ್ಲವನ್ನು ಕಡೆಯುತ್ತಾ
ಸಾಗಿಹೋಗುವ ಜೀವನ
ತಿರುಗಿ ನೋಡದ ಚಿರಪಥ.
ಋಷಿತ್ವಕ್ಕೂ ಪಶುತ್ವಕ್ಕೂ
ಸಂಸ್ಕೃತಿಗೂ ದುಷ್ಕೃತಿಗೂ

ಸ್ವಚ್ಛಂದತೆಗೂ ನಿರ್ಬಂಧತೆಗೂ
ಸಮಾರ್ದ್ರತೆಗೂ ರೌದ್ರತೆಗೂ
ಮೊದಲಬೀಜ ಮನಸ್ಸು
ತುಲಾರೂಪ ಮನಸ್ಸು.
ಮನಸ್ಸಿಗೆ ತೊಡಿಗೆ ಮನುಷ್ಯ
ಮನುಷ್ಯನಿಗೆ ಉಡಿಗೆ ಜಗತ್ತು.
ಇದೇ ವಿಶ್ವಂಭರಾ ತತ್ತ್ವ
ಇದೇ ಅನಂತಜೀವಿತ ಸತ್ಯ.



ಮಾರ್ಕಂಡಪುರಂ ಶ್ರೀನಿವಾಸ

ಡಾ. ಸಿ. ನಾರಾಯಣ ರೆಡ್ಡಿ ಅವರ 'ವಿಶ್ವಂಭರಾ' ಜ್ಞಾನಪೀಠ ಪ್ರಶಸ್ತಿ ಪಡೆದ ಸಮಗ್ರಕಾವ್ಯ. ಅವರು ತೆಲುಗಿನ ಬಹು ಜನಪ್ರಿಯ ಕವಿ. ಅವರ ಕವಿತೆಗಳನ್ನು ಹಾಡುಗಳನ್ನು ಕೇಳದ ತೆಲುಗರಿಲ್ಲ. ದಕ್ಷಿಣ ಭಾಷೆಗಳಲ್ಲಿ ಇಷ್ಟು ಜನಪ್ರೀತಿ ಪಡೆದ ಕವಿಗಳು ತೀರ ತೀರ ಕಡಿಮೆ. ತೆಲುಗು ಬಹು ಹಿತ ವಾದುದು. ಅದು ಮೃದು-ಮಧುರ ಶಬ್ದಾರ್ಥಗಳಿಂದ ಸಂಪುಷ್ಟಗೊಂಡದ್ದು. ತೆಲುಗು ಕಾವ್ಯಭಾಷೆಯು ಕೋಮಲ-ಸುಕೋಮಲ ಭಾವಗಳನ್ನು ಅದ್ಭುತವಾಗಿ ಪ್ರಕಟಗೊಳಿಸುತ್ತದೆ. ಡಾ. ಸಿ. ನಾರಾಯಣ ರೆಡ್ಡಿ ಅವರ ಕವಿತೆಗಳು ಭಾವನಾತ್ಮಕ ಬಂಧಗಳಿಂದ ಕೂಡಿ, ಗೇಯತೆಯ ನೆಲೆಯಿಂದ ಹೃದ್ಯಗೊಳ್ಳುತ್ತವೆ. ಶ್ರೀ ಮಾರ್ಕಂಡಪುರಂ ಶ್ರೀನಿವಾಸ ೧೯೯೨ರಲ್ಲಿ ಈ ಸಂಕಲನವನ್ನು ಸಿದ್ಧಪಡಿಸಿ ಹೊರತಂದಿದ್ದರು. ಮರಳಿ ಈಗ ಪುಸ್ತಕ ಪ್ರಾಧಿಕಾರವು ಪುನರ್ಮುದ್ರಣದ ಆವೃತ್ತಿಯನ್ನು ಹೊರತರುತ್ತಿದೆ. ಶ್ರೀ ಮಾರ್ಕಂಡಪುರಂ ಶ್ರೀನಿವಾಸ ತೆಲುಗು ಮತ್ತು ಕನ್ನಡವನ್ನು ಬಲ್ಲವರು. ಅವರು ತೆಲುಗು ಗೇಯತೆಯ ಮಾಧುರ್ಯಕ್ಕೆ ಮನಸೋತವರು. ಅವರ ಅನುವಾದವು ಎರಡು ಭಾಷೆಗಳ ಕವಿತೆಯ ನೇಯ್ಗೆಯ ಸೂಕ್ಷ್ಮತೆಯಲ್ಲಿ ಹದಗೊಂಡಿದೆ. ಡಾ.ಸಿ.ನಾರಾಯಣ ರೆಡ್ಡಿ ಅವರು ಕನ್ನಡದ ಕನ್ನಡಿಯಲ್ಲಿ ಮಾರ್ಪೊಳೆದಿದ್ದಾರೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು

ISBN 81-7713-088-9

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು